
ಅಚಲ



ಮಾರ್ಚ್ 8, 1986 ಜಾಗೃತ ಮಹಿಳಾ ಅಧ್ಯಯನ ಕೇಂದ್ರ ಬೆಲೆ : 2–50

ಸಂಪುಟ 1 ಸಂಚಿಕೆ 1

'ಅಚಲ'ಪತ್ರಿಕೆಯನ್ನು ಪಡೆಯಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹತ್ತು ರೂಪಾಯಿಗಳನ್ನು ಎಂ.ಓ./ಡ್ರಾಫ್ಟ್ ಮೂಲಕ ಕಳುಹಿಸಿ.

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
221, 4ನೇ ಮೇನ್, ವೈಯಾಳಿಕಾವಲ್,
ಬೆಂಗಳೂರು–560 003.

ಕಲೆ : ಧನಲಕ್ಷ್ಮಿ
ಪ್ರಸಾರ ವ್ಯವಸ್ಥೆ : **ಎನ್. ಶಾಂತಾ**

ಚಂದಾ ವಿವರ

ವಾರ್ಷಿಕ ಚಂದಾ : **10 ರೂ.**
ಬಿಡಿ ಪ್ರತಿ : **1–50 ರೂ.**
ವಿಶೇಷ ಪ್ರತಿ : **2–50 ರೂ.**

Printed at ILA Printers 153 4th Main, 8th cross, Chamarajapet, Bangalore-18 and published by Dr. G Ramakrishna on behalf of Jagruthi Mahila Adhyayana Kendra, 221, IV Main, Vyalikaval, BANGALORE-3

Editor: **N. Gayathri**

'**ಅಚಲ**'ದಲ್ಲಿ ಪ್ರಕಟವಾಗುವ ಲೇಖನಗಳು ನಿಮ್ಮನ್ನು ಚರ್ಚೆಗೆ ಆಹ್ವಾನಿಸುವುದಕ್ಕಾಗಿ.–ನೀವು ಸಕ್ರಿಯವಾಗಿ ಚರ್ಚೆಯಲ್ಲಿ ಭಾಗವಹಿಸುವುದಕ್ಕಾಗಿ. ಲೇಖಕರ ಅಭಿಪ್ರಾಯಗಳು ಪತ್ರಿಕೆಯ ಅಭಿಪ್ರಾಯಗಳೂ ಆಗಿರಬೇಕೆಂಬುದಿಲ್ಲ.

* * *

ಮಹಿಳಾ ಪ್ರಶ್ನೆಯ ವಿಶ್ಲೇಷಣೆಗೆ
ಮಹಿಳಾ ಚಳುವಳಿಗೆ ಆಸರೆಯಾಗಿ
ಮಹಿಳಾ ಸಮಸ್ಯೆಗಳ ಚರ್ಚೆಗೆ ವೇದಿಕೆಯಾಗಿ
ಅಚಲ

ಪ್ರಿಯ ಸಂಗಾತಿ,

ಕಳೆದ ವರ್ಷ ಅಂತರರಾಷ್ಟ್ರೀಯ ಮಹಿಳಾ ದಿವದಂದು 'ಸಂಗಾತಿ'ಯೆಂಬ ನಾಮಧೇಯದಿಂದ ಬಿಡುಗಡೆಯಾದ ಈ ದ್ವೈಮಾಸಿಕ ನಂತರ 'ಪ್ರಿಯಸಂಗಾತಿ'ಯಾಗಿ, ಈ ಅಂತರರಾಷ್ಟ್ರೀಯ ಮಹಿಳಾ ದಿನದಂದು **'ಅಚಲ'** ಎಂಬ ನೂತನ ನಾಮಧೇಯದೊಂದಿಗೆ ಹೊರಬರುತ್ತಿದೆ. ಹೊಸ ಭರವಸೆಗಳನ್ನು ಕಟ್ಟಿಕೊಂಡು, ಹಿರಿದಾದ ಜವಾಬ್ದಾರಿಗಳನ್ನು ಹೆಗಲಿಗೇರಿಸಿಕೊಂಡು ಅರ್ಥಪೂರ್ಣ ಮಹಿಳಾ ಚಳುವಳಿಗೆ ವೇದಿಕೆಯಾಗುವ ಉದ್ದೇಶದಿಂದ ಹೊರಟಿದೆ.

ಎಪ್ಪತ್ತೆಂಟು ವರ್ಷಗಳ ಹಿಂದೆ ಹೆಚ್ಚಿನ ವೇತನಕ್ಕಾಗಿ, ತಮ್ಮ ದುಡಿಮೆಯ ಸ್ಥಿತಿಗತಿಗಳನ್ನು ಉತ್ತಮಗೊಳಿಸಬೇಕೆಂಬ ಬೇಡಿಕೆಯೊಡನೆ ಬೀದಿಗಿಳಿದ ಚಿಕಾಗೋ ನಗರದ ಧೀರ ಮಹಿಳೆಯರು ಮಹಿಳಾ ಹೋರಾಟಕ್ಕೆ ದಿಕ್ಸೂಚಿಯಾಗಿದ್ದಾರೆ.. ಮಹಿಳೆಯರೆಲ್ಲಾ ತಮ್ಮ ತಮ್ಮ ಹಕ್ಕು ಮತ್ತು ಕರ್ತವ್ಯಗಳ ಬಗ್ಗೆ ಜಾಗೃತರಾಗಿ ಹೋರಾಟ ನಡೆಸಿ ಅವನ್ನು ಪಡೆಯಬೇಕೆಂಬ ಅಮೂಲ್ಯ ಸಂದೇಶವನ್ನು ಜಗತ್ತಿಗೇ ಸಾರಿದ ಈ ಘಟನೆ ವಿಶ್ವ ಮಹಿಳಾ ದಿನದ ನಾಂದಿ. 'ಮಹಿಳಾ ದಿನಾಚರಣೆ' ಮಹಿಳೆಯರು ತಮ್ಮನ್ನು ಬೃಹತ್ ಸಮುದಾಯದಿಂದ ಪ್ರತ್ಯೇಕಿಸಿಕೊಳ್ಳುವ ತಂತ್ರ ಕೀಳರಿಮೆಯ ಪ್ರತೀಕ–ಎಂದು ಕುಹಕವಾಡುವವರು ಇಲ್ಲದಿಲ್ಲ. ಸ್ತ್ರೀತ್ವವಾದಿಗಳಿಗೆ ಸಮಾನತೆಗಾಗಿ ಹೋರಾಡುವ ಪ್ರಾಮುಖ್ಯತೆಯಾಗಿ ಈ ದಿನ ಕಂಡುಬಂದರೆ, ಬೃಹತ್ ಶೋಷಿತ ವರ್ಗದ ಹೋರಾಟದ ಒಂದು ಭಾಗವಾಗಿರುವ ಮಹಿಳಾ ಸಮುದಾಯಕ್ಕೂ ಇದು ಅತ್ಯಂತ ಮಹತ್ವಪೂರ್ಣವಾದ ದಿನ. ಶತಮಾನಗಳಿಂದ ಆವರಿಸಿರುವ ಅಜ್ಞಾನಾಂಧಕಾರವನ್ನು ಕೊಡವಿ ತನ್ನ ಪರಿಸ್ಥಿತಿಯ ಬಗ್ಗೆ ಜಾಗೃತಳಾಗಿ ಹೊಸ ಪ್ರಜ್ಞೆ ಮೂಡಿಸಿಕೊಳ್ಳಬೇಕಾದದ್ದನ್ನು ನೆನಪಿಸುವ ದಿನ. ಆಗ ಮಾತ್ರ ಅವಳು ಕೇವಲ ತನ್ನ ಮಹಿಳಾ ಹಕ್ಕುಗಳಿಗಾಗಿ ಮಾತ್ರ ಹೋರಾಡದೆ, ಸಮಾಜದ ಎಲ್ಲರಿಗೂ ದಕ್ಕಬೇಕಾದ ಎಲ್ಲ ಹಕ್ಕು ಮತ್ತು ಸವಲತ್ತುಗಳಿಗಾಗಿ ಹೋರಾಡುವ ಹಿರಿಯ ಜವಾಬ್ದಾರಿ ಹೊರಬಲ್ಲಳು.

ಜಗತ್ತಿನಾದ್ಯಂತ ಆಚರಿಸಲ್ಪಡುವ ಈ ಮಹಿಳಾ ದಿನವನ್ನು ಭಾರತದ ಮಹಿಳೆಯರು ಕಳೆದ ಹಲವಾರು ವರ್ಷಗಳಿಂದ ಆಚರಿಸುತ್ತಾ ಬಂದಿದ್ದಾರೆ. ಆದರೆ ಇದು ಕೇವಲ ವಾರ್ಷಿಕ ಆಚರಣೆಯಾಗಿ ಉಳಿದಿರುವ ಸಂದರ್ಭಗಳೇ ಹೆಚ್ಚು. ಸ್ವಹಿತ ಸಾಧಕ ಪುರುಷರಿಂದ ರಚಿತವಾದ ಕಾನೂನು ಕಟ್ಟಳೆಗಳ ಬಿಗಿಮುಷ್ಟಿಯಲ್ಲಿ ನರಳುತ್ತಿರುವ ಮಹಿಳೆಗೆ ತನ್ನ ಹಕ್ಕು ಮತ್ತು ಕರ್ತವ್ಯಗಳ ಬಗೆಗಿನ ಅರಿವಿಲ್ಲ. ಕೂಲಿ ಹೆಣ್ಣಿಗೆ ತನಗುಂಟಾಗಿರುವ ವೇತನ ತಾರತಮ್ಯದ ಬಗೆಗೆ ತಿಳುವಳಿಕೆಯಿಲ್ಲ. ವೈಯಕ್ತಿಕ ಕಾನೂನುಗಳಿಂದಾಗುವ ಅನ್ಯಾಯದ ಅರಿವಿಲ್ಲ. ಅಡಿಗೆ, ತಾಯ್ತನ ಮತ್ತು ಗೃಹಕೃತ್ಯದ ಚಾಕರಿಯಷ್ಟರಲ್ಲೇ ಸವೆದು ಸುಣ್ಣವಾಗಿರುವ ಹೆಂಗಸರಿಗೆ ಅದರಿಂದ ಹೊರಬರಬೇಕೆಂಬ, ಸ್ವತಂತ್ರ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕೆಂಬ ಪ್ರಜ್ಞೆಯಾಗಲೀ, ಹಾದಿಯಾಗಲೀ ಗೊತ್ತಿಲ್ಲ. ಅವರ ಈ ದೌರ್ಬಲ್ಯವನ್ನು ಬಂಡವಾಳ ಮಾಡಿ

ಅಂತರರಾಷ್ಟ್ರೀಯ ಮಹಿಳಾ ದಿನ

ಎಪ್ಪತ್ತೊಂಬತ್ತು ವರ್ಷಗಳ ಹಿಂದೆ 1907ರ ಮಾರ್ಚ್ 8ರಂದು ಚಿಕಾಗೋ ನಗರದಲ್ಲಿ ಒಂದು ಮೆರವಣಿಗೆ. ಆರು ನೂರಕ್ಕೂ ಹೆಚ್ಚಿನ ಮಹಿಳೆಯರು ಘೋಷಣೆಗಳನ್ನು ಕೂಗಿಕೊಂಡು ಬೀದಿಗಿಳಿದರು. ಸಿದ್ಧ ಉಡುಪುಗಳ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ ಈ ಮಹಿಳೆಯರು ತಮಗೆ ಹೆಚ್ಚಿನ ವೇತನ ಮತ್ತು ಎಂಟು ಗಂಟೆಗಳ ದುಡಿಮೆಯಷ್ಟೇ ಸಾಕು–ಎಂಬ ಬೇಡಿಕೆಗಳೊಡನೆ ಹೋರಾಟ ನಡೆಸಿದ್ದರು. ದುಡಿಮೆಯ ರಂಗದಲ್ಲಿ ತಮಗೆ ದಕ್ಕಬೇಕಾದ ಸವಲತ್ತುಗಳ ಬಗ್ಗೆ ಪ್ರಜ್ಞಾವಂತರಾಗಿ ಹೋರಾಟ ನಡೆಸಿದ ಮಹಿಳೆಯರ ಈ ಹೋರಾಟದ ಘಟನೆಯನ್ನು ಗೌರವಿಸಿ ಜಗತ್ತಿನ ಹಲವಾರು ಮಹಿಳೆಯರು ಮಾರ್ಚ್ 8 ರಂದು ಮಹಿಳಾದಿನವನ್ನು ಆಚರಿಸುತ್ತಿದ್ದಾರೆ.

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ಯೂರೋಪ್‌ನ ರಾಷ್ಟ್ರಗಳಲ್ಲಿ, ಅಮೇರಿಕಾ, ರಷ್ಯಾ ಮುಂತಾದೆಡೆಗಳಲ್ಲೆಲ್ಲಾ ಪ್ರಜ್ಞಾವಂತ ಮಹಿಳೆಯರ ಚಟುವಟಿಕೆಗಳು ತೀವ್ರವಾಗಿದ್ದವು. ಮತದಾನದ ಹಕ್ಕನ್ನು ಕುರಿತಂತೆ ಹೋರಾಟ ನಡೆಸಬೇಕೆಂಬುದು ಯೂರೋಪಿನ ಬಹಳಷ್ಟು ಮಹಿಳೆಯರ ಬೇಡಿಕೆಯಾಗಿತ್ತು. 'ಫೆಮಿನಿಸ್ಟರು' ಜರ್ಮನ್ ಡೆಮೊಕ್ರಟರು, ರ್ಯಾಡಿಕಲ್ ಫೆಮಿನಿಸ್ಟರು ಪ್ರೊಲಿಟೇರಿಯನ್ ಮಹಿಳೆಯರು–ಎಂದು ಮಹಿಳೆಯರು ಹಲವಾರು ಗುಂಪುಗಳಾಗಿ ಹಂಚಿಹೋಗಿದ್ದರು. ಪುರುಷರು ತಮ್ಮ ಬೇಡಿಕೆಗಳಿಗಾಗಿ ಹೋರಾಟ ನಡೆಸಲಾರರೆಂದು ಅಮೇರಿಕಾ ಮತ್ತಿತರ ದೇಶಗಳಲ್ಲಿ ಮಹಿಳೆಯರಿಗೇ ಪ್ರತ್ಯೇಕವಾದ ಕಾರ್ಮಿಕ ಸಂಘಟನೆಗಳು ಹುಟ್ಟಿಕೊಳ್ಳಲಾರಂಭಿಸಿದವು. ಈ ಎಲ್ಲ ಹಿನ್ನೆಲೆಯಲ್ಲಿ ಮಹಿಳೆಯರೂ ತಮ್ಮ ಹೋರಾಟಕ್ಕೆ ದಿಕ್ಸೂಚಿಯಾಗಬಲ್ಲಂತಹ ಸಿದ್ಧಾಂತವೊಂದನ್ನು ನಿಧಾನವಾಗಿಯಾದರೂ ಕಂಡುಕೊಳ್ಳತೊಡಗಿದರು. ಅದರ ಫಲವೇ ಸ್ತ್ರೀತ್ವವಾದಿಗಳ ಮತ್ತು ದುಡಿಯುವ ವರ್ಗಕ್ಕೆ ಸೇರಿದ ಮಹಿಳೆಯರ ಧ್ರುವೀಕರಣ. "ಸ್ತ್ರೀತ್ವವಾದಿಗಳು ವರ್ಗವಿಭಜಿತ ಸಮಾಜದ ಚೌಕಟ್ಟಿನಲ್ಲಿಯೇ, ಅದರ ಅಡಿಪಾಯವನ್ನು ಅಲುಗಿಸದೆಯೇ ಸಮಾನತೆಗಾಗಿ ಹೋರಾಡುತ್ತಾರೆ. ಸಮಾಜದ ಎಲ್ಲರಿಗೂ ದಕ್ಕಬೇಕಾದ ಎಲ್ಲ ಹಕ್ಕುಮತ್ತು ಸವಲತ್ತುಗಳಿಗಾಗಿ ಹೋರಾಡದೆ ಕೇವಲ ಮಹಿಳಾ ಹಕ್ಕುಗಳಿಗಾಗಿ ಮಾತ್ರ ಹೋರಾಡುತ್ತಾರೆ" (ಅಲೆಕ್ಸಾಂಡ್ರಾ ಕೊಲಂತ್ಯ) ಎನ್ನುವುದು ಒಂದು ಗುಂಪಿನವರ ಆಪಾದನೆಯಾದರೆ, ಮತ್ತೊಂದು ಗುಂಪಿನವರು "ಸ್ವಹಿತಾಸಕ್ತ ಪುರುಷ ಕಾರ್ಮಿಕ ಸಂಘಟನೆಗಳು ಎಂದೂ ಮಹಿಳೆಯರನ್ನು ಮತ್ತು ಅವರ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸುವುದಿಲ್ಲ. ವರ್ಗವೈರಿಗಳಾಗುವುದರಿಂದ ಮಹಿಳೆಯರ ಐಕ್ಯತೆಗೆ ಧಕ್ಕೆಯುಂಟಾಗುತ್ತದೆ. ಆದ್ದರಿಂದ ಎಲ್ಲ ವರ್ಗದ ಮಹಿಳೆಯರು ಒಟ್ಟಾಗಿ ಸಮಾನ ಹಕ್ಕು ಮತ್ತು ಅವಕಾಶಗಳಿಗಾಗಿ ಹೋರಾಟ ನಡೆಸಬೇಕು." ಎಂದು ಅಭಿಪ್ರಾಯ ಪಟ್ಟರು.

1910 ರಲ್ಲಿ ನಡೆದ ಅಂತರ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್‌ನಲ್ಲಿ ಮಾರ್ಚ್ 8 ನ್ನು ಅಂತರ ರಾಷ್ಟ್ರೀಯ ಮಹಿಳಾದಿನವನ್ನಾಗಿ ಆಚರಿಸಬೇಕೆಂಬ ನಿರ್ಣಯವನ್ನು ಕ್ಲಾರಾ ಜೆಟ್‌ಕಿನ್ ಮಂಡಿಸಿದರು. ಸಾರ್ವತ್ರಿಕ ಮಹಿಳಾ ಮತದಾನ ಹಕ್ಕಿನ ಬೇಡಿಕೆಯನ್ನಾಗಿಟ್ಟುಕೊಂಡು 1910 ರಲ್ಲಿ ಅಂತರ ರಾಷ್ಟ್ರೀಯ ದಿನವನ್ನು ಆಚರಿಸಲಾಯಿತು. "ಮತದಾನದ ಹಕ್ಕು ಮಹಿಳೆಯರ ಶಕ್ತಿಯನ್ನು ಬಲಪಡಿಸಿ ಸಮಾಜವಾದದ ಹೋರಾಟಕ್ಕೆ ನೆರವಾಗುತ್ತದೆ." ಎಂಬುದು ಈ ದಿನಾಚರಣೆಯ ಗುರಿಯಾಗಿತ್ತು, ಜರ್ಮನಿ ಮತ್ತು ಆಸ್ಟ್ರಿಯಾಗಳಲ್ಲಂತೂ ಹಲವಾರು ರೀತಿಯಲ್ಲಿ ಬೃಹತ್‌ಸಂಖ್ಯೆಯಲ್ಲಿ ಮಹಿಳೆಯರು ಈ ದಿನವನ್ನು ಆಚರಿಸಿದರು. ರಷ್ಯಾದ ಮಹಿಳಾ ನಾಯಕಿ ಅಲೆಕ್ಸಾಂಡ್ರಾ ಕೊಲಂತ್ಯ 1911 ರಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಕುರಿತಂತೆ ಹೀಗೆ ನುಡಿದರು : "ಜರ್ಮನಿ ಮತ್ತು ಆಸ್ಟ್ರಿಯಾದಲ್ಲಿ......... ಒಂದು ಅಗಾಧವಾದ ಭೋರ್ಗರೆಯುವ ಮಹಿಳಾಸಾಗರವೇ ನೆರೆದಿತ್ತು. ಸಭೆ ಸಮಾರಂಭಗಳು ಚಿಕ್ಕ ಪಟ್ಟಣಗಳು, ಹಳ್ಳಿಗಳಲ್ಲೂ ಬಿಡದಂತೆ ಎಲ್ಲೆಲ್ಲೂ ಚಟುವಟಿಕೆಯ ವಾತಾವರಣ. ಸಭಾಂಗಣಗಳು ಕಿಕ್ಕಿರಿದು, ಕೆಲವೊಮ್ಮೆ ಪುರುಷರು ತಾವೆದ್ದು ಮಹಿಳೆಯರಿಗೆ ಸ್ಥಳ ಮಾಡಿಕೊಡುತ್ತಿದ್ದರು. ಇದಂತೂ ಮಹಿಳೆಯರು ಒಟ್ಟಾಗಿ ತೋರಿಸಿದ ಮೊಟ್ಟ ಮೊದಲನೇ ಕ್ರಾಂತಿಕಾರಿ ಚಟುವಟಿಕೆಯಾಗಿತ್ತು. ಅಪರೂಪಕ್ಕೆ ಗಂಡಸರು ಮಕ್ಕಳೊಂದಿಗೆ ಮನೆಯಲ್ಲಿದ್ದು ತಮ್ಮ ಪತ್ನಿಯರಿಗೆ ಗೃಹಬಂಧನದಿಂದ ಬಿಡುಗಡೆ ಮಾಡಿದ್ದರು."

ಕೊಂಡು ಮೆರೆಯುತ್ತಿರುವ ಶಕ್ತಿಯ ವಿರುದ್ಧ ಮಹಿಳೆಯರು ಪ್ರಬಲ ಚಳುವಳಿ ಹೂಡುವ ಧೀರಸಂಕಲ್ಪ ತೊಡುವ ದಿನ ಇದಾಗಬೇಕು.

ಇಪ್ಪತ್ತೊಂದನೆಯ ಶತಮಾನಕ್ಕೆ ಧಾವಿಸುತ್ತಿರುವ ಪ್ರಧಾನಿಯವರು ಮತ್ತು ಅವರ ಸರ್ಕಾರ ಮುಸ್ಲಿಂ ಮಹಿಳೆಯರನ್ನು ಕುರಿತಂತೆ ತಳೆದಿರುವ ನಿಲುವು ಮಧ್ಯಕಾಲೀನ ಯುಗಕ್ಕೆ ನಮ್ಮನ್ನು ಕರೆದೊಯ್ಯುತ್ತದೆ. ರಾಷ್ಟ್ರದಲ್ಲೆಲ್ಲಾ ಎಷ್ಟೇ ಪ್ರಬಲವಾದ ವಿರೋಧಗಳಿದ್ದರೂ ಕೆಲವು ಸ್ವಹಿತಾಸಕ್ತ ಮತಾಂಧ ಮುಸ್ಲಿಮರ ಬೇಡಿಕೆಯನ್ನು ಮನ್ನಿಸಿ. ತಮ್ಮ 'ವೋಟಿನ-ಬ್ಯಾಂಕು'ಗಳನ್ನು ಭದ್ರಪಡಿಸಿಕೊಳ್ಳಲು ಮುಸ್ಲಿಂ ಮಹಿಳಾ ಸಮುದಾಯಕ್ಕೆ ಘೋರ ಅಪರಾಧವೆಸಗಲಾಗಿದೆ. ಕಳೆದ ಕೆಲವು ತಿಂಗಳುಗಳ ಹಿಂದಷ್ಟೇ ಶಾಬಾನೋ ಪ್ರಕರಣದಲ್ಲಿ ಉಚ್ಚನ್ಯಾಯಾಲಯ ಪ್ರಗತಿಪರ ತೀರ್ಪನ್ನು ನೀಡಿತ್ತು. ಸರ್ವೋಚ್ಚ ನ್ಯಾಯಾಲಯದ ಸರ್ವೋಚ್ಚ ತೀರ್ಪನ್ನು ಅದಲು ಬದಲು ಮಾಡಬಲ್ಲ ಮತಾಂಧರ ಸಂಕಲ್ಪಶಕ್ತಿಗೆ ನೀರೆರೆಯುವ ಪ್ರಧಾನಿ ಮತ್ತು ಅವರ ಸರ್ಕಾರದ ಪ್ರಯತ್ನ ಸಮಾಜ ಘಾತುಕವಾದದ್ದು. ಅಷ್ಟೇ ಅಲ್ಲ. ಮುಸ್ಲಿಂ ಮಹಿಳೆಯರಿಗೆ ಘೋರ ಅನ್ಯಾಯವುಂಟು ಮಾಡುವಂತಹುದು. 'ವಿವಾಹ ವಿಚ್ಛೇದನದ ಹಕ್ಕುಗಳಿಗೆ 'ರಕ್ಷಣೆ' ಕುರಿತಂತೆ ಲೋಕಸಭೆಯಲ್ಲಿ ಮಂಡಿಸಿದ ಮಸೂದೆ ಯಾರಿಗೆ ರಕ್ಷಣೆ ನೀಡುತ್ತದೆ ? ಉಟ್ಟ ಬಟ್ಟೆಯನ್ನು ಕಿತ್ತೆಸೆಯುವಂತೆ ಮನಸೋಇಚ್ಛೆ ಹೆಂಡತಿಯನ್ನು ಒಗೆದು ಬಿಡಬಲ್ಲ ಪತಿ ಮತ್ತು ಅವನ ಕುಟುಂಬದವರಿಗಲ್ಲದೆ ನೋವಿಗೀಡಾದ ಮಹಿಳೆಗಲ್ಲ. ವಿಚ್ಛೇದಿತ ಹೆಣ್ಣಿನ ಜವಾಬ್ದಾರಿಯನ್ನು ಕಾಲ್ಚೆಂಡಿನಂತೆ ಒಬ್ಬರಿಂದ ಮತ್ತೊಬ್ಬರತ್ತ ಒಗೆಯುವ ಈ ಮಸೂದೆ ಹೆಣ್ಣಿನ ಸ್ವಾತಂತ್ರ್ಯದ ಬಗ್ಗೆ ಕಿಂಚಿತ್ತೂ ಕಾಳಜಿವಹಿಸುವುದಿಲ್ಲ.. ವಿಚ್ಛೇದಿತ ಹೆಣ್ಣಿನ ಬದುಕುವ ಹಕ್ಕನ್ನು ಮುಸ್ಲಿಂ ಪುರುಷರು ತಮ್ಮ ಕೃಪೆಯ ಮುಷ್ಟಿಯಲ್ಲಿಟ್ಟು ಆಟ ಆಡಿಸುವುದು ಎಷ್ಟು ಸರಿ ? ಕಡೆಯಲ್ಲಿ ಅವಳ ಜವಾಬ್ದಾರಿಯನ್ನು ವಕ್ಫ್ ಸಮಿತಿಗೆ ಹೊತ್ತು ಹಾಕುವ ಈ ಮಸೂದೆ ಸಾರ್ವಜನಿಕ ಸಂಸ್ಥೆಯನ್ನು ನಿರಾಶ್ರಿತರ ದೊಡ್ಡಿಯನ್ನಾಗಿಸಬೇಕೆಂಬ ಭ್ರಮೆಯೇ ? ವೈಯಕ್ತಿಕ ಕಾನೂನಿನ ರಕ್ಷಣೆಯ ಸೋಗಿನಲ್ಲಿ ಮುಸ್ಲಿಂ ಹೆಣ್ಣಿಗೆ ಮೂಲಭೂತ ಸಾಮಾಜಿಕ ನ್ಯಾಯವನ್ನು ನಿರಾಕರಿಸಲಾಗಿದೆ. ಈಗ ಇದು ಕೇವಲ ಸಾಮಾಜಿಕ ಸಮಸ್ಯೆಯಾಗಿ ಉಳಿದಿಲ್ಲ. ರಾಜಕೀಯ ಸ್ವರೂಪ ಹೊಂದಿರುವ ಈ ಪ್ರಶ್ನೆಗೆ ರಾಜಕೀಯವಲಯಗಳಲ್ಲಿ ಕಂಡು ಬರುತ್ತಿರುವ ಬೆಳವಣಿಗೆ ಮತ್ತು ಪ್ರತಿಕ್ರಿಯೆ ಗಾಬರಿ ಹುಟ್ಟಿಸುವಂತವುದು. ಈ ಮಸೂದೆಯನ್ನು ಬೆಂಬಲಿಸುತ್ತಿರುವ ಜನತೆಯ ಪ್ರತಿನಿಧಿಗಳಾದ ಕೆಲವು ಎಂ.ಪಿ.ಗಳಿಗೆ ಮುಸ್ಲಿಂ ಹೆಣ್ಣಿನ ಸ್ವಾತಂತ್ರ್ಯದ ಬಗ್ಗೆ ಕಿಂಚಿತ್ತಾದರೂ ಕಾಳಜಿಯಿದ್ದಿದ್ದರೆ ಅಧಿಕಾರ ಲಾಲಸೆಯಿಂದ ಅಧಿಕಾರಸ್ಥರ ಬೂಟು ನೆಕ್ಕುತ್ತಿರಲಿಲ್ಲ. ಇಷ್ಟೇ ಸಾಲದೆಂಬಂತೆ ತಮ್ಮ ಈ ನಾಚಿಕೆಗೇಡಿನ ಕೃತ್ಯವನ್ನು 'ರಾಷ್ಟ್ರೀಯ ಸ್ವಾತಂತ್ರ್ಯದ ಆಂದೋಳನದ ಉಚ್ಚ ತತ್ವವನ್ನು ಎತ್ತಿ ಹಿಡಿಯುವ ಕೃತ್ಯ' ಎಂದು ಕರೆದುಕೊಂಡಿರುವುದು ಅವರ ರೋಗಗ್ರಸ್ಥ ಮನಸ್ಸಿನ ಸಂಕೇತ. ಶರೀಯತ್‌ಗೆ ಕೈ ಹಾಕದಿರುವುದು ಮಹಾ ಘನ ಕಾರ್ಯವೆಂದು ಕೊಂಡಿರುವ ಇವರಿಗೆ ಕಣ್ಣೆದುರಿಗೆ ಕಾಣುವ ನಗ್ನ ದೌರ್ಜನ್ಯವನ್ನು ಸಹಿಸುವುದು, ಪ್ರೋತ್ಸಾಹಿಸುವುದು ಸಣ್ಣತನವೆನಿಸುವುದಿಲ್ಲವಲ್ಲವೇ ? ಮುಸ್ಲಿಂ ಹೆಣ್ಣಿನ ಸ್ವಾತಂತ್ರ್ಯವನ್ನು ನಂಬುವ, ಪ್ರೀತಿಸುವ ಎಲ್ಲ ಜನಾಂಗದ ಸ್ತ್ರೀ ಪುರುಷರು ಒಕ್ಕೊರಲಿನಿಂದ ಈ ಮಸೂದೆಯ ವಿರುದ್ಧ ಸಂಘಟಿತರಾಗಿ ಭಾರತದ ಎಲ್ಲ ಮಹಿಳೆಯರಿಗೂ ಅನ್ವಯವಾಗುವಂತಹ ಸಮಾನ ಸಿವಿಲ್ ಸಂಹಿತೆಯು ಜಾರಿಗೆ ಬರುವಲ್ಲಿ ಶ್ರಮಿಸಬೇಕು.

ಎನ್. ಗಾಯತ್ರಿ

ಹೆಣ್ಣಾಗಿ ಹುಟ್ಟಿದಳು ಆಯಿಷಾ

ವರದಕ್ಷಿಣೆ ಕೊಡದ ಕಾರಣ ಒಂದು ಹೆಣ್ಣಿಗೆ ದೈಹಿಕ ಮತ್ತು ಮಾನಸಿಕ ಚಿತ್ರಹಿಂಸೆ ನೀಡಿ ಆಕೆಯ ಶೋಷಣೆ ಮಾಡಿ ಕೊನೆಗೂ ಆಕೆಗೆ 'ತಲಾಖ್' ಕೊಟ್ಟು ಗಂಡ ತನ್ನ ಸರ್ವಾಧಿಕಾರವನ್ನು ಮೆರೆದ ಒಂದು ಘಟನೆ ಕಳೆದ ವರ್ಷದ ಸೆಪ್ಟೆಂಬರ್ ತಿಂಗಳಲ್ಲಿ ಮಂಗಳೂರಿನ ಸಮೀಪ ಉಳ್ಳಾಲದಲ್ಲಿ ನಡೆಯಿತು. ವ್ಯಕ್ತಿ ನಿಯಮದ ದುರುಪಯೋಗಕ್ಕೆ ಇದೊಂದು ಸ್ಪಷ್ಟ ಉದಾಹರಣೆಯಾಗಿದೆ.

ಸಾರಾ ಅಬೂಬಕ್ಕರ್

ಉಳ್ಳಾಲದ ಅಂಬ್ಲಮೊಗರು ಗ್ರಾಮದ ಮಾಲೂರು ಎಂಬಲ್ಲಿನ ಗೌರವಾನ್ವಿತ ಮುಸ್ಲಿಂ ಕುಟುಂಬವೊಂದರ ಯಜಮಾನ ಹಸನಬ್ಬ ಎಂಬುವರು. ಇವರ ಪತ್ನಿ ಬೀಫಾತುಮ್ಮ. ಇವರಿಗೆ ನಾಲ್ಕು ಜನ ಹೆಣ್ಣುಮಕ್ಕಳು ಮೂರು ಜನ ಗಂಡು ಮಕ್ಕಳೂ ಇದ್ದಾರೆ. ಮೈಸೂರು ಮಾರ್ಕೆಟ್ಟಿನಲ್ಲಿ ಹಣ್ಣಿನ ವ್ಯಾಪಾರಿಯಾಗಿರುವ ಇವರು ಒಂದೆರಡು ತಿಂಗಳಿಗೊಮ್ಮೆ ಊರಿಗೆ ಬಂದು ಹೋಗುತ್ತಿದ್ದರು. ಈ ರೀತಿ ವ್ಯಾಪಾರದ ಸಂಪಾದನೆಯಲ್ಲಿ ಕುಟುಂಬ ಪೋಷಣೆ ಮಾಡುತ್ತಾ ಮೂರು ಹೆಣ್ಣು ಮಕ್ಕಳ ವಿವಾಹ ನೆರವೇರಿಸಿದ್ದಾರೆ. ಇವರ ಎರಡನೆಯ ಮಗಳೇ ಆಯಿಷಾ.

ಏಳು ವರ್ಷಗಳ ಹಿಂದೆ ಆಯಿಷಾಳ ವಿವಾಹವು ಸಮೀಪದ ಮುನ್ನೂರು ಎಂಬ ಗ್ರಾಮದ ಅಬ್ದುಲ್ ರಜಾಕ್ ಎಂಬುವನೊಡನೆ ನೆರವೇರಿತು. ವಿವಾಹದ ನಿಶ್ಚಿತಾರ್ಥದ ವೇಳೆಯಲ್ಲಿ ಮೂವತ್ತೈದು ಪವನುಗಳ ಚಿನ್ನಾಭರಣ ಕೊಡಬೇಕೆಂದು ಒಪ್ಪಿಗೆಯಾಗಿತ್ತು. ವರದಕ್ಷಿಣೆಯಾಗಿ ನಗದು ಹಣ ಕೊಡಬೇಕೆಂಬ ಬೇಡಿಕೆ ಯೇನೂ ವರನ ಕಡೆಯವರಿಂದ ಬಂದಿರಲಿಲ್ಲ: ಆದರೆ ವಿವಾಹದ ಸಮಯದಲ್ಲಿ ಬರೇ ಇಪ್ಪತ್ತೈದು ಪವನಿನ ಚಿನ್ನಾಭರಣ ಮಾತ್ರ ಹುಡುಗಿಯ ಮೈ ಮೇಲಿದ್ದ ಕಾರಣ ಹುಡುಗಿಗೆ ಅತ್ತೆಯ ಮನೆಯಲ್ಲಿ ಕಾಟ ಪ್ರಾರಂಭವಾಯಿತು. ಆಕೆಯ ಗಂಡ ಕೊಲ್ಲಿ ರಾಷ್ಟ್ರದಲ್ಲಿ ದುಡಿಯುತ್ತಿದ್ದ ಕಾರಣ ವಿವಾಹವಾದ ಒಂದೇ ತಿಂಗಳಲ್ಲಿ ಆತನು ಊರು ಬಿಟ್ಟಿದ್ದನು. ಮಗಳಿಗೆ ಗಂಡನ ಮನೆಯಲ್ಲಿ ಕಿರುಕುಳ ಕೊಡುವ ವಿಷಯ ತಿಳಿದ ಆಕೆಯ ತಂದೆ ಬಡ್ಡಿಗೆ ಹಣ ಸಾಲ ಪಡೆದು ಉಳಿದ ಹತ್ತು ಪವನಿನ ಆಭರಣವನ್ನು ತಂದು ಮಗಳ ಕೈಯಲ್ಲಿಟ್ಟರು.

ವಿವಾಹವಾದ ಒಂದೇ ತಿಂಗಳಲ್ಲಿ ಪತ್ನಿಯನ್ನಗಲಿ ಕೊಲ್ಲಿಗೆ ಹೋದ ರಜಾಕ್ ಎರಡೂವರೆ ವರ್ಷಗಳ ಬಳಿಕ ಊರಿಗೆ ಬಂದವನು ನಾಲ್ಕು ತಿಂಗಳು ಊರಲ್ಲಿದ್ದು ಹಿಂತಿರುಗಿದನು. ಈ ಬಾರಿ ಆಕೆ ಗರ್ಭಿಣಿಯಾದಳು. ಜೌಹರ್ ಎಂಬ ಹೆಣ್ಣು ಮಗುವೂ ಹುಟ್ಟಿತು. ಮಗುವಿಗೆ ಒಂದು ವರ್ಷವಾದಾಗ ಊರಿಗೆ ಬಂದ ರಜಾಕ್ ಈ ಬಾರಿಯೂ ನಾಲ್ಕು ತಿಂಗಳು ಊರಲ್ಲಿದ್ದನು. ಈ ಬಾರಿ ಈತನು ಮೂರು ಎಕರೆ ಸ್ಥಳವನ್ನು ಖರೀದಿಸಿದನು. ಈ ಸಂದರ್ಭದಲ್ಲಿ ಈತ ಮತ್ತು ಈತನ ಅಣ್ಣ ಹಮೀದ್ ಹಾಜಿ ಎಂಬುವನು ಈತನ ಮಾವ ಹಸನಬ್ಬರನ್ನು ಮನೆಗೆ ಕರೆಸಿ ಇಪ್ಪತ್ತೈದು ಸಾವಿರ ರೂಪಾಯಿ ಕೊಡಬೇಕೆಂದು ಒತ್ತಾಯಿಸಿದರು.

ಮದುವೆಗೆ ಬೇಡದಿದ್ದ ವರದಕ್ಷಿಣೆಯನ್ನು ಈಗ ಬೇಡ ತೊಡಗಿದರು. ಈ ತಂದೆ ತನ್ನ ಮಗಳ ಚಿನ್ನಾಭರಣಗಳಿಗಾಗಿ ಮಾಡಿದ ಸಾಲವೇ ಇನ್ನೂ ಬಾಕಿ ಇರುವಾಗ ಇನ್ನೂ ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಎಲ್ಲಿಂದ ತಂದಾರು ? ಹೀಗಾಗಿ ಅವರು ಈ ಹಣ ಕೊಡಲು ನಿರಾಕರಿಸಿದರು. ಅಂದಿನಿಂದ ಆಯಿಷಾಳಿಗೆ ಹೊಸ ಬಗೆಯ ಕಿರುಕುಳ ಪ್ರಾರಂಭವಾಯಿತು.

ಆಕೆ ಇನ್ನು ಮುಂದೆ ತನ್ನ ತೌರಿಗೆ ಕಾಲಿಡ ಬಾರದು; ತನ್ನ ತಂದೆ-ತಾಯಿಗಳ ಅಥವಾ ಇನ್ನಿತರ ಸಂಬಂಧಿಕರ ಮುಖ ನೋಡಬಾರದು, ಮುಂತಾದ ಕಟ್ಟುಪಾಡುಗಳನ್ನು ವಿಧಿಸಿದರು. ಆಕೆಯ ತಂದೆ ಕೊಟ್ಟಿದ್ದ ಮೂವತ್ತೈದು ಪವನಿನ ಚಿನ್ನಾಭರಣಗಳನ್ನು ಆಕೆಯೇ ತಂದು ತನ್ನ ಪತಿಯ ಕೈಯಲ್ಲಿಟ್ಟಳು. ಹದಿನಾಲ್ಕು ಚಿನ್ನದ ಬಳೆಗಳು, ಅವಲಕ್ಕಿ ಸರ, ಚೈನು,

ಕವನ

ವಿರಹಿಣಿ

ಕಥೆ ಸಾಲು ಸರಿದಿತ್ತು ಕೊನೆ ಹುಡುಕಿ
ತಡತಡಕಿ ಬದುಕ ಶಾಕುಂತಲೆ
ಹೂ ಬೆರಳು ಮಿಡಿಹರಡಿ ಬೆಚ್ಚಗೆ
ಒಸಗೆಯುಂಗುರ ರಂಗಾದ ತರಳೆ

ಕಡೆದೊಡಲು ಕಣ್ಣೊಳಗೆ ಕಂಬನಿ
ಕರಗಿತ್ತು ಮಾತುಗಳು ಎದೆತನಕ ನಿಂದು
ಚಿತ್ತಾರ ಕೊಡಸಾಲು ಚೈತ್ರ ರಂಗೋಲಿ
ಅರಳದ ಸ್ವಪ್ನ ಮೊಗ್ಗೆ ಮಾಲೆ

ಬರಬಹುದು ಎಂದೋ ಕುದುರೆ ಹೆಜ್ಜೆಗಳ ಕನಸು
ರೆಪ್ಪೆಗತ್ತಲು ಭಯ ಹೊತ್ತ ಸಂಜೆಗಾಳಿ
ಕುಡಿಯೊಡೆದೊಡನೆ ಕಾಲುಂಡುಗೆ ದನಿಸಿದ್ದು
ಎಳೆದೀಪ ಮಿಣುಕು ಮನಸು

ಅರೆಬಿರಿದ ಕೆಂಪು. ನಗಬಹುದು ಹೂ
ಕೊಳತ್ತಳದ ಕಣ್ಣೀರು ಮುಡಿದ ಬೇಗೆ
ಸೆರೆಗೆಳೆದ ಚಿಗರೆ. ಹೂಕಿತ್ತ ಚಿಗುರು
ಎಳೆದಾಟ ಬಯಕೆ ಮೇನೆ

ದಿನದಿನದ ಹೊತ್ತು ನೆನಪುಗಳ ಕಿತ್ತು
ಸಾಲತ್ತು ಉತ್ತ ಮಂಜು ಕಾಳು
ಗಳಿಗೆ ಗೂಡೊಳಗೆ ಚಿಲಿಪಿಲಿ ಕಂಠ
ಮತ್ತೊಂದು ನಿನ್ನೆ ನಾಡಿಗೆ ಪಯಣ

ದೂರಹಾದಿ ಮುಗಿಲುದ್ದ ಮೊಗೆದು
ತೆರೆಬಯಲು ಹೊದೆದ ನೋವು
ಈ ಗೀತೆ ಹಾಡಿದಂತೆ ಗುಂಗು
ಮುಗಿತಕ್ಕೆ ಅವನ ಬರವು.

—ಗಾಯತ್ರಿ ಬಿ. ಎಸ್.

ಮಾತಾಡಬೇಕಿದೆ

ಮಹಾ ಮೌನದ ಸಾಗರದೊಳೊಂದು
ಕಾವ್ಯದ ಹೊಸ ಅಲೆಯೊಂದು
ಆವರಿಸಿದ ಚಿಗುರೊಡೆದು ನಗುವಾಗ
ಖಾಲಿ ಹೊಟ್ಟೆಯ ತಟ್ಟೆಯಲ್ಲಿ
ಸೌಂದರ್ಯದ ಹೊಳಪು
ಬೆಂಜಮಿನ್ ಸತ್ತಿಲ್ಲವೆಂದು ಸಾರುತ್ತಿತ್ತು
'ಮತ್ತೇನು' ಸಮಾಚಾರ? ಎಂದಾಗ
ಕೊರಿಯಾದ ಕೊರಗುವ ಧ್ವನಿಗಳ ಬಗ್ಗೆ
ವಿಯೆಟ್ನಾಂನ ಗುಂಡಿನ ಸುರಿಮಳೆ ಕುರಿತು
ಶಾಂತಿ ಮುಖವಾಡದಲ್ಲಿ
ಬಿರುಗಾಳಿ ಎಬ್ಬಿಸಿದವರ ಕುರಿತು
ನಿರಂತರ ಅನಂತದವರೆಗೂ ಮಾತಾಡಬೇಕಿದೆ

ಹರಿದ ಚಾಪೆಯ ಮೇಲೆ ಕೂತ ನಿನ್ನೊಡನೆ
ಮಾನವೀಯ ಗಡಿಗಳ ಕುರಿತು
ಹಿಮಾಲಯ ತುದಿಯವರೆಗೂ ಮಾತಾಡಬೇಕಿದೆ
ಮಣ್ಣು ಗೂಡ ಸೇರಿ
ಅಸ್ಥಿಪಂಜರಗಳಾಗಿಯೂ ಉಳಿಯದ
ಕಂದಮ್ಮಗಳ ತುಟಿಯ ನಗುವ
ಹೂಗೊಂಚಲ ಸೇರಿ ಮಾತಾಡಬೇಕಿದೆ

ಕ್ಷಣಗಳು ಕಾಡುತ್ತಿವೆ ಗೆಳೆಯಾ,
ಜಗತ್ತನ್ನು ಅಪ್ಪಿಕೊಳ್ಳುವ ಸಂದರ್ಭಕ್ಕಾಗಿ
ಅಣುಬಾಂಬುವಿನ ಗೋರಿಗಳು ನಗುವ ಮುನ್ನ
ನಿನ್ನ ಬರಹದ ಬದುಕು
ಹರಿದು ಹೋದ ಬದುಕುಗಳ ಬುನಾದಿಗಾಗಿ
ಬರುವ ಚೇತನದ ಕುರಿತು ಮಾತಾಡಬೇಕಿದೆ
ಒಂದೇ, ಎರಡೇ......
ಬದುಕಿನ ಪದರುಗಳ ಬಿಚ್ಚಿ ಮಾತಾಡಬೇಕಿದೆ
ಈಗಲಾದರೂ ಮಾತಾಡು ಮೌನವೇ

—ಶಾಂತಕುಮಾರಿ

ತರಿಸಿ, ಅವರಿಂದಲೇ ಮನೆಗೆ ಬೇಕಾದ ಸಾಮಾನು ತರಿಸಿ ಏನನ್ನಾದರೂ ಬೇಯಿಸಿ ಮಕ್ಕಳಿಗೂ ಕೊಟ್ಟು ತಾನೂ ತಿನ್ನತೊಡಗಿದಳು.

ಇಲ್ಲಿಗೂ ಬಿಡದ ಹಮೀದ್ ಹಾಜಿ, "ಆಯಿಷಾಳ ನಡತೆ ಕೆಟ್ಟು ಆಕೆ ಆತ್ಮಹತ್ಯೆಗೆ ಪ್ರಯತ್ನಿಸುತ್ತಿದ್ದಾಳೆ. ಆದ್ದರಿಂದ ಆಕೆ ಆತ್ಮಹತ್ಯೆ ಮಾಡಿಕೊಂಡರೆ ನಾನು ಜವಾಬ್ದಾರನಲ್ಲ. ಆಕೆಯನ್ನು ಆಕೆಯ ತಂದೆ ಬಂದು ಕರೆದೊಯ್ಯಬೇಕು." ಎಂದು ಉಳ್ಳಾಲದ ಪೋಲೀಸ್ ಠಾಣೆಯಲ್ಲಿ ದೂರು ನೀಡಿದನು. ಈ ವಿಷಯ ತಿಳಿದ ಆಕೆಯ ತಂದೆ ಓಡಿ ಬಂದರು. ಮಗಳೊಡನೆ ನೇರ ವಾಗಿ ಕೇಳಿದರು.

"ಈ ಸುದ್ದಿ ನಿಜವೇ ? ನೀನು ಇಂತಹ ಕೆಟ್ಟ ಕೆಲಸ ಮಾಡಿದೆಯಾ ?"

"ಅಬ್ಬಾ, ನಿಮಗೆ ನನ್ನ ಮೇಲೆ ವಿಶ್ವಾಸವಿಲ್ಲವೇ? ನಾನು ಅಂತಹ ಹೇಯ ಕೆಲಸ ಮಾಡುತ್ತೇನೆಯೇ ? ಆತ್ಮಹತ್ಯೆ ಮಾಡಿಕೊಳ್ಳುವಂತಹ ತಪ್ಪನ್ನೇನೂ ನಾನು ಮಾಡಿಲ್ಲ. ಆದರೆ ಈ ಜನರೇ ನನ್ನನ್ನು ಕೊಲ್ಲಬಹುದು ಎಂಬ ಭಯ ನನಗಿದೆ." ಎಂದು ಆಕೆ ಅಳುತ್ತಾ ತನಗಾದ ಅನ್ಯಾಯವನ್ನೆಲ್ಲ ತಂದೆಗೆ ವಿವರಿಸಿದಳು. ಆಕೆಯನ್ನು ತಾನು ತನ್ನ ಮನೆಗೆ ಕರೆದೊಯ್ದರೆ ಆಕೆಯ ಪತಿ 'ತಲಾಖ್' ಕಳುಹಿಸಿ ಬಿಡಬಹುದೆಂಬ ಭಯದಿಂದ ತಂದೆ ಮಗಳನ್ನಲ್ಲಿಯೇ ಬಿಟ್ಟು ದುಃಖದಿಂದ ಹಿಂತಿರು ಗಿದರು. ತಂಗಿಯನ್ನು ನೋಡಲು ಬಂದ ಆಕೆಯ ಅಣ್ಣ ತಂಗಿ ಹಸಿವೆಯಿಂದ ಬಳಲುತ್ತಿರುವುದನ್ನು ಕಂಡು ಹೋಟೆಲಿನಿಂದ ಊಟ ತಂದು ತಂಗಿ ಮತ್ತು ಮಕ್ಕಳಿಗೆ ಉಣಿಸಿದನು.

ಹಮೀದ್ ಹಾಜಿ ಪತ್ರ ಹಾಕಿ ರಜಾಕ್‌ನನ್ನು ಊರಿಗೆ ಕರೆಸಿದನು. ಪರದೇಶದಿಂದ ಬಂದವನನ್ನು ವಿಮಾನ ನಿಲ್ದಾಣದಲ್ಲಿಯೇ ಎದುರ್ಗೊಂಡು ಪತ್ನಿಯ ವಿಷಯದಲ್ಲಿ ಆತನ ತಲೆ ಕೆಡಿಸಿದನು. ಮಂಗಳೂರಿನ ಹೋಟೆಲಿನ ರೂಮೊಂದರಲ್ಲಿ ಆತನನ್ನಿರಿಸಿ ಆತ ಮನೆಗೆ ಹೋಗದಂತೆ ತಡೆದನು. ತನ್ನ ಪತ್ನಿ ಮತ್ತು ಮಕ್ಕಳನ್ನು ಭೇಟಿಯಾಗಲು ಆತನನ್ನು ಬಿಡಲಿಲ್ಲ. ಒಂದೂವರೆ ವರ್ಷವಾಗಿರುವ ಚಿಕ್ಕ ಮಗು ರೈಹಾನ ತಂದೆಯ ಮುಖ ವನ್ನು ಈವರೆಗೂ ಕಂಡಿಲ್ಲ. ಆತನು ಪತ್ನಿಯನ್ನು ಭೇಟಿಯಾದರೆ ಪತಿ ಪತ್ನಿಯರು ಒಂದಾಗುವರೆಂಬು ದರಲ್ಲಿ ಸಂದೇಹವಿಲ್ಲ. ಆದಕ್ಕಾಗಿ ಆತನನ್ನು ಹೋಟೆಲ್ ರೂಮಿನಲ್ಲಿ ಕೂಡಿಸಿ ಪತ್ನಿಗೆ 'ತಲಾಖ್' ಕೊಡಬೇಕೆಂದು ಒತ್ತಾಯಿಸಿದರು ಆತನ ಅಣ್ಣಂದಿರು. ಮುಸ್ಲಿಂ ಲಾಯರೊಬ್ಬರನ್ನು ಹಿಡಿದುಕೊಂಡು ಪಣಂಬೂರಿನ ಡಿ.ವೈ.ಎಸ್.ಪಿ. 'ಅವರನ್ನು ಸೇರಿಸಿದರು. ಈ ಲಾಯರ್ ಆಫೀಸಿಗೆ ಆಯಿಷಾಳ ತಂದೆ ಹಸನಬ್ಬ ಬಂದು, ಮಗಳ ಪರವಾಗಿ ತಲಾಖ್ ಸ್ವೀಕರಿಸಬೇಕೆಂದು ತಿವರಿಗೆ ಉಳ್ಳಾಲ ಪೋಲೀಸ್ ಠಾಣೆಯ ಮೂಲಕ ಬಾಯಿ ಮಾತಿನ ಸಂದೇಶ ಹೋಯಿತು. ಮಗಳ ತಲಾಖ್ ತರಲು ತಾನು ಹೋಗಲಾರೆ ಎಂದು ಹಸನಬ್ಬ ಈ ವಕೀಲರ ಕಚೇರಿಗೆ ಹೋಗಲಿಲ್ಲ.

ಅದೇ ದಿನ ರಾತ್ರಿ ಸುಮಾರು ಎರಡು ಗಂಟೆಗೆ, ನಿದ್ರಿಸುತ್ತಿದ್ದ ಆಯಿಷಾಳನ್ನು ಆಕೆಯ ಕೂದಲು ಜಗ್ಗಿಸಿ ಎಬ್ಬಿಸಿದ ಆಕೆಯ ಮೈದುನ ಹಮೀದ್ ಹಾಜಿ ಆಕೆಯ ಬಾಯಿಗೆ ಬಟ್ಟೆ ತುರುಕಿ, ಆಕೆ ಬುರ್ಕಾ ಧರಿಸಲೂ ಬಿಡದೆ ಕೈಗಳನ್ನು ಸೇರಿಸಿ ಬುರ್ಕಾದಿಂದ ಬಿಗಿದು ಎತ್ತಿ ತಂದು ಕಾರಿನಲ್ಲಿ ಕುಕ್ಕಿದನು. ಆಕೆಯ ಕತ್ತನ್ನು ಚೆನ್ನಾಗಿ ಹಿಸುಕಿದನು. ಆಕೆಯ ಚಿಕ್ಕ ಮೈದುನನ ಮಾವ ಆಕೆಯ ಸೊಂಟಕ್ಕೆ ಚೆನ್ನಾಗಿ ಒದ್ದನು. ಇನ್ನೆರಡು ಕಾರುಗಳಲ್ಲೂ ಗಂಡಸರು ತುಂಬಿದ್ದರು. ಈ ರೀತಿ ಮೂರು ಕಾರುಗಳ ತುಂಬಾ ಬಂದ ಗಂಡಸರು ಓರ್ವ ಹೆಣ್ಣು ಮಗಳನ್ನು ಚೆನ್ನಾಗಿ ಹಿಂಸಿಸಿ (ಮಾನಭಂಗ ಮಾಡಲಿಲ್ಲ) ಆಕೆಯ ತಂದೆಯ ಮನೆಯಿಂದ ಕೊಂಚ ದೂರ ಕಾರು ನಿಲ್ಲಿಸಿ ಆಕೆಯನ್ನು ಕಾರಿನಿಂದ ಕೆಳಹಾಕಿ ದರದರನೆ ಎಳೆದೊಯ್ದು ತಂದೆಯ ಮನೆಯ ಮುಂದೆ ಆಕೆಯನ್ನೆತ್ತಿ ಅಂಗಳಕ್ಕೆಸೆದರು. ಮನೆಯ ಮುಂದೆ, ಗಲಾಟೆ ಕೇಳಿದ ಆಕೆಯ ತಂದೆ ಬಾಗಿಲು ತೆಗೆದಾಗ ಬಾಗಿಲಿಗೆ ಸೋಡಾ ಬಾಟಲಿಗಳು ಬಂದು ಬಿದ್ದವು; ಕಿಟಕಿಯ ಗಾಜುಗಳು ಒಡೆದವು. ಬೆದರಿದ ಆತ ಕೂಡಲೇ ಬಾಗಿಲು ಮುಚ್ಚಿಕೊಂಡು ಕೊಂಚ ಹೊತ್ತಾದ ಬಳಿಕ ಬಾಗಿಲು ತೆಗೆದಾಗ ತನ್ನ ಮಗಳು ಅಂಗಳದಲ್ಲಿ ಬಿದ್ದುದನ್ನು ಕಂಡು ಓಡಿಹೋಗಿ ಮಗಳನ್ನೆತ್ತಿಕೊಂಡು ಒಳ ಬಂದನು. ಬಳಿಕ ಆಕೆಯಿಂದ ವಿಷಯ ತಿಳಿದು ಕೂಡಲೇ ಪೋಲೀಸ್ ಠಾಣೆಗೆ ದೂರು ನೀಡಿ ಮಗ ಳನ್ನು ವೆನ್‌ಲಾಕ್ ಆಸ್ಪತ್ರೆಗೆ ದಾಖಲು ಮಾಡಿಸಿದನು.

ನೆಕ್ಲೇಸು, ಕಿವಿಯ ಹತ್ತು ತೂತುಗಳಲ್ಲಿದ್ದ ಅಲಿಕತ್ತು, ಲೋಲಾಕು ಮತ್ತು ಗಂಡ ಮಾಡಿಸಿಕೊಟ್ಟ ಆಭರಣಗಳೆಲ್ಲವೂ ಮಾರಾಟವಾಗಿ ಆಸ್ತಿ ಖರೀದಿಸಲ್ಪಟ್ಟಿತು. ಆಸ್ತಿಯನ್ನು ತನ್ನಣ್ಣ ಹಮೀದ್ ಹಾಜಿಯ ಹೆಸರಿನಲ್ಲಿ ರಿಜಿಸ್ಟರ್ಡ್ ಮಾಡಿಸಿ, ಆಯಿಷಾ ತನ್ನ ತಂದೆ ತಾಯಿಗಳ ಮುಖ ನೋಡಬಾರದೆಂದು ಕಟ್ಟಪ್ಪಣೆ ವಿಧಿಸಿ, ಆಕೆಯ ಹೊಟ್ಟೆಯಲ್ಲಿ ಇನ್ನೊಂದು ಮಗುವಿಗೆ ಜನ್ಮ ನೀಡಿ ರಜಾಕ್ ಊರು ಬಿಟ್ಟನು.

ಗರ್ಭಿಣಿಯಾದ ಆಯಿಷಾ ತವರು ಮನೆಗೆ ಕಾಲಿಡದೇ ಎಲ್ಲಾ ಸಂಕಷ್ಟಗಳನ್ನು ಒಬ್ಬಳೇ ಸಹಿಸಿ ಇನ್ನೊಂದು ಹೆಣ್ಣು ಮಗುವಿಗೆ ಜನ್ಮ ನೀಡಿದಳು. ಮುದುಕಿಯಾದ ಅತ್ತೆ ಮಗುವಿಗೆ ಸ್ನಾನವನ್ನೂ ಮಾಡಿಸದೆ, ಬಾಣಂತಿಯ ಕೆಲಸಕ್ಕೆ ಹೆಂಗಸನ್ನು ನಿಯಮಿಸದೆ ಸೊಸೆಯನ್ನು ಚೆನ್ನಾಗಿ ಸತಾಯಿಸಿದಳು.

ಈಕೆಯ ಅತ್ತೆಯ ಆರು ಜನ ಗಂಡು ಮಕ್ಕಳಲ್ಲಿ ಮೂವರು ಪರದೇಶದಲ್ಲಿ ದುಡಿಯುವವರಾದರೆ ಊರಲ್ಲಿರುವ ಮೂವರು ದುಡಿಯುವುದಿಲ್ಲ. ಹಿರಿಯವನಾದ ಹಮೀದ್‌ಹಾಜಿ ಎಂಬುವನು ಎಂದಾದರೊಮ್ಮೆ ಮತ ಪ್ರಸಂಗ ಹೇಳಲು ಹೋಗುವುದಲ್ಲದೆ ಬೇರಾವ ಕೆಲಸವನ್ನು ಮಾಡುವುದಿಲ್ಲ. ಈತನಿಗೆ ಈರ್ವರು ಪತ್ನಿಯರಿದ್ದು ಒಬ್ಬಾಕೆಗೆ ಒಂಭತ್ತು ಜನ ಮಕ್ಕಳೂ ಎರಡನೆಯವಳಿಗೆ ಮೂರು ಮಕ್ಕಳೂ ಇದ್ದಾರೆ. ಈತನ ಖರ್ಚು ವೆಚ್ಚಗಳೆಲ್ಲವನ್ನೂ ಪರದೇಶದಲ್ಲಿರುವ ತಮ್ಮಂದಿರೇ ನೋಡಿಕೊಳ್ಳಬೇಕಾಗಿದೆ. ತಮ್ಮಂದಿರು ಈತನ ಹೆಸರಿಗೇ ಹಣ ಕಳುಹಿಸುವವರಾದ ಕಾರಣ ತಮ್ಮನ ಮನೆಯ ಆಡಳಿತವನ್ನೂ ಈತನೇ ನಿರ್ವಹಿಸುತ್ತಿದ್ದರು.

ಹೀಗಿದ್ದಾಗ ಆಯಿಷಾ ಗಂಡನಿಗೆ ಪತ್ರ ಬರೆದಳು: "ನನಗಾಗಲಿ, ಮಕ್ಕಳಿಗಾಗಲಿ ಅತ್ಯವಶ್ಯಕವಾಗಿ ಏನನ್ನಾದರೂ ಖರೀದಿಸಬೇಕಾದರೂ ನಿಮ್ಮಣ್ಣನ ಮುಂದೆ ಕೈಯೊಡ್ಡಬೇಕಾಗುತ್ತದೆ. ಹಣಕ್ಕಾಗಿ ಅವರೊಡನೆ ಕೇಳಲು ನನಗೆ ಸಂಕೋಚವಾಗುತ್ತದೆ. ಆದ್ದರಿಂದ ಇನ್ನು ಮುಂದೆ ನನ್ನ ಹೆಸರಿಗೆ ಹಣ ಕಳುಹಿಸಿ."

ಇದು ಆಯಿಷಾ ಮಾಡಿದ ಬಹು ದೊಡ್ಡ ಅಪರಾಧವಾಯಿತು. ಹಮೀದ್ ಹಾಜಿ ತನ್ನನ್ನು ಬಯಸಿದಾಗ ತಾನು ಅದಕ್ಕೊಪ್ಪದಿದ್ದುದೂ ತಾನು ಆತನ ಕೋಪಕ್ಕೆ ಪಾತ್ರಳಾಗಲು ಕಾರಣವಾಯಿತು ಎನ್ನುತ್ತಾಳೆ ಆಯಿಷಾ. "ನಿನಗೆ ಪಾಠ ಕಲಿಸುತ್ತೇನೆ." ಎಂದು ಹಮೀದ್ ಹಾಜಿ ನಾದಿನಿಯ ಮೇಲೆ ಆಗಲೇ ಕತ್ತಿ ಮಸೆಯತೊಡಗಿದ್ದನು.

ಗಂಡ ತನ್ನ ಹೆಸರಿಗೆ ಹಣ ಕಳುಹಿಸಲು ಪ್ರಾರಂಭಿಸಿದ ಬಳಿಕ ಆಕೆಯೇ ಮನೆಯ ಆಡಳಿತ ನಿರ್ವಹಿಸತೊಡಗಿದಳು. ತೋಟದ ಕೆಲಸವನ್ನೂ ಆಕೆಯೇ ಮಾಡಿಸುತ್ತಿದ್ದಳು. ಗಂಡ ತನ್ನ ಹೆಸರಿಗೆ ಕಳುಹಿಸುತ್ತಿದ್ದ ಚೆಕ್ಕನ್ನು ಆಕೆ ತನ್ನ ಮೈದುನನ ಹೆಂಡತಿಯ ಅಣ್ಣನೊಡನೆ ಕೊಟ್ಟು ಆತನ ಮುಖಾಂತರ ಬ್ಯಾಂಕಿನಿಂದ ಹಣ ತರಿಸುತ್ತಿದ್ದಳು. ಮುಸ್ಲಿಂ ಮಹಿಳೆಯರು ಬ್ಯಾಂಕು ಮುಂತಾದೆಡೆಗಳಿಗೆ ಕಾಲಿಡುವಂತಿಲ್ಲವಲ್ಲ?

ತನ್ನ ಕೈಗೆ ಹಣ ಬರುವುದು ನಿಂತು ಹೋದಾಗ ಹಮೀದ್ ಹಾಜಿ ಕೆಣಕಿದ ಸರ್ಪದಂತಾದನು; ಸೇಡು ತೀರಿಸಿಕೊಳ್ಳಲು ಸಮಯ ಕಾಯತೊಡಗಿದನು.

ಆಕೆ ಕೊಳದ ಬಳಿ ಬಟ್ಟೆಯೊಗೆಯಲು ಹೋದಾಗ ಆಕೆಯ ಕೋಣೆಯಿಂದ ಪತ್ರವೊಂದು ದೊರೆತಿದೆಯೆಂದು ಈತನು ಗುಲ್ಲೆಬ್ಬಿಸಿದನು. ತಮ್ಮನಿಗೆ ಪತ್ರ ಬರೆದು ಆಯಿಷಾಳ ನಡತೆ ಕೆಟ್ಟಿದೆಯೆಂದು ಆರೋಪಿಸಿದನು. ಚೆಕ್ಕನ್ನು ಬ್ಯಾಂಕಿಗೆ ಕಳುಹಿಸುತ್ತಿದ್ದ ತರುಣನೊಡನೆ ಆಕೆಯ ಸಂಬಂಧ ಕಲ್ಪಿಸಿ ಕತೆ ಕಟ್ಟಿದನು. ಆ ತರುಣ (ಇನ್ನೂ ಹದಿಹರೆಯದವನು) ಇದಕ್ಕೊಪ್ಪದಿದ್ದಾಗ ಆತನನ್ನು ಹಮೀದ್ ಹಾಜಿಯು ಮನೆಯ ಕೋಣೆಯಲ್ಲಿರಿಸಿ ಬೀಗ ಹಾಕಿ ಆತನಿಗೆ ಚಿತ್ರಹಿಂಸೆ ನೀಡಿ, ಆತನಿಂದ ಬಲವಂತವಾಗಿ ಆತ ಮಾಡದ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡಿದರು. ಈ ವಿಷಯಗಳೆಲ್ಲ ಎಷ್ಟೋ ದಿನಗಳಾದ ಮೇಲೆ ನೆರೆಯ ಹೆಂಗಸರಿಂದ ಆಯಿಷಾಗೆ ತಿಳಿಯಿತು.

ಗಂಡನಿಂದ ಹಣ ಮತ್ತು ಪತ್ರ ಬರುವುದು ನಿಂತಿತು. ಈಗ ಮನೆಯ ಮೇಲ್ವಿಚಾರಣೆಯನ್ನು ಆಕೆಯ ಅತ್ತೆಯೇ ವಹಿಸತೊಡಗಿದಳು. ಆಕೆ ಸೊಸೆಗೆ ಊಟ ಹಾಕಿದಳು ಹಾಕಿದರು; ಇಲ್ಲವಾದರೆ ಇಲ್ಲ. ಮಕ್ಕಳು ಹಸಿವೆಯಿಂದ ಅಳತೊಡಗಿದಾಗ, ಕೈಯಲ್ಲಿ ಕಾಸಿಲ್ಲದ ಆಯಿಷಾ ತಾನು ಹಿಂದೆ ಮಾಡುತ್ತಿದ್ದ ಬೀಡಿ ಕಟ್ಟುವ ಕೆಲಸವನ್ನು ಪ್ರಾರಂಭಿಸಿದಳು. ನೆರೆ ಮನೆಯ ಹಿಂದೂ ಕುಟುಂಬದವರ ಮುಖಾಂತರ ಬೀಡಿ ಎಲೆ

ಸ್ವಯಂ ಉದ್ಯೋಗಕ್ಕೆ ಮಾರ್ಗದರ್ಶಿ-ಅವೇಕ್

● ಭಾರತಿ

ಸ್ವಂತ ಉದ್ದಿಮೆ ಸ್ಥಾಪಿಸಬೇಕೆಂದು ನಿರ್ಧರಿಸಿ 'ಮುಂದಿನ ಹೆಜ್ಜೆ ಹೇಗೆ' ಎಂದು ಯೋಚಿಸುತ್ತಿರುವಿರಾ ?

ಕರ್ನಾಟಕ ಮಹಿಳಾ ಉದ್ಯಮಿಗಳ ಸಂಸ್ಥೆ (ಅವೇಕ್) ನಿಮಗೆ ಉತ್ತರವಾದೀತು.

ದುಡಿಮೆ ಕ್ಷೇತ್ರದಲ್ಲಿ ವ್ಯಥವಾದ ಹೆಜ್ಜೆ ಊರಿರುವ ಮಹಿಳೆ ಇಂದು ಸ್ವಂತ ಉದ್ದಿಮೆಯತ್ತ ದಾಪುಗಾಲು ಹಾಕಿದ್ದಾಳೆ. ಹೀಗೆ ಸ್ವಂತ ಉದ್ದಿಮೆ ಸ್ಥಾಪಿಸಿದವರ ಸಂಸ್ಥೆಯಾಗಿ ರೂಪುಗೊಂಡ 'ಮಹಿಳಾ ಉದ್ಯಮಿಗಳ ಸಂಘಟನೆ'ಯ ಮುಖ್ಯ ಉದ್ದೇಶವೆಂಥರೆ ಉದ್ದಿಮೆ ಸ್ಥಾಪಿಸಬೇಕೆಂದಿರುವ ಮಹಿಳೆಯರಿಗೆ ಉಚಿತ ಮಾರ್ಗದರ್ಶನ ನೀಡುವುದು. ಉದ್ದಿಮೆ ರಂಗದ ಸ್ಥಿತಿಗತಿ, ಮಾರುಕಟ್ಟೆ ವಿವರ, ಅನುಸರಿಸಬೇಕಾದ ಕ್ರಮಗಳು ಇವೇ ಮುಂತಾದವುಗಳ ಬಗ್ಗೆ ಈ ಸಂಸ್ಥೆ ಸಲಹೆ ನೀಡುತ್ತದೆ. ಆದುದರಿಂದಲೇ ಇದೊಂದು ಸ್ವಯಂ ಸೇವಾ ಅಭಿವೃದ್ಧಿ ಸಂಸ್ಥೆ ಎನ್ನುತ್ತಾರೆ, ಸಂಸ್ಥೆಯ ಅಧ್ಯಕ್ಷೆ ಮಧುರಾ ಛತ್ರಪತಿ.

ಹಾಗಾದರೆ ಈ ಸಂಸ್ಥೆಯನ್ನು ಸಂಪರ್ಕಿಸುವ ಮಹಿಳೆಯರಿಗೆ ಉದ್ದಿಮೆ ಸ್ಥಾಪಿಸಲು ಹಣಕಾಸಿನ ನೆರವನ್ನೂ ಕೊಡಲಾಗುವುದೇ ?

'ಅದು ನಮ್ಮ ವ್ಯಾಪ್ತಿಯಲ್ಲಿ ಇಲ್ಲ. ಆದರೆ ಬ್ಯಾಂಕು ಅಥವಾ ಸಣ್ಣ ಉದ್ದಿಮೆ ಹಣಕಾಸು ಸಂಸ್ಥೆಗಳನ್ನು ಹೇಗೆ ಸಂಪರ್ಕಿಸಬೇಕೆಂಬ ಬಗ್ಗೆ ತಿಳುವಳಿಕೆ ಕೊಡುತ್ತೇವೆ. ಉತ್ಪಾದಿಸುವ ವಸ್ತುಗಳ ಮಾರಾಟಕ್ಕೆ ನಾವು ವ್ಯವಸ್ಥೆ ಮಾಡಲಾರೆವು' ಎಂದು ಮಧುರಾ ಹೇಳುತ್ತಾರೆ.

ಎಂಜನಿಯರಿಂಗ್ ಕೈಗಾರಿಕೆ, ಎಲೆಕ್ಟ್ರಾನಿಕ್ಸ್ ಉಪಕರಣ, ಪ್ಲಾಸ್ಟಿಕ್, ಆಹಾರ ಪದಾರ್ಥ ಇವೇ ಮುಂತಾದ ಉದ್ದಿಮೆ ಹೊಂದಿರುವ ನೂರಕ್ಕೂ ಹೆಚ್ಚು ಮಹಿಳೆಯರು ಈ ಸಂಸ್ಥೆಯ ಸದಸ್ಯರು. ಇವರಲ್ಲಿ ಲಲಿತಮ್ಮ ಅಪರೂಪದ ವ್ಯಕ್ತಿ.

'ಹೆಣ್ಣು ಛಲದಿಂದ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳಬೇಕು. ಬೇರೆಯವರ ಕೃಪೆಗೆ ಖಂಡಿತಾ ಸಿಕ್ಕಿಹಾಕಿಕೊಳ್ಳಬಾರದು' ಎಂದು ಹೇಳುವ ಲಲಿತಮ್ಮ, ಹೊಗಸರಿಗೆ ಅಪರೂಪವೆನಿಸುವ ರೇಷ್ಮೆ ನೂಲುತೆಗೆಯುವ ಕಾರ್ಖಾನೆಯನ್ನು ನಡೆಸುತ್ತಿದ್ದಾರೆ. ಸುಮಾರು ಎರಡು ದಶಕದ ಹಿಂದೆ ಇವರು ನೂಲು ತೆಗೆಯುವ ಯಂತ್ರ ತಂದಾಗ ಬಂಧುಗಳು ಗೇಲಿ ಮಾಡಿದರು. ಆದರೆ ಛಲವಾದಿಯಾದ ಲಲಿತಮ್ಮ ಅದಕ್ಕೆಲ್ಲ ಕಿವಿಗೊಡಲಿಲ್ಲ. ಸಾಹಸಮಾಡಿ ಯಶಸ್ವಿಯಾದರು.

ಶ್ರೀರಾಮಪುರದಲ್ಲಿರುವ ಹನುಮಾನ್ ಸಿಲ್ಕ್ ಸೆಂಟರ್ ಮಾಲಿಕರಾದ ಲಲಿತಮ್ಮನಿಗೆ ಈಗ 54 ರ ಪ್ರಾಯ. ಅವರನ್ನು ಸಂದರ್ಶಿಸಿದಾಗ ಅವರ ನೆನಪಿನ ಬುತ್ತಿ ಬಿಚ್ಚಿಕೊಂಡಿತು. ಸ್ವಂತ ಬದುಕಿನಿಂದ ರಾಜಕೀಯದವರೆಗೆ ನಿರರ್ಗಳವಾಗಿ ಮಾತನಾಡಿದರು.

'ಎಳೆವಯಸ್ಸಿನಲ್ಲಿಯೇ ವಿವಾಹವಾಯ್ತು. ತಾಯಿ ಮೇಲೆ ಇಂದಿಗೂ ಸಿಟ್ಟಿದೆ. ಓದುವ ಆಸೆ ಇದ್ದರೂ ಅವಕಾಶ ಕೊಡಲಿಲ್ಲ. ಸ್ವಲ್ಪಕಾಲವಾದ ಮೇಲೆ ಗಂಡನಿಗೆ ಬುದ್ಧಿ ಭ್ರಮಣೆ ಆಯ್ತು. ಚಿಕ್ಕ ಮಕ್ಕಳು......ಯಾರು ಸಹಾಯ ಮಾಡುತ್ತಾರೆ ? ಒಡಹುಟ್ಟಿದವರೇ ಆದಿಯಾಗಿ ಎಲ್ಲಾ ದೂರ ಸರಿದರು. ಇವರ ಹಂಗು ನನಗ್ಯಾಕೆ ? ರೇಷ್ಮೆ ನೂಲು ತೆಗೆಯುವ ಬಗ್ಗೆ ಕಲಿತುಕೊಂಡೆ! ಪ್ರಾಮಾಣಿಕ ದುಡಿಮೆಯಿಂದ ಗಿರಾಕಿಗಳ ವಿಶ್ವಾಸ ದೊರೆಯಿತು'—ಇದು ಲಲಿತಮ್ಮನ ಕತೆ.

'ನಾವು ಸ್ವಾಭಿಮಾನ ಉಳ್ಳವರಾದರೆ ಎಂದೂ ಯಾರ ಹತ್ರಾನೂ ಬೇಡಬಾರದು. ಈವತ್ತಿಗೂ ನನಗೆ ಭಿಕ್ಷುಕರೆಂದರೆ ಮೈ ಉರಿಯುತ್ತೆ. ದುಡೀಬೇಕು, ಸಂಪಾದಿಸಬೇಕು. ಪ್ರಾಮಾಣಿಕವಾಗಿ ಕೆಲಸ ಮಾಡಿ, ಸಮಯಕ್ಕೆ ಸರಿಯಾಗಿ ಮಾಲು ಕೊಟ್ಟರೆ ಯಾರೂ ಏಕೆ ತಪ್ಪು ಕಂಡು ಹಿಡೀತಾರೆ ?' ಎಂದು ಅವರು ಪ್ರಶ್ನಿಸುತ್ತಾರೆ.

85ರ ಸೆಪ್ಟೆಂಬರ್ ಕೊನೆಯ ವಾರದಲ್ಲಿ ನಾನು ಈ ಹೆಣ್ಣು ಮಗಳನ್ನು ವೆನ್‌ಲಾಕ್ ಆಸ್ಪತ್ರೆಯಲ್ಲಿ ಭೇಟಿಯಾದಾಗ ಆಕೆ ಅಳುತ್ತಾ ಇದೆಲ್ಲವನ್ನೂ ನನಗೆ ತಿಳಿಸಿದಳು. "ಎರಡೂವರೆ ವರ್ಷಗಳಿಂದ ನಾನು ನನ್ನ ತಂದೆ ತಾಯಿಗಳ ಮುಖವನ್ನೂ ನೋಡಿರಲಿಲ್ಲ. 'ಗಂಡನ ಸಂಬಂಧಿತರ ಮದುವೆಗೆ ಕೂಡಾ ನನ್ನ ಅತ್ತೆಯೇ ಹೋಗುತ್ತಿದ್ದರೇ ವಿನಹ ನನ್ನನ್ನು ಕಳುಹಿಸುತ್ತಿರಲಿಲ್ಲ. ತುಂಬ ಬೇಸರವಾದ ದಿನ ನನ್ನ ಇದೇ ಮೈದುನ ಹಮೀದ್ ಹಾಜಿಯವರ ಮನೆಗೆ ಹೋಗಿ ಒಂದು ದಿನ ಇದ್ದು ಬರುತ್ತಿದ್ದೆ. ಅವರ ಮೊದಲ ಪತ್ನಿ ಒಳ್ಳೆಯವರು. "ಆ ಹುಡುಗಿಗೆ ಯಾಕೆ ತೊಂದರೆ ಕೊಡುತ್ತೀರಿ ? ನಮಗೂ ಹೆಣ್ಣು ಮಕ್ಕಳಿಲ್ಲವೇ ?" ಎಂದು ಆಕೆ ಗಂಡನೊಡನೆ ಕೇಳಿದಾಗ, "ನೀನು ಬಾಯಿ ತೆರೆದರೆ ನಿನ್ನನ್ನೂ ಹಾಗೆಯೇ ಮಾಡುತ್ತೇನೆ !" ಎಂದು ಅವರು ಆಕೆಯನ್ನು ಬೆದರಿಸಿದರಂತೆ ನನ್ನ ಮೈ ಮೇಲಿನ ಎಲ್ಲಾ ಒಡವೆಗಳನ್ನೂ ನಾನೇ ತೆಗೆದು ನನ್ನ ಪತಿಯವರ ಕೈಯಲ್ಲಿಟ್ಟಿದೆ. ಈಗ ಅವರನ್ನುತ್ತಾರಂತೆ, 'ಆಕೆ ಒಡವೆಗಳನ್ನು ತನ್ನ ಮಿಂಡರಿಗೆ ಕೊಟ್ಟಿದ್ದಾಳೆ !' ಎಂದು.

"ನಾನು ಇಷ್ಟೆಲ್ಲ ಕಷ್ಟಗಳನ್ನೂ ಕಿರುಕುಳಗಳನ್ನೂ ಸಹಿಸಿದ್ದು ನನ್ನ ಗಂಡ ನನಗಿರಲಿ; ಅವರು ನನ್ನ ಮಕ್ಕಳಿಗೆ ತಂದೆಯಾಗಿರಲಿ ಎಂದು ಈಗ ನನಗೆ ಗಂಡನೇ ಇಲ್ಲವಾದರಲ್ಲ ?" ಎಂದು ಬಿಕ್ಕಳಿಸಿ ಅಳುತ್ತಾಳೆ ಆಯಿಷಾ. "ಅವರು ಬಂದು ನನ್ನನ್ನೊಮ್ಮೆ ಭೇಟಿಯಾದರೆ ನಾನವರಿಗೆ ಎಲ್ಲವನ್ನೂ ವಿವರಿಸಬಲ್ಲೆ. ಆದರೆ ಆ ದುಷ್ಟರು ಅವರನ್ನು ನನ್ನ ಬಳಿ ಬರಲು ಬಿಡಲಾರರು. ನಾನು ಆಸ್ಪತ್ರೆಯಲ್ಲಿರುವುದು ತಿಳಿದರೆ ಅವರು ಖಂಡಿತವಾಗಿ ನನ್ನ ಬಳಿ ಬರುತ್ತಿದ್ದರು. ಅವರು ತುಂಬ ಒಳ್ಳೆಯವರು. ಆ ದುಷ್ಟರು ಅವರನ್ನು ಈ ರೀತಿ ಬದಲಾಯಿಸಿದ್ದಾರೆ." ಎಂದು ರೋಧಿಸುತ್ತಾಳೆ ಆಕೆ.

ಸೆಪ್ಟೆಂಬರ್ ದಿನಾಂಕ 25'ರಂದು ತಾನು ಆಯಿಷಾಳಿಗೆ ತಲಾಖ್ ಕೊಟ್ಟಿರುವುದಾಗಿ ರಜಾಕ್ ಪತ್ರಿಕೆಗಳಲ್ಲಿ ಹೇಳಿಕೆಯಿತ್ತಿದ್ದಾನೆ.

ಇದು ಓರ್ವ ಹೆಸಣಬ್ಬ ಮತ್ತು ಮಗಳ ಕತೆ. ಇಂತಹ ಹಲವಾರು ಹಸಣಬ್ಬ ಮತ್ತು ಆಯಿಷಾರು ಇಂದು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಸಾಕಷ್ಟು ಸಂಖ್ಯೆಯಲ್ಲಿ ದೊರೆಯಬಹುದು. ಮಾತ್ರವಲ್ಲ ಈ ರೀತಿ ಪತಿ ಮತ್ತು ಆತನ ಕುಟುಂಬದಿಂದ ಚಿತ್ರಹಿಂಸೆಗೀಡಾಗಿ ವಿಚ್ಛೇದನ ಪಡೆದ ಹಿಂದೂ ಮಹಿಳೆಯರೂ ಇರಬಹುದು. ಆದರೆ ಒಂದೇ ವ್ಯತ್ಯಾಸ. ಈ ದೇಶದಲ್ಲಿ ಪತಿಯಿಂದ ವಿಚ್ಛೇದಿತಳಾದ ಹಿಂದೂ ಮಹಿಳೆಗೆ ಜೀವನಾಂಶ ಕೇಳುವ, ಪಡೆಯುವ ಹಕ್ಕಿದೆ. ಆದರೆ ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಗೆ ಜೀವನಾಂಶ ಕೇಳುವ, ಪಡೆಯುವ ಹಕ್ಕಿಲ್ಲ !

"ನೀವು ಇಂಥ ಉದ್ದಿಮೆ ಆರಿಸಿಕೊಳ್ಳಲು ಕಾರಣ ?"

"ಏನಾದರೂ ಮಾಡ್ಬೇಕು ಅಂತ ಯೋಚಿಸ್ತಾ ಇದ್ವಿ. ಮಾರ್ಕೆಟ್ ಸಮೀಕ್ಷೆ ಮಾಡಿದಾಗ ಐಸ್ ತಯಾರಿಕೆ ಬಗ್ಗೆ ಮನಸ್ಸಿಗೆ ಬಂತು. 1982 ರಲ್ಲಿ ಉತ್ಪಾದನೆ ಆರಂಭವಾಯ್ತು. 25 ಕೆ. ಜಿ. ಐಸ್ ಬ್ಲಾಕ್ಸ್ ಮಾಡ್ತೀವಿ. ಮೊಥ ಮೊದಲು ಹೋಟೇಲ್ ಅಶೋಕದಂಥ ಗ್ರಾಹಕರು ಸಿಕ್ಕಿ ಸರಾಗವಾಗಿ ನಡೆದು ಕೊಂಡು ಹೋಯಿತು. ಕ್ರಮೇಣ ಬೇರೆ ಬೇರೆಯವರ ಪರಿಚಯ ಆಯ್ತು. ಐಸ್ ಜೊತೆಗೆ ಡಿಸ್ಟಿಲ್ಡ್ ವಾಟರ್ ಕೂಡ ಮಾಡ್ತೀವಿ. ನಮ್ಮದು ಕಾಂಟ್ರಾಕ್ಟ್ ಆರ್ಡರ್. ಆದುದರಿಂದ ತೊಂದರೆ ಇಲ್ಲ..."

"ಶುರುವಿನಲ್ಲಿ ನಿಮ್ಮ ಮನೆಯವರ ನೆರವು..."

"ಸ್ವಲ್ಪ ಸಲಹೆ ಮಾತ್ರ. ರಿಜಿಸ್ಟ್ರೇಷನ್‌ನಿಂದ ಹಿಡಿದು ಲೈಸೆನ್ಸ್‌ವರೆಗೆ ನಾವೇ ಒಡಾಡಿದೆವು. ಆಗ 'ಅವೇಕ್' ಸಂಘ ಸಂಸ್ಥೆ ಇರಲಿಲ್ಲ. ಈಗ ನಾವೇ ನಮ್ಮ ಅನುಭವಾನ ಬೇರೆಯವರಿಗೆ ಹೇಳಬಹುದು."

"ನೀವು ಎದುರಿಸಿದ ಮುಖ್ಯ ಸಮಸ್ಯೆ ?"

"ಬ್ಯಾಂಕ್‌ನಿಂದಲೇ ಸಮಸ್ಯೆಯಾಗಿತ್ತು. ಅವರು ಮೊದಲು ನಮ್ಮನ್ನು ಅರ್ಥ ಮಾಡಿಕೋಬೇಕು. ಸಣ್ಣ ಉದ್ದಿಮೆದಾರರಿಗೆ ಹೆಚ್ಚಿನ ಪ್ರೋತ್ಸಾಹಬೇಕು. ಆದರೆ ಕರ್ನಾಟಕ ಹಣಕಾಸು ನಿಗಮದಿಂದ ಮಾತ್ರ ಏನೂ ತೊಂದರೆ ಆಗಲಿಲ್ಲ. ಬ್ಯಾಂಕ್ ಈಗ ಸಹಕರಿಸುತ್ತಿದೆ."

ಏನೂ ಹಿನ್ನೆಲೆ ಇಲ್ಲದೆ ಬರುವ ಮಹಿಳೆಯರಿಗೆ 'ಅವೇಕ್' ಕೊಡುವ ಪ್ರಾಥಮಿಕ ಸಲಹೆಗಳೇನು ?

"ನಮ್ಮಲ್ಲಿಗೆ ಬರುವ ಅನೇಕ ಮಹಿಳೆಯರು ಹಣ ಮಾಡುವಂಥದನ್ನು ಹೇಳಿ ಎಂದು ಕೇಳು ತ್ತಾರೆ. ನಾವು ಅವರ ಮನೆ ಪರಿಸ್ಥಿತಿ, ಅವರ ಆಸಕ್ತಿ ಇದನ್ನೆಲ್ಲ ತಿಳಿದುಕೊಳ್ಳುತ್ತೇವೆ. ಉದಾಹರಣೆಗೆ ಒಬ್ಬರು ವಿಧವೆ ಬಂದರು. ಆಗ ತಾನೇ ಅವರ ಗಂಡನ ಹಣವೆಲ್ಲ ಬಂದಿತ್ತು. 'ಏನಾದ್ರೂ ಮಾಡ ಬೇಕು, ಸಲಹೆ ಕೊಡಿ' ಅಂದ್ರು. ಆದರೆ ಅವರ ಸ್ಥಿತಿಗತಿ ಕೇಳಿದ ಮೇಲೆ, ಅವರು ಇರುವ ಹಣವನ್ನೆಲ್ಲ ಬಂಡವಾಳ ಹಾಕುವುದು ಸರಿ ಅಲ್ಲ ಎನಿಸಿತು. ಅದನ್ನೇ ಬ್ಯಾಂಕಿನಲ್ಲಿ ಇಡಿ. ಬಡ್ಡಿ ಬರುತ್ತೆ ಎಂದು ಹೇಳಿದೆವು" ಎನ್ನುತ್ತಾರೆ ಮಧುರಾ.

"ನಿಮ್ಮ ಸಂಘಟನೆಗೆ ತನ್ನದೇ ಆದ ಬೇಡಿಕೆ ಗಳಿವೆಯೆ ?"

"ನಾವು ಕಲೆಕ್ಟಿವ್ ಬಾರ್ಗೇನಿಂಗ್‌ಗಾಗಿ ಸಂಘಟಿತ ರಾಗಲಿಲ್ಲ. ಮೊದಲೇ ಹೇಳಿದಂತೆ ನಮ್ಮದು ಸಲಹಾ ಕೇಂದ್ರ. ಮಹಿಳೆ ಎಂಬ ಕಾರಣದಿಂದಲೇ ಸರ್ಕಾರದ ಬಳಿ ರಿಯಾಯ್ತಿ ಕೇಳುವುದು ನಮಗೆ ಇಷ್ಟವಿಲ್ಲ."

"ಬೇರೆ ಕಾರ್ಯಕ್ರಮ... ಬಹುಶಃ ನಿಮ್ಮ ಸದಸ್ಯೆ ಏನಾದರೂ ತೊಂದರೆ ಎದುರಿಸಿದರೆ ?"

"ಅಂಥ ಪ್ರಸಂಗ ಬಂದಾಗ ನಾವು ಹೋರಾಡಲು ಸಿದ್ಧ. ಉದಾಹರಣೆಗೆ ಅಪಾರ್ಟ್‌ಮೆಂಟ್ಸ್ ಕಟ್ಟಿಸ್ತಾ ಇದ್ದ ಯುವತಿಯೊಬ್ಬರು ಬಂದರು. ಅವರ ಉದ್ಯಮಕ್ಕೆ ಸಂಬಂಧಿಸುವನೊಬ್ಬ ಪೀಡಿಸುತ್ತಾನೆ ಎಂದರು. ಆತ ರಾಜಕೀಯ ಪ್ರಭಾವದ ವ್ಯಕ್ತಿ. ಇದನ್ನು ಸರಳವಾಗಿ ಪರಿಹರಿಸಬೇಕೆಂದು ರಾಜಕೀಯ ವ್ಯಕ್ತಿಗಳ ಮೂಲಕವೇ ಪ್ರಯತ್ನಿಸಲೆತ್ನಿಸಿದೆವು. ಏಕೆಂದರೆ ಎಲ್ಲಿಯವರೆಗೆ ಪೊಲೀಸ್ ರಕ್ಷಣೆ ಸಾಧ್ಯ ? ಹೇಗೋ, ಏನೊ ಅಂತೂ ಈ ಯುವತಿಗೆ ಪರಿಹಾರ ಕಂಡು ಬಂದಿತು. ಇಂಥ ವಿಚಾರಗಳು ಬಂದಾಗ ನಾವು ಬಗೆಹರಿಸುವ ಕ್ರಮ ಕೈಗೊಳ್ಳುತ್ತೇವೆ ಎಂದಷ್ಟೇ ಹೇಳ ಬಲ್ಲೆ."

ಮಹಿಳಾ ಉದ್ಯಮಿಗಳ ಸಂಸ್ಥೆ ಹುಟ್ಟಿದ್ದು 1983 ರ ಡಿಸೆಂಬರ್‌ನಲ್ಲಿ. ಉಪ್ಪಿನಕಾಯಿ ಮಾರು ವರಿಂದ ಹಿಡಿದು ಆಧುನಿಕ ಎಲೆಕ್ಟ್ರಾನಿಕ್ಸ್ ಉಪಕರಣ ಮಾಡುವವರು ಇದರ ಸದಸ್ಯರಾಗಿದ್ದಾರೆ. ಎರಡು ವರ್ಷದಲ್ಲಿ ಇದು ರಾಷ್ಟ್ರಖ್ಯಾತಿ ಪಡೆದುಕೊಂಡಿದೆ.


ಮೊದಲು ಈ ಸಂಘಟನೆ ಕೇವಲ ಮೇಲ್ವರ್ಗ ದವರ, ಆಧುನಿಕ ಉಪಕರಣ ತಯಾರಕರ ಸಂಸ್ಥೆ ಯಾಗಬಾರದೆಂಬುವುದು ಮುಖ್ಯ. 'ನಮ್ಮಲ್ಲಿ ಮಧ್ಯಮ ವರ್ಗದವರು ಹೆಚ್ಚು' ಎಂದು ಹೇಳಿ ಕೊಂಡರೂ ಅತಿ ಸಣ್ಣ ಉದ್ದಿಮೆಗೆ ಇವರಿಂದ ಹೆಚ್ಚಿನ ಉತ್ತೇಜನ ಸಿಗಬೇಕು. ಗೃಹಕೈಗಾರಿಕೆ, ಚಿಲ್ಲರೆ ವ್ಯಾಪಾರಿಗಳು ಇವರ ಸಂಪರ್ಕಕ್ಕೆ ಬರಬೇಕು. ಇವರು ದುರ್ಬಲ ವರ್ಗದವರತ್ತ ತಾವೇ ಸರಿದು, ಅವರ ಸಣ್ಣ ವ್ಯಾಪಾರ ಅಭಿವೃದ್ಧಿಗೆ ಸೂಕ್ತ ಸಲಹೆ ನೀಡಬೇಕು. ಉದ್ದಿಮೆ ಸ್ಥಾಪನೆ ಇವರ ಗುರಿ ಅಲ್ಲ ನಿಜ. ಆದರೆ ಸ್ವಾವಲಂಬಿತರಾಗಬಯಸುವ ಮಹಿಳೆಗೆ, ಆರ್ಥಿಕವಾಗಿ ಹಿಂದುಳಿದವರಿಗೆ ಸ್ಪಷ್ಟ ಹೆಜ್ಜೆ ಇರಿಸುವ ಬಗ್ಗೆ ಸುಲಭ ಮಾರ್ಗ ಸೂಚನೆ ಅತ್ಯಗತ್ಯ. ●

'ಇಂಥದೊಂದು ಉದ್ದಿಮೆ ಒಬ್ಬರಿಂದಲೇ ನಿರ್ವಹಿಸುವುದು ಹೇಗೆ ಸಾಧ್ಯ ?'

'ಈಗ ಏಳೆಂಟು ಕೆಲಸಗಾರರಿದ್ದಾರೆ. ಮೊದಲು ನಾನೇ ಹೆಚ್ಚು ಕೆಲ್ಸ ಮಾಡುತ್ತಾ ಇದ್ದೆ. ಮೂಟೆ ಹೊರೋಕೂ ನಾವು ಸಿದ್ಧವಾಗಿರಬೇಕು. ನಮ್ಮ ದೇಶದಲ್ಲಿ ಕೀಳರಿಮೆ ಇರೋದ್ರಿಂದ ದೇಶ ಹೀಗಾಗಿದೆ.'

'ಮಹಿಳೆಯರಿಗೆ ಆದ್ಯತೆ ಕೊಡುವಿರಾ ?'

'ಹೆಣ್ಣು ಮಕ್ಕಳಿಗೆ ಹೆಚ್ಚು ಕೆಲಸ ಕೊಡುತ್ತೇನೆ. ನಾಳೆ ಅವರೇ ಮಗ್ಗ ಹಾಕಿಕೊಂಡರೂ ಸರೀನೆ. ಏನೇ ಆದರೂ ಹೆಣ್ಣು ಮಕ್ಕಳು ಓದಬೇಕು. ದುಡೀಬೇಕು. ನಮ್ಮ ತಂದೆ, ತಾಯಿ ಓದಿಸದೆ ನಮಗೆ ಅನ್ಯಾಯ ಮಾಡಿದ್ರು. ಮಕ್ಕಳು ಹಾಗೆ ಆಗಬಾರದು'.



ಐಸ್ ತಯಾರಿಸುವ ಯಂತ್ರ ಮತ್ತು ಸಿದ್ಧವಾಗಿರುವ ಐಸ್ ಬ್ಲಾಕ್.

ಮಾತು ರಾಜಕೀಯದತ್ತ ಹೊರಳಿತು. 'ಸಮಾಜ ಕೊಳಕಾಗಿ ಹೋಗಿದೆ. ಪುಂಡರು, ಪೋಕರಿಗಳ ಬೀಡಾಗಿದೆ. ಯಾಕೆ ಹೀಗಾಗಿದೆ ? ನಮ್ಮ ಸರ್ಕಾರ ಅವರನ್ನು ಮಟ್ಟ ಹಾಕುವ ಬದಲು. ಬೆಳೆಸಿದೆ'

'ಹಾಗಾದ್ರೆ ಇವಕ್ಕೆ ಪರಿಹಾರ ? ಸರ್ಕಾರ ನಿಮ್ಮದೇ ತಾನೆ ? ನೀವೇ ವೋಟು ಹಾಕಿದ್ದು...'

'ಇವರು ಇಷ್ಟ ಇಲ್ಲ ಅಂಥ ನಾವು ಒಬ್ಬರು ವೋಟು ಹಾಕ್ಲಿಲ್ಲ ಅಂದರೆ ಸರಿ ಹೋಗುತ್ತ ? ಎಲ್ಲರೂ ತಿಳಿದುಕೊಳ್ಳಬೇಕು, ನಮಗೆ ಎಂಥವರು ಬೇಕು ಅಂತ. ಮೊದಲು ಜನರಿಗೆ ತಿಳುವಳಿಕೆ ಬರಬೇಕು'.

ಇನ್ನೊಂದು ಮುಖ

ಯಾವುದೇ ಹಿನ್ನೆಲೆ, ವಿದ್ಯೆ ಇಲ್ಲದೆ ಲಲಿತಮ್ಮ ತಮ್ಮ ಉದ್ದಿಮೆಯಲ್ಲಿ ಯಶಸ್ವಿಯಾಗಿದ್ದರೆ ಸುಧಾ ಪ್ರಕಾಶ್ ಮತ್ತು ಮಾಲತಿ ಕುಮಾರ್ ಅವರ 'ಲಿಂಕ್ ಇಂಡಸ್ಟ್ರಿ'ಗೆ ಅವರ ಮನೆ ವಾತಾವರಣವೇ ಪ್ರೇರಣೆ. ಸೋದರಿಯರಾದ ಸುಧಾ. ಮಾಲತಿ ಕೈಗಾರಿಕೋದ್ಯಮಿಗಳ ಕುಟುಂಬದಿಂದ ಬಂದವರು. ಸುಧಾ ಅವರ ಪತಿ ಕೂಡ ಉದ್ದಿಮೆದಾರರೇ. ಆದರೂ ಇವರಲ್ಲಿ ಕಂಡು ಬಂದ ಗಮನಾರ್ಹ ವಿಚಾರವೆಂದರೆ, ಇಂಥ ವಾತಾವರಣದಿಂದ ಬಂದಿದ್ದರೂ ಇವರು ತಮ್ಮ ಉದ್ದಿಮೆಗೆ ಆರಿಸಿಕೊಂಡಿರುವ ವಸ್ತು ಮಾತ್ರ ನಯವಾದುದಲ್ಲ. ಸ್ವಲ್ಪ ಅಪರೂಪವೆನಿಸುವ ಐಸ್‌ಫ್ಯಾಕ್ಟರಿಯನ್ನು ಇವರು ನಡೆಸುತ್ತಿದ್ದಾರೆ.

ಚಲನಸ್ವಾತಂತ್ರ್ಯ

ವೇದಕಾಲದ ಸಮಾಜದಲ್ಲಿ ಸ್ತ್ರೀಯರಿಗೆ ಪ್ರತ್ಯೇಕತೆಯಿತ್ತೆಂಬುದಕ್ಕೆ ಗುರುತುಗಳಿಲ್ಲ. ತಮ್ಮ ಗಂಡಂದಿರ ಅಥವಾ ಪ್ರೇಮಿಗಳ ಜೊತೆಯಲ್ಲಿಯೂ ನಿರಾತಂಕವಾಗಿ ವಿಹರಿಸಬಹುದಾಗಿತ್ತು. ವಧುವು ಸಾರ್ವಜನಿಕ ಸಭೆಗಳಲ್ಲಿ ವಾದಿನಿಯಾಗಿ ಪ್ರಕಾಶಿಸಲೆಂದು ಹಾರೈಸುವುದನ್ನು ವಿವಾಹಸೂಕ್ತದಲ್ಲಿ ಕಾಣಬಹುದು. ಇದರಿಂದ ಸ್ತ್ರೀಯರು ಸಾರ್ವಜನಿಕ ಜೀವನದಲ್ಲಿ ಭಾಗವಹಿಸುತ್ತಿದ್ದರು ಎಂದೂ ತಿಳಿದು ಬರುತ್ತದೆ. ವೇದಗಳ ಅನೇಕ ಭಾಗಗಳಲ್ಲಿ ಉಲ್ಲಿಖಿತವಾಗಿರುವ ಪ್ರೇಮ ವಿವಾಹಗಳೂ ಕೂಡ, ಪ್ರಾಪ್ತವಯಸ್ಕರಾದ ಕನ್ಯೆಯರಿಗೆ ಕೊಟ್ಟಿದ್ದ ಚಲನ ಸ್ವಾತಂತ್ರ್ಯಕ್ಕೆ ಗುರುತಾಗಿದೆ. ಸ್ತ್ರೀಯರು ನಡೆಸಿಕೊಂಡು ಬರುತ್ತಿದ್ದ ಬೋಧಕ ವೃತ್ತಿಯೂ, ಗಾರ್ಗಿಯಂತಹ ಪಂಡಿತೆಯರನ್ನು ಮಿಶ್ರಿತ ಸಾರ್ವಜನಿಕ ಚರ್ಚೆಗಳಲ್ಲಿ ವಹಿಸಿದ ಪಾತ್ರವೂ ವೇದಕಾಲದ ಸಮಾಜದಲ್ಲಿ ಸ್ತ್ರೀಯರನ್ನು ಪ್ರತ್ಯೇಕಿಸಿಟ್ಟಿರಲಿಲ್ಲ ಎಂಬುದಕ್ಕೆ ಸಾಕ್ಷ್ಯವಾಗಿವೆ.

ಉಪಸಂಹಾರ

ವೇದಕಾಲದ ಸಮಾಜದಲ್ಲಿ ಸ್ತ್ರೀಯರಿಗೆ ಪುರುಷರಿಗಿಂತ ಕಡಿಮೆಯಾದ ಸ್ಥಾನಮಾನವಿತ್ತೆಂದು ತೋರಿಸಲು ಯಾವ ಆಧಾರವೂ ಇಲ್ಲ. ವೈದಿಕ ಜೀವನದಲ್ಲೂ ಪುರುಷರಿಗೆ ಸರಿಸಮನಾದ ಸ್ಥಾನ ಅವರಿಗಿತ್ತು. ವೈದಿಕ ಋಷಿಯರಲ್ಲಿ ಸ್ತ್ರೀಯರೂ ಇದ್ದರು. ಯುದ್ಧದಲ್ಲಿ ಧೈರ್ಯದಿಂದ ಕಾದಾಡಿದ ಸ್ತ್ರೀಯರೂ ಇದ್ದರು. ವೇದಸಂಹಿತೆಯಿಂದ ಉಪನಿಷತು'ಗಳವರೆಗೆ ವೇದ ವಾಙ್ಮಯದ ಎಲ್ಲಾ ಗ್ರಂಥಗಳಲ್ಲಿಯೂ ಸ್ತ್ರೀಪುರುಷರಲ್ಲಿ ಪರಿಪೂರ್ಣ ಸಮಾನತೆ ಕಂಡುಬರುತ್ತದೆ. ವೇದಮಂತ್ರಗಳಲ್ಲಿ ಕೆಲವೆಡೆ ಬಹುವಲ್ಲಭರ ಉಲ್ಲೇಖವಿದ್ದರೂ, ಅಂತಹ ಸ್ತ್ರೀಯರನ್ನು ಕುರಿತು ಯಾವ ಬಗೆಯ ಕಳಂಕವನ್ನೂ ಹೇಳಿಲ್ಲ.

ಹೀಗೆ ವೇದಕಾಲದಲ್ಲಿ ಪುರುಷನ ಸರಿಸಮಳಾಗಿದ್ದ ಸ್ತ್ರೀಯು ಅನಂತರದ ಕಾಲದಲ್ಲಿ ಅವನತಿ ಹೊಂದುತ್ತಾ ಹೋಗಿ ಧರ್ಮಸೂತ್ರ ಹಾಗೂ ಮನುಸಂಹಿತೆಯ ಕಾಲಕ್ಕೆ ಪುರುಷನಿಂದ ರಕ್ಷಣೆ ಪಡೆಯುವ ಪರಾವಲಂಬನ ಸ್ಥಿತಿಗೆ ಇಳಿದಳು. ವೇದವನ್ನು ಅಭ್ಯಾಸಿಸುವ ಹಕ್ಕನ್ನು ಕಳೆದುಕೊಂಡಳು. ಹಲವು ಸ್ತ್ರೀಯರು ಪತಿಯ ಸೇವೆಗೂ ಕಾಮಭೋಗಕ್ಕೂ ಸೃಷ್ಟಿಯಾದವರಂತೆ ಬದುಕಿದರು, ಯಾವ ಸಾಮಾಜಿಕ ಹಾಗೂ ರಾಜಕೀಯ ಕಾರಣಗಳು ಇಂತಹ ಅವನತಿಗೆ ಸ್ತ್ರೀಯನ್ನು ಇಳಿಸಿದವು ಎಂಬುದು ಇಂದಿಗೂ ತಿಳಿಯದಾಗಿದೆ.

ಪ್ರಾಚೀನ ಭಾರತದಲ್ಲಿ ಮಹಿಳೆ-ಒಂದು ಟಿಪ್ಪಣಿ

ಡಾ|| ಜಿ. ರಾಮಕೃಷ್ಣ

ಪ್ರಾಚೀನ ಕಾಲದ ಸಂಸ್ಕೃತಿಯನ್ನಾಗಲಿ ಸನ್ನಿವೇಶವನ್ನಾಗಲಿ ವಿಮರ್ಶಿಸುವಾಗ ಎರಡು ಬಗೆಯ ದೃಷ್ಟಿಕೋನಗಳು ಸಾಧ್ಯ ಮತ್ತು ಅವೆರಡನ್ನೂ ಪ್ರತಿನಿಧಿಸುವಂತಹ ವಿದ್ವಾಂಸರು ನಮ್ಮಲ್ಲಿದ್ದಾರೆ. ವರ್ತಮಾನದ ಆಗು ಹೋಗುಗಳನ್ನು ಗಮನದಲ್ಲಿರಿಸಿ ಸ್ವಂತದ ಆಕಾಂಕ್ಷೆಗಳನ್ನು ಪ್ರತಿಫಲಿಸುವ ರೀತಿಯಲ್ಲಿ ಪ್ರಾಚೀನತೆಯನ್ನು ಅರ್ಥೈಸುವುದು ಒಂದು ರೀತಿ. ಇದರಲ್ಲಿ ಹಿಂದಿನ ಕೆಲವು ಪದ್ಧತಿಗಳ ವೈಭವೀಕರಣ ಯಥೇಚ್ಛವಾಗಿದ್ದು ಅನೇಕ ಸಂಗತಿಗಳನ್ನು ಮುಚ್ಚಿಹಾಕಲಾಗುತ್ತದೆ. ಹಿಂದಿನ ಸತ್ಯವನ್ನು ಇಂದು ಅಂಗೀಕರಿಸಬೇಕಾಗುತ್ತದೆಂಬ ಭೀತಿ ಮತ್ತು ಸಂಕೋಚ ಅದಕ್ಕೆ ಕಾರಣವಾಗಬಹುದು. ಉದಾಹರಣೆಯೊಂದನ್ನು ತೆಗೆದುಕೊಳ್ಳುವುದಾದರೆ ವೇದಕಾಲದಲ್ಲಿ ಗೋಮಾಂಸಭಕ್ಷಣೆ ಇತ್ತೆ ?— ಎಂಬ ಪ್ರಶ್ನೆಗೆ ದೊರಕುವ ಉತ್ತರ. ಅವರು ತಿನ್ನುತ್ತಿದ್ದರೆಂದರೆ ಅವರಿಗೆ ಅಪಚಾರವೇನೂ ಆಗುವುದಿಲ್ಲ ಮತ್ತು ನಾವೂ ತಿನ್ನಬೇಕೆಂದು ಅದರ ಫಲಿತಾರ್ಥವೂ ಅಲ್ಲ. ಆದರೂ ಅದನ್ನೊಪ್ಪಲು ನಮ್ಮ ಅನೇಕ ವಿದ್ವಾಂಸರಿಗೆ ಅಂಜಿಕೆಯಾಗುತ್ತದೆ. ಈ ಪದ್ಧತಿಗೆ ಭಿನ್ನವಾಗಿ ಪ್ರಾಚೀನ ಕಾಲವನ್ನು ನಮಗೆ ಲಭ್ಯವಿರುವ ಆಧಾರಗಳಿಂದ ವಸ್ತುನಿಷ್ಠವಾಗಿ ಮತ್ತು ಚಾರಿತ್ರಿಕವಾಗಿ ಪ್ರತಿಪಾದಿಸುವುದು ಇನ್ನೊಂದು ಮಾರ್ಗ. ಆ ಆಧಾರ

ಮಹಿಳೆಯರ ಸ್ಥಾನಮಾನದ ಬಗ್ಗೆ ಮಾತನಾಡುವವರೆಲ್ಲರೂ ಪ್ರಾಚೀನಕಾಲದಲ್ಲಿನ ಸ್ತ್ರೀಯರ ಸ್ವಾತಂತ್ರ್ಯ ಕುರಿತು ಹೇಳುತ್ತಾರೆ. ಈ ಎರಡು ಲೇಖನಗಳಲ್ಲಿ ಪ್ರಾಚೀನಕಾಲದಲ್ಲಿನ ಸ್ತ್ರೀ ಸ್ಥಾನಮಾನದ ಬಗ್ಗೆ ಚರ್ಚಿಸಲಾಗಿದೆ

ವೇದಕಾಲದಲ್ಲಿ ಸ್ತ್ರೀಯರ ಸ್ಥಾನ

ವೇದಕಾಲದಲ್ಲಿ ಸ್ತ್ರೀಯರ ಸ್ಥಾನವು ತದನಂತರದಕಾಲಕ್ಕಿಂತಲೂ ಹೆಚ್ಚು ಸಮರ್ಪಕವಾಗಿತ್ತು. ಪುತ್ರ ಜನನದಷ್ಟು ಸ್ವಾಗತಾರ್ಹವಲ್ಲದಿದ್ದರೂ ಹೆಣ್ಣು ಮಕ್ಕಳನ್ನು ಬೇಡದ ಮಕ್ಕಳೆಂದು ಭಾವಿಸುತ್ತಿರಲಿಲ್ಲ. ಬಾಲಕರಂತೆಯೇ ಅವರೂ ವಿದ್ಯೆಯನ್ನು ಅಭ್ಯಸಿಸುತ್ತಿದ್ದರು. ಬ್ರಹ್ಮಚಾರಿಣಿಯಾಗಿ ವಿದ್ಯಾಭ್ಯಾಸ ಮಾಡದಿದ್ದ ವಧುವಿಗೆ ಒಳ್ಳೆಯ ವರನೊಡನೆ ವಿವಾಹ ಆಗುವ ಯೋಗವಿರಲಿಲ್ಲವೆಂದು ಅಥರ್ವವೇದದಿಂದ ತಿಳಿದು ಬರುತ್ತದೆ. ಹೆಣ್ಣುಮಕ್ಕಳ ಉಪನಯನ ಪದ್ಧತಿಯು ಋಗ್ವೇದ ಸಂಹಿತೆಯ ಕಾಲದಿಂದ ಹಿಡಿದು ಸೂತ್ರ ಸಾಹಿತ್ಯದ ಕಾಲದವರೆಗೂ ಆಚರಣೆಯಲ್ಲಿದ್ದಿತು. ಪುರುಷರಂತೆಯೇ ಸ್ತ್ರೀಯರೂ ಸಹ ಗಾಯತ್ರೀ ಮಂತ್ರವನ್ನು ಹೇಳುತ್ತಿದ್ದರು ಹಾಗೂ ವೇದಾಧ್ಯಯನ ಮಾಡುತ್ತಿದ್ದರು.

ವೇದಗಳಲ್ಲಿ ಬರುವ ಕೆಲವು ಸೂಕ್ತಗಳನ್ನು ಸ್ತ್ರೀಯರೇ ರಚಿಸಿದರು. ಲೋಪಾಮುದ್ರಾ, ವಿಶ್ವವಾರಾ, ಕಾಕ್ಷಿವತಿ ಘೋಷಾ, ಅಪಾಲಾ, ರೋಮಶಾ, ಅಂಭೃಣೆ ವಾಕ್, ಜುಹುಪೌಲೋಮಿ, ಜಾರಿತಾ, ಶ್ರದ್ಧಾಕಾಮಯಾನಿ ಮುಂತಾದವರು ಋಗ್ವೇದದ ಸ್ತ್ರೀ ದೃಷ್ಟಾರರು. ಹಾಗೆಯೇ ನೋಧಾ, ಗೋಪಾಯನಾ, ಅಕೃಷ್ಟಭಾಷಾ, ಸಿಕತಾ ನಿವಾವರೀ ಮುಂತಾದವರು ಸಾಮವೇದದ ಸ್ತ್ರೀದೃಷ್ಟಾರರು. ಈ ಸ್ತ್ರೀಯರನ್ನು ಬ್ರಹ್ಮವಾದಿನಿಯರೆಂದು ಕರೆದಿದ್ದಾರೆ. ಶೌನಕನು ಋಗ್ವೇದದ ಬಗ್ಗೆ ಬರೆದ 'ಬೃಹದ್ದೇವತಾ' ದಲ್ಲಿ ಇಂತಹ ಇಪ್ಪತ್ತೇಳು ಬ್ರಹ್ಮವಾದಿನಿಯರನ್ನು ಹೆಸರಿಸಿದ್ದಾನೆ. ವೇದಕಾಲದಲ್ಲಿ ಭಾರತೀಯ ಮಹಿಳೆ ವಿದ್ಯಾಭ್ಯಾಸರಂಗದಲ್ಲಿ, ಸಾಂಸ್ಕೃತಿಕ ಜೀವನದಲ್ಲಿ, ಜೀವನದ ಎಲ್ಲಾ ಪ್ರಕಾರಗಳಲ್ಲಿ ಉನ್ನತಿಯನ್ನು ಹೊಂದಿದ್ದಳು.

ವೇದಕಾಲದಲ್ಲಿ ಸ್ತ್ರೀಯರು ಗುರುಗಳೂ ಆಗಿರುತ್ತಿದ್ದರೆಂಬುದು ಪಾಣಿನಿಯ ವ್ಯಾಕರಣದಿಂದ ತಿಳಿದು ಬರುತ್ತದೆ. ತಾವೇ ಸ್ವತಃ ಗುರುಗಳಾದ ಬ್ರಹ್ಮವಾದಿನಿಯರನ್ನು 'ಉಪಾಧ್ಯಾಯಾ', 'ಉಪಾಧ್ಯಾಯಿ', 'ಆಚಾರ್ಯಾ' ಎಂದು ಗೌರವದಿಂದ ಸಂಬೋಧಿಸಲಾಗುತ್ತಿತ್ತು. ಸ್ವತಃ ಗುರುಗಳಲ್ಲದ ಕೇವಲ ಗುರುಪತ್ನಿಯರನ್ನು 'ಉಪಾಧ್ಯಾಯಾನಿ', 'ಆಚಾರ್ಯಾನೀ' ಎಂದು ಸಂಬೋಧಿಸಲಾಗುತ್ತಿತ್ತು. ಅವರಿಗಾಗಿಯೇ ಪ್ರತ್ಯೇಕ ಹೆಸರುಗಳನ್ನು ಇಡುವಂತಹ ಅವಶ್ಯಕತೆಯನ್ನು ಉಂಟು ಮಾಡುವಷ್ಟು ಮಟ್ಟಿನ ವೇದಪಾಂಡಿತ್ಯವನ್ನು ಪಡೆದಿದ್ದ ವೇದಕಾಲದ ಬ್ರಹ್ಮವಾದಿನಿಯರ ಬಗ್ಗೆ ಪಾಣಿನಿ ಮತ್ತು ಪತಂಜಲಿ ಇಬ್ಬರೂ ಬರೆದಿದ್ದಾರೆ. ಹಾಗೆಯೇ ಕಠ ವೇದಶಾಖಾಧ್ಯಾಯಿಗಳಾದ ಸ್ತ್ರೀಯರನ್ನು 'ಕಠೀ' ಎಂದೂ ಋಗ್ವೇದ ಶಾಖಾಧ್ಯಾಯಿಗಳಾದ ಸ್ತ್ರೀಯರನ್ನು 'ಬಹವೃಚಾ' ಎಂದೂ ಕರೆಯಲಾಗುತ್ತಿತ್ತು. ಅಂತೆಯೇ

ಡಿ. ಆರ್. ರಾಮರಾವ್

ಆಪಿಶಾಲಿಯ ವ್ಯಾಕರಣವನ್ನು ಅಭ್ಯಾಸ ಮಾಡುತ್ತಿದ್ದ ಬ್ರಾಹ್ಮಣ ಮಹಿಳೆಯನ್ನು 'ಆಪಿಶಾಲೀ' ಎಂದೂ ಕಾಶಕೃತ್ಸನ್ನ ಮೀಮಾಂಸದ ಅಭ್ಯಾಸಿಯಾದ ಸ್ತ್ರೀಯನ್ನು 'ಕಾಶಕೃತ್ಸ್ನಾ' ಎಂದೂ ಕರೆಯಲಾಗುತ್ತಿತ್ತು. ಪಂಡಿತೆಯೂ, ಆಚಾರ್ಯಳೂ ಆದ ಓದಮೇಧ್ಯಾಳ ಶಿಷ್ಯೆಯರನ್ನು 'ಓಧಮೇಧಾ' ಎಂದು ಕರೆಯುತ್ತಿದ್ದರು.

ಋಗ್ವೇದ ಮಂತ್ರಗಳಿಂದ ಆಗಿನ ಕಾಲದಲ್ಲಿ ಸ್ತ್ರೀಯರಿಗೆ ಸೈನಿಕ ಶಿಕ್ಷಣವೂ ದೊರೆಯುತ್ತಿತ್ತೆಂಬುದು ತಿಳಿದು ಬರುತ್ತದೆ. ನಾಮುಚಿರಾಜನ ಹೆಂಡತಿಯು ಯುದ್ಧದಲ್ಲಿ ಭಾಗವಹಿಸಿದ್ದಳು, ಖೇಲರಾಜನ ಹೆಂಡತಿಯಾದ ವಿಶ್ಪಲಾ ಯುದ್ಧದಲ್ಲಿ ಗಾಯಗೊಂಡಿದ್ದಳು. ಇಂದ್ರಸೇನಾ ಮುದ್ಗಲಾನಿ ಎಂಬ ರಾಣಿಯು ರಾಜನಿಗೆ ಯುದ್ಧದಲ್ಲಿ ಸಾರಥಿಯಾಗಿದ್ದಳು ಮುಂತಾದ ವಿಷಯಗಳು ಋಗ್ವೇದದಲ್ಲಿ ಬರುತ್ತವೆ.

ಮಾಡುವ ಕಾರ್ಯವಿಧಾನ ಇನ್ನೂ ತಿಳಿದಿರಲಿಲ್ಲ. ನಿಸರ್ಗವು ನೇರವಾಗಿ ತಾನಾಗಿಯೇ ನೀಡುತ್ತಿದ್ದ ಸಂಪತ್ತನ್ನು ಅನುಭವಿಸುವುದಲ್ಲದೆ ತಾವೇ ಸ್ವತಃ ಸಂಪತ್ತನ್ನು ಸೃಷ್ಟಿಸುವ ತಂತ್ರ ಅವರಿಗೆ ಕರಗತವಾಗಿರಲಿಲ್ಲ. ಈ ಹಂತದಲ್ಲಿ ಪುರುಷ-ಮಹಿಳೆಯರ ಸಮಾನತೆಗೆ ಯಾವ ಅಡ್ಡಿಯೂ ಇದ್ದಿರಲಾರದು. ಬೇಟೆಯಾಡುವ ಪದ್ಧತಿ ಬರಬೇಕಾದರೆ ಕಲ್ಲು–ಮರಗಳನ್ನು ಆಯುಧಗಳನ್ನಾಗಿ ಮಾರ್ಪಡಿಸುವ ತಂತ್ರ ಬೆಳೆಯಬೇಕಾಗಿತ್ತು. ಹಾಗೆ ಬೇಟೆಯಾಡಲು ಪುರುಷನು ತಂಗುದಾಣದಿಂದ ಹೊರಹೋದಾಗ ಸುತ್ತಣ ಪರಿಸರವನ್ನು ಅಚ್ಚುಕಟ್ಟು ಮಾಡಹೊರಟ ಮಹಿಳೆ ಪ್ರಪ್ರಥಮ ಕೃಷಿಕಾರಳು. ಆಗಲೂ ಅವಳ ಸ್ಥಾನಕ್ಕೆ ಚ್ಯುತಿಯುಂಟಾಗುವ ಸಂಭವವಿರಲಿಲ್ಲ. ವೈದಿಕ ಸಾಹಿತ್ಯದಲ್ಲಿ ಈ ಎಲ್ಲ ಹಂತಗಳೂ ಪ್ರತಿನಿಧಿಸಲ್ಪಟ್ಟಿರುವುದು ಗಮನಾರ್ಹವಾದ ಅಂಶ. ಋಗ್ವೇದದಲ್ಲಿ ಬರುವ ಮಾತೃ ದೇವತೆಗಳ ಪ್ರಶಂಸೆ ಮೊದಲ ಹಂತಕ್ಕೆ ಸೇರುತ್ತದೆ ಮತ್ತು ಆಗ್ಗೆ ಮಹಿಳೆಯರಲ್ಲೂ ಕವಿಯಿತ್ರಿಗಳಿದ್ದುದು ಸ್ವಾಭಾವಿಕವಾಗಿದೆ.

ವೈದಿಕ ಸಮಾಜವು ಗಣಸಂಘಗಳ ಮಾದರಿಯಲ್ಲಿ ರೂಪುಗೊಂಡಿದ್ದಾಗ ಪ್ರತಿಯೊಂದು ಪ್ರತ್ಯೇಕ ಗಣದಲ್ಲೂ ಸಮಾನತೆಯಿದ್ದಿತಾದರೂ ಬೇರೆ ಗಣಗಳೊಂದಿಗೆ ಅವು ಹೊಂದಿದ್ದ ಸಂಬಂಧಗಳಲ್ಲಿ ಸಮಾನತೆ ಇರಲಿಲ್ಲ. ಅನೇಕ ಗಣಗಳ ನಡುವಣ ಘರ್ಷಣೆಗಳ ಪರಿಣಾಮವಾಗಿ ಇಡೀ ಗಣಸಂಘಗಳ ಪತನವಾಯಿತು ಮತ್ತು ಆಂತರಿಕ ಸಂಪರ್ಕಗಳು ಉನ್ನತ ಹಂತಕ್ಕೇರಿದುವು. ಕೃಷಿಯ ಪ್ರಾಥಮಿಕ ಘಟ್ಟದಲ್ಲಿದ್ದ ಮಾತೃಪ್ರಧಾನ ಕುಟುಂಬಗಳು ಪಿತೃಪ್ರಧಾನವಾದ ಕುಟುಂಬಗಳಾಗಿ ಪರಿವರ್ತನೆ ಹೊಂದಿದ್ದು ಈ ಕಾಲಘಟ್ಟದ ಇನ್ನೊಂದು ವೈಶಿಷ್ಟ್ಯ. ಮಾತೃದೇವತೆಗಳ ಸ್ಥಾನದಲ್ಲಿ ಇತರ ದೇವತೆಗಳು ಅವತರಿಸಿದ್ದು ಇದರ ಫಲಿತಾಂಶ. ಗಣಸಂಘಗಳ ಕಾಲದ ಚಿಂತನ ಮತ್ತು ಪೂಜಾವಿಧಿಗಳ ಬದಲಾಗಿ ನಂತರ ನಾವು ಕಾಣುವುದು ಬಹಳ ಸಂಕೀರ್ಣವಾದ ಯಜ್ಞ ಪದ್ಧತಿಯನ್ನು. ಭಾವನಾವಾದ ಮತ್ತು ಭೌತವಾದಗಳ ನಡುವಣ ವೈಪರೀತ್ಯವು ಸುಮಾರು ಇದೇ ಕಾಲಕ್ಕೆ ಉದ್ಭವಿಸಿ ಕ್ರಮೇಣ ಭಾವನಾವಾದದ ಮೇಲುಗೈಯಾದುದನ್ನು ನಾವು ಉಪನಿಷತ್ತುಗಳಲ್ಲಿ ಕಾಣುತ್ತೇವೆ. "ಆರ್ಯಾವರ್ತ"ದಲ್ಲಿ ಮೊದಲಿಗಿದ್ದ ಜನರ ಗುಂಪುಗಳ ಮತ್ತು ಹೊಸದಾಗಿ ಬಂದ ಆರ್ಯರ ಗಣಸಂಘಗಳ ನಡುವೆ ಉಂಟಾದ ತಿಕ್ಕಾಟಗಳ ಒಂದು ಉಗ್ರ ಪರಿಣಾಮವು ವರ್ಣ ವಿಂಗಡಣೆಯ ಸ್ವರೂಪದಲ್ಲಿ ಭಾರತೀಯ ಸಮಾಜವು ವಿಭಜನೆಯಾದುದನ್ನು ಸೂಚಿಸುತ್ತದೆ. ಈ ಎಲ್ಲ ಹಂತಗಳಲ್ಲೂ ಮಹಿಳೆಯ ಸ್ಥಾನವು ಬದಲಾಗುತ್ತಿದ್ದಿರಬೇಕೆಂಬುದು ಒಂದು ಸಹಜವಾದ ತೀರ್ಮಾನವೇ ಆಗಿದೆ.

ಇಡೀ ವೈದಿಕ ಸಾಹಿತ್ಯದಲ್ಲಿ ಮತ್ತು ಪ್ರಾಚೀನ ಭಾರತದಲ್ಲಿ ಮಹಿಳೆಗೆ ಉನ್ನತ ಸ್ಥಾನವಿದ್ದಿತೆಂದು ಪ್ರಲಪಿಸುವವರು ಮೇಲಿನ ತರ್ಕವನ್ನು ಮನನ ಮಾಡಿಕೊಳ್ಳುವುದೊಳ್ಳೆಯದು. ಜೊತೆಗೆ ಇನ್ನೂ ಒಂದೆರಡು ಮಾತುಗಳತ್ತ ಗಮನ ಹರಿಸಬಹುದು. ಪುರೂರವ–ಊರ್ವಶಿ ಸಂವಾದವೊಂದು ಋಗ್ವೇದದ ಕೊನೆಯ ಹಂತಕ್ಕೆ ಸೇರುವ ಹತ್ತನೆಯ ಮಂಡಲದಲ್ಲಿ ಬರುತ್ತದೆ. ಮಹಿಳೆಯೊಬ್ಬಳ ಬಾಯಲ್ಲಿ ಕವಿ ಹೇಳಿಸುವ ಮಾತಿನಲ್ಲಿ ಅಗಾಧವಾದ ಕಟಕಿಯೊಂದು ಇಲ್ಲಿ ಕಾಣಸಿಗುತ್ತದೆ. (ಗಣಸಂಘಗಳ ಹಂತದ ಯಾವ ಕವಿ–ಕವಿಯಿತ್ರಿಯರೂ ಇಂತಹ ಮಾತುಗಳನ್ನಾಡಿಲ್ಲವೆಂಬುದು ಮುಖ್ಯವಾದ ಅಂಶ). ಅಲ್ಲಿ ಬರುವ ಮಾತಿದು : "ನ ವೈ ಸ್ತ್ರೈಣಾನಿ ಸಖ್ಯಾನಿ ಸಂತಿ ಸಾಲಾವೃಕಾಣಾಂ ಹೃದಯಾನ್ಯೇತಾ." (ಸ್ತ್ರೀಯರು ಎಂದಿಗೂ ನಂಬಲರ್ಹವಾದ ಸಖ್ಯವನ್ನು ನೀಡಲಾರರು ; ಏಕೆಂದರೆ ಅವರದು ತೋಳಗಳ ಹೃದಯ !) ಐತರೇಯ ಬ್ರಾಹ್ಮಣಕ್ಕೂ ಋಗ್ವೇದದ ಹತ್ತನೆಯ ಮಂಡಲಕ್ಕೂ ನಡುವೆ ಒಂದೆರಡು ಶತಮಾನ

> ಗಣಸಂಘಗಳಲ್ಲಿ ಮಹಿಳೆಯರೂ ಕವಿಯಿತ್ರಿಯರಾಗಿದ್ದರೆಂಬುದನ್ನು ಹಿಂದೆಯೇ ಉಲ್ಲೇಖಿಸಲಾಗಿದೆ. ನಂತರದ ಕಾಲದಲ್ಲಿ ಗಣಸಂಘಗಳೊಡನೆ ಈ ಕವಿಯಿತ್ರಿಯರೂ ನಶಿಸಿಹೋದರು. ಆಗ ಉಂಟಾದ ಕ್ಷುಬ್ಧ ವಾತಾವರಣದಲ್ಲಿ "ದಸ್ಯು"ಗಳೆಂಬುವರು ಸಮಾಜ ಬಾಹಿರವಾಗಿ ನಿಂತ ಒಂದು ದೊಡ್ಡ ಜನಸಮೂಹ. ದಸ್ಯುಗಳಲ್ಲಿ ಪುರುಷ ಮತ್ತು ಮಹಿಳೆ ಎಂಬ ಕಾರಣದಿಂದ ಯಾವ ಅಸಮಾನತೆಯೂ ಅಷ್ಟಾಗಿ ತೋರಿಬರಲಿಲ್ಲ. ಆದರೆ ವರ್ಣಗಳಾಗಿ ವಿಂಗಡಿಸಲ್ಪಟ್ಟಿದ್ದ ಸಮಾಜದಲ್ಲಿ ತತ್ವಶಾಸ್ತ್ರವೇತ್ತರಾಗಿ ಕಂಗೊಳಿಸಿದ ಮಹಿಳೆಯರು ಉಚ್ಚವರ್ಣಗಳಿಗೆ ಸೇರಿದವರೆಂಬುದನ್ನು ಸುಲಭವಾಗಿ ತಳ್ಳಿಹಾಕಲಾಗುವುದಿಲ್ಲ.

ಗಳು ಕೇವಲ ಸಾಹಿತ್ಯಕವಾಗಿರಬೇಕೆಂದೇನೂ ಇಲ್ಲ. ಮಾನವಶಾಸ್ತ್ರ ಮತ್ತು ಪ್ರಾಕ್ತನ ಶಾಸ್ತ್ರಗಳೂ ಇದಕ್ಕೆ ಪ್ರಮುಖವಾದ ಕೊಡುಗೆಯನ್ನೀಯುತ್ತವೆ.

ಮೊದಲಿಗೆ ನಾವು ಗಮನಿಸಬೇಕಾದ ಅಂಶವೆಂದರೆ ಯಾವ ಜೀವಂತ ಸಮಾಜವೂ ಸ್ಥಗಿತವಾದ ಸಮಾಜವಲ್ಲ ಮತ್ತು ಹಿಂದೆಯೂ ಅವು ಹಾಗೆ ಸ್ಥಗಿತಗೊಂಡಿರಲಿಲ್ಲವೆಂಬುದು. ಸಮಾಜಗಳ ಬೆಳವಣಿಗೆಯು ನಿಯಮರಹಿತವಾದುದಲ್ಲವೆಂಬುದೂ ಗಮನಿಸಬೇಕಾದ ಅಂಶ. ದೀರ್ಘಕಾಲಾವಧಿಗಳಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಗುರುತಿಸದಿದ್ದರೆ ಸಮಾಜವು ಹರಿಯದೆ ನಿಂತ ಹೊಂಡದಂತೆ ತೋರುವುದು ಅಸಹಜವಲ್ಲ. ಸಮಾಜದಲ್ಲಿ ವ್ಯಕ್ತಿಗಳ ಮತ್ತು ಅವರ ಗುಂಪುಗಳ ನಡುವಣ ಆಂತರಿಕ ಸಂಬಂಧಗಳು ಮೂಲಭೂತವಾಗಿ ನಿರ್ಧಾರಿತವಾಗುವುದು ಆಯಾ ಕಾಲ ಘಟ್ಟಗಳ ಉತ್ಪಾದನಾ ವಿಧಾನಗಳಿಂದ ಮತ್ತು ಉತ್ಪಾದನಾ ಸಲಕರಣೆಗಳಿಂದ.

> ಇಲ್ಲಿ ಇನ್ನೊಂದಂಶವನ್ನೂ ಮನವರಿಕೆ ಮಾಡಿಕೊಳ್ಳಬೇಕಾದ್ದು ಅಗತ್ಯ. ವೈದಿಕ ಸಾಹಿತ್ಯವೆಲ್ಲಾ ಒಂದೇ ಕಾಲಕ್ಕೆ ಸೇರಿದ್ದಲ್ಲ. ಅನೇಕ ಶತಮಾನಗಳಲ್ಲಿ ರಚಿತವಾದ ಸಾಹಿತ್ಯ ಅದರಲ್ಲಿ ಸೇರ್ಪಟ್ಟಿದೆ; ಮತ್ತು ಆಯಾ ಶತಮಾನಗಳಲ್ಲಿ ಘಟಿಸಿದ ಸನ್ನಿವೇಶಗಳೆಲ್ಲಾ ಆ ಸಾಹಿತ್ಯದಲ್ಲಿ ಪ್ರತಿಫಲಿತವಾಗಿದೆ. ಮೊದಲಿಗೆ ಬುಡಕಟ್ಟುಗಳ ರೀತಿಯಲ್ಲಿ ಸಂಘಟಿತವಾಗಿದ್ದ ಸಮಾಜವು ಕೊನೆಗೆ ರಾಜತ್ವದಲ್ಲಿ ಪರ್ಯವಸಾನಗೊಂಡಿದ್ದು ಹಲವು ಶತಮಾನಗಳ ನಂತರವೇ. ಈ ರೀತಿಯ ಉಗಮದಲ್ಲಿ ಉತ್ಪಾದನಾ ವ್ಯವಸ್ಥೆಯೂ ಸತತವಾಗಿ ಬದಲಾಗುತ್ತಿದ್ದುದು ಅನಿವಾರ್ಯವಾಗಿ ನಾವು ಗಣನೆಗೆ ತೆಗೆದುಕೊಳ್ಳಬೇಕಾದ ಸಂಗತಿ.

ಅವುಗಳಲ್ಲಿ ಕಾಲಕಾಲಕ್ಕೆ ವ್ಯತ್ಯಾಸಗಳುಂಟಾಗಿರುವುದಕ್ಕೆ ವಿಶೇಷವಾದ ಪುರಾವೆಯನ್ನೊದಗಿಸಬೇಕಾದ ಅಗತ್ಯವಿರಲಾರದು. ಆದರೆ ಅದರ ಪರಿಣಾಮವಾಗಿ ಉಂಟಾಗಿರುವ ಸಾಮಾಜಿಕ ಸಂಬಂಧಗಳ ಬದಲಾವಣೆಯನ್ನು ಗಣನೆಗೆ ತೆಗೆದುಕೊಳ್ಳಲು ಮಾತ್ರ ನಮ್ಮ ಅನೇಕ ವಿದ್ವಾಂಸರು ತಯಾರಿಲ್ಲ. ಸಮಾಜದಲ್ಲಿ ಮಹಿಳೆಯ ಸ್ಥಾನವನ್ನು ಸ್ಪಷ್ಟಪಡಿಸುವಾಗ ಇದನ್ನು ಕಡೆಗಾಣಿಸಿ ಮನಸ್ಸಿಗೆ ರುಚಿಸುವ ರೀತಿಯಲ್ಲಿ ವ್ಯಾಖ್ಯಾನ ನೀಡುವುದು ಅವೈಜ್ಞಾನಿಕವಾಗುತ್ತದೆ.

ಒಂದು ಚಿಕ್ಕ ನಿದರ್ಶನವನ್ನು ನೋಡೋಣ: ಗುಲಾಮಗಿರಿ ಇರುವ ಸಮಾಜದಲ್ಲಿ ಗುಲಾಮರ ಪೈಕಿ ಪುರುಷರೂ ಇದ್ದರು, ಸ್ತ್ರೀಯರೂ ಇದ್ದರು: ವೈಯಕ್ತಿಕವಾಗಿ ಅವರ ಕೆಲಸಗಳಲ್ಲಿ ಭಿನ್ನತೆ ಇದ್ದರೂ ಸಾಮಾಜಿಕವಾಗಿ ಅವರಿಬ್ಬರೂ ಗುಲಾಮರೇ ಆಗಿದ್ದರು. ಆದರೆ ಗುಲಾಮರೊಡೆಯರ ಪೈಕಿ ಇದ್ದ ಪುರುಷ ಮತ್ತು ಸ್ತ್ರೀಯರಲ್ಲಿ ಸಾಮಾಜಿಕ ಸ್ಥಾನಮಾನಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸಗಳಿದ್ದುವು. ಮುಂದಿನ ಹಂತದಲ್ಲಿ ನಾವು ಕಾಣುವುದೇನು? ಬೇರೆಯವರಲ್ಲಿ ಊಳಿಗ ಮಾಡುತ್ತಿದ್ದ ಒಂದು ಕುಟುಂಬದಲ್ಲಿ ಗಂಡು-ಹೆಣ್ಣುಗಳಿಬ್ಬರೂ ಊಳಿಗದವರೇ ಆಗಿದ್ದರೂ ಕುಟುಂಬದ ಹೊರಗೆ ಮಾತ್ರ ಊಳಿಗನಾಗಿರುತ್ತಿದ್ದ ಗಂಡಸಿಗೆ ಕುಟುಂಬದ ಒಳಗೂ ಹೆಣ್ಣು ಸ್ವಲ್ಪ ಮಟ್ಟಿಗೆ ಊಳಿಗದವಳಾಗಬೇಕಾಗಿಬಂತು. ಗುಲಾಮರಿಗೆ ಕುಟುಂಬ ಭರಿಸುವ ಹಕ್ಕಿರಲಿಲ್ಲವಾದ್ದರಿಂದ ಪುರುಷಗುಲಾಮನಿಗೆ ಸ್ತ್ರೀ ಗುಲಾಮಳು ಅಧೀನವಾಗಿರಬೇಕಾಗಿರಲಿಲ್ಲ. ಕುಟುಂಬವನ್ನು ಹೊಂದಿದ ನಂತರ ಆದ ಬದಲಾವಣೆಗೆ ಊಳಿಗಮಾನ್ಯ ಪದ್ಧತಿಯ ಸಾಮಾಜಿಕ ರಚನೆ ಕಾರಣವಾಗಿದ್ದಿತೆಂಬುದು ಸ್ವಯಂವೇದ್ಯವಾಗಿದೆ.

ಉತ್ಪಾದನಾ ವೈವಿಧ್ಯ

ಪ್ರಾಚೀನ ಭಾರತದಲ್ಲಿ ಮಹಿಳೆಯ ಸ್ಥಾನವನ್ನು ಕುರಿತು ಚರ್ಚಿಸುವಾಗ ಹರಪ್ಪ-ಮೊಹೆಂಜೊದಾರೊ ಕಾಲದಿಂದ ಉಂಟಾಗಿರುವ ಉತ್ಪಾದನಾ ವೈವಿಧ್ಯಗಳನ್ನು ನಿಖರವಾಗಿ ತಿಳಿದುಕೊಳ್ಳಬೇಕು. ನಗರಗಳಲ್ಲಿ ವಾಸಿಸುತ್ತಿದ್ದ ಜನ ಉತ್ಪಾದನೆ ಮತ್ತು ವ್ಯಾಪಾರಗಳಲ್ಲಿ ತೊಡಗಿರುತ್ತಿದ್ದುದು ಹರಪ್ಪ-ಮೊಹೆಂಜೊದಾರೊ ನಾಗರಿಕತೆಯ ಕಾಲದ ಸಮಾಜದ ಸ್ವರೂಪ. ಅಲ್ಲಿ ಮಹಿಳೆಯ ಸ್ಥಾನ ಕಳಪೆಯದ್ದಾಗಿರಲು ಸಾಧ್ಯವಿರಲಿಲ್ಲ. ಈ ನಾಗರಿಕತೆಯನ್ನು ಅಂತ್ಯಗೊಳಿಸಿದವರು ಹೊರಗಿನಿಂದ ಬಂದ ಒಂದು ಪಂಗಡದವರೆಂಬುದು ಸರಿಯಾದರೆ ಆ ಪಂಗಡದ ಸಾಮಾಜಿಕ ಸ್ಥಿತಿ ಹೇಗಿದ್ದಿತೆಂಬ ಪ್ರಶ್ನೆ ಉದ್ಭವಿಸುತ್ತದೆ. ಪ್ರಾಥಮಿಕ ದೆಸೆಯಲ್ಲಿ ಈ ಆರ್ಯಪಂಗಡದವರು ಪ್ರದೇಶದಿಂದ ಪ್ರದೇಶಕ್ಕೆ ಅಲೆಮಾರಿಗಳಾಗಿ ಹೋಗಬೇಕಾಗಿದ್ದ ಪ್ರಸಂಗವಿತ್ತು. ಏಕೆಂದರೆ ಅವರಿಗೆ ಕೃಷಿ

ಕಾಳಗ ಕೊನೆಗೊಂಡಿಲ್ಲ

“ಕೊನೆಗೊಂಡಿತು ಕಾಳಗ
ಆದರೆ ಬಹಳ ವರುಷಗಳ ನಂತರ
ಕಥೆ ಹೇಳುವರು ಅಜ್ಜಿಗಳು
ತಮ್ಮ ಪುಟ್ಟ ಮರಿಗಳಿಗೆ—ನಾ ಬಲ್ಲೆ

ಹಳೆಯ ಅನಿಷ್ಟದ ದಿನಗಳಲ್ಲಿ
ವಾಯಿಹೋಕ್‌ನ ಮಹಿಳೆಯರು
ಎಂಥ ಧೈರ್ಯದಿಂದ ಹೋರಾಡಿದರು
ಎಂಬ ದೀರ್ಘ ಕಥೆಯನ್ನು
ಹೇಳಲಾಗುವುದು
ಅಭಿಮಾನದೊಂದಿಗೆ,
ನಗೆಯೊಂದಿಗೆ”

ದಕ್ಷಿಣ ಆಫ್ರಿಕಾದ ಆರೇಂಜ್ ಫ್ರೀ ಸ್ಟೇಟ್‌ನ ಕಪ್ಪು ಮಹಿಳೆಯರು ನೆಲ್ಸನ್ ಮಂಡೇಲಾ ಅವರು ಹುಟ್ಟುವುದಕ್ಕೆ ಐದು ವರ್ಷಗಳ ಮುಂಚೆ (ಜೂನ್ 6, 1913) ಪಾಸ್ ಕಾಯ್ದೆ ವಿರುದ್ಧ ಹೋರಾಡಿದರು.

ರಮಜಾನ ದರ್ಗಾ

ಪಾಸ್ ಕಾಯ್ದೆ ಪ್ರಕಾರ ಕರಿಯರು ಗುರುತಿನ ಪುಸ್ತಕವನ್ನು ಹೊಂದಬೇಕು. ಆದರಲ್ಲಿ ಅವರ ಹೆಸರು, ಭಾವಚಿತ್ರ, ನಂಬರು, ಅವರನ್ನು ಕೆಲಸಕ್ಕಿಟ್ಟುಕೊಂಡ ಮಾಲೀಕರ ಹೆಸರು ಮುಂತಾದ ಮಾಹಿತಿಗಳು ಇರುತ್ತವೆ. ಅದಿಲ್ಲದೆ ಕರಿಯರು ತಮ್ಮ ವಾಸಸ್ಥಾನಗಳಾದ ಬಂಟುಸ್ತಾನ್‌ಗಳನ್ನು ಬಿಟ್ಟು ಹೊರ ಬರುವಂತಿಲ್ಲ. ಆದರೆ ಆ ದಿನ ಆರು ನೂರು ಮಂದಿ ಮಹಿಳೆಯರು ಅಪಮಾನದ ಸಂಕೇತವಾದ ಪಾಸ್‌ಪುಸ್ತಕಗಳ ಬದಲಿಗೆ ಅಭಿಮಾನದ ಸಂಕೇತವಾದ ಬಡಿಗೆಗಳನ್ನು ಹಿಡಿದುಕೊಂಡು ಮೆರವಣಿಗೆ ಹೊರಡಿಸಿದರು. ಅವರು ಯುದ್ಧಕ್ಕೆ ಹೊರಟವರಂತೆ ಘೋಷಣೆ ಕೂಗುತ್ತಿದ್ದರು. ಅವರ ಆವೇಶವನ್ನು ನೋಡಿದ ನ್ಯಾಯಾಧೀಶ ನಡುಗಿದ. ಆದರೆ ಪೋಲೀಸ್ ಪೇದೆಯೊಬ್ಬ ಮಹಿಳೆಯೊಬ್ಬಳ ಕಾಲರ್ ಅನ್ನು ಗಟ್ಟಿಯಾಗಿ ಹಿಡಿದದ್ದೇ ತಡ ಆರುನೂರು ಬಡಿಗೆಗಳಿಗೆ ಬಲಿಯಾದ.

ಹೀಗೆ ಕೊನೆಗೊಂಡ ಕಾಳಗವನ್ನು ಕುರಿತು ಅಂತ್ಯಪ್ರಾಸದಿಂದ ಕೂಡಿದ ಸುಂದರ ಕವನವನ್ನು ಅಜ್ಞಾತ ಕವಿಯೊಬ್ಬ ‘ಜಾನಿ ದಿ ಆಫೀಸ್ ಬಾಯ್’ ಎಂಬ ಕಾವ್ಯನಾಮದಿಂದ ಬರೆದ. ಮಿಶ್ರ ವರ್ಣೀಯರ ಸಂಘಟನೆಯಾದ ಆಫ್ರಿಕನ್ ಪೀಪಲ್ಸ್ ಆರ್ಗನೈಸೇಷನ್ 1913 ಜೂನ್ 27ರ ತನ್ನ ಪತ್ರಿಕೆಯಲ್ಲಿ ಈ ಕವನವನ್ನು ಪ್ರಕಟಿಸಿತು. ಮೇಲೆ ತಿಳಿಸಿದಂತೆ ಆ ಕವನ ಆಶಾದಾಯಕವಾಗಿ ಕೊನೆಗೊಳ್ಳುವುದು. ಆದರೆ ಆ ಘಟನೆ ಸಂಭವಿಸಿ 73 ವರ್ಷಗಳಾದರೂ ಕಾಳಗ ಕೊನೆಗೊಂಡಿಲ್ಲ. ಬಿಳಿಯರ ಸರ್ಕಾರ ಕಪ್ಪು ಮಹಿಳೆಯನ್ನು ಅತ್ಯಂತ ಹೀನಾಯಮಾನವಾಗಿ ಕಾಣುವುದನ್ನು ಬಿಟ್ಟಿಲ್ಲ.

ಬಂಡವಾಳಶಾಹಿ ವ್ಯವಸ್ಥೆಗೆ ಕಾರಣವಾದ ಬಿಳಿಯರು ತಳವೂರುವುದಕ್ಕೆ ಮೊದಲಿನ ದಕ್ಷಿಣ ಆಫ್ರಿಕಾ ಸಮಾಜದಲ್ಲಿ ವಿವಿಧ ಗುಂಪುಗಳು ತಮ್ಮ ಪಾಲಿನ ಕೆಲಸ ನಿರ್ವಹಿಸುತ್ತಿದ್ದವು. ಒಂದು ಗುಂಪು ಉತ್ಪಾದನಾ ಸಾಧನಗಳನ್ನು ಹೊಂದಿದ್ದು ವಿನಿಮಯವನ್ನು ಹತೋಟಿಯಲ್ಲಿಟ್ಟುಕೊಂಡಿತ್ತು. ಬೇರೆ ಗುಂಪುಗಳು ತಮಗೆ ಸಂಬಂಧಿಸಿದ ಉತ್ಪಾದನೆಯಲ್ಲಿ ತೊಡಗಿರುತ್ತಿದ್ದವು. ನಿರ್ಣಾಯಕ ಉತ್ಪಾದನಾ ಸಾಧನಗಳನ್ನು ಮತ್ತು ಭೂಮಿಯನ್ನು ಸಾಮೂಹಿಕ ಒಡೆತನಕ್ಕೆ ಒಳಪಡಿಸಲಾಗಿತ್ತು. ಜನ ದನ–ಕರುಗಳನ್ನು ಖಾಸಗಿಯಾಗಿ ಸಾಕುತ್ತಿದ್ದರು. ಅವರ ಜೀವನ ವಿಧಾನದಲ್ಲಿ ಬದಲಾವಣೆಯಾದ ನಂತರ ಲೈಂಗಿಕ ಆಧಾರದ ಮೇಲೆ ಶ್ರಮ ವಿಭಜನೆಯಾಯಿತು. ನಂತರ ಕೃಷಿ ಕಾರ್ಯ ಮತ್ತು ಜಾನುವಾರು ಸಾಕಣೆಯನ್ನು ಒಂದೇ ಮನೆಯವರು ಮಾಡಿದರೂ ಉಳುವ ಕೆಲಸವನ್ನು ಮಹಿಳೆ ವಹಿಸಿಕೊಂಡಳು. ಜಾನುವಾರು ಸಾಕಣೆ ಗಂಡಸಿನದಾಯಿತು. (ಆಫ್ರಿಕಾದ ಬಹಳಷ್ಟು ಕಡೆಗಳಲ್ಲಿ ಈ ಪದ್ಧತಿ ಜಾರಿಯಲ್ಲಿತ್ತು)

ಗೂ ಅಂತರವೂ ಇಲ್ಲ. ಅಲ್ಲಿಯ ಹರಿಶ್ಚಂದ್ರೋಪಾಖ್ಯಾನದಲ್ಲಿ ಬರುವ ಮಾತಿದು : "ದಾರಿಕಾ ಹೃದಯ ದಾರಿಕಾ ಪಿತುಃ" —ಅಂದರೆ, ಮಗಳು ತಂದೆಯ ಹೃದಯವನ್ನೇ ನುಚ್ಚುನೂರು ಮಾಡುವಂಥವಳು. (ಆದ್ದರಿಂದ ಹರಿಶ್ಚಂದ್ರನು ಮಗನನ್ನು ಪಡೆಯಬೇಕೇ ವಿನಾ ಮಗಳನ್ನಲ್ಲವೆಂದು ಪರ್ವತ ಮತ್ತು ನಾರದರು ರಾಜನಿಗೆ ನೀಡುವ ಉಪದೇಶ). ಅದೇ ಗ್ರಂಥ ಸಮೂಹದಲ್ಲಿ ಗಣಸಂಘದ ಸಮಾನತೆಯ ಮೌಲ್ಯದ ಬದಲು ಹರಿದು ಹಂಚಿಕೊಳ್ಳುವ ಮೌಲ್ಯದ ಸ್ಥಾಪನೆಯೂ ಆಗಿರುವುದಲ್ಲದೆ ಅಶ್ವಮೇಧ ಯಾಗದ ಪ್ರಕ್ರಿಯೆಯಲ್ಲಿ ರಾಜಪತ್ನಿಯು ಅಶ್ವದೊಡನೆ ಸಂಭೋಗ ನಡೆಸುವುದರ ನಟನೆಯನ್ನೂ ಮಾಡಬೇಕೆಂಬ ನಿಯಮವನ್ನು ಸೂಚಿಸಲಾಗಿದೆ. ಗಣಸಂಘದ ಮಹಿಳೆಗೂ ಈ ಅಶ್ವಮೇಧಕಾಲದ ಮಹಿಳೆಗೂ ಇರುವ ಅಂತರ ಸುಮಾರು ಒಂದು ಸಾವಿರ ವರ್ಷಗಳಷ್ಟು.

ಎಂತಹ ಸ್ವಾತಂತ್ರ್ಯ !

ಅದಾದ ಸುಮಾರು ಐನೂರು ವರ್ಷಗಳ ನಂತರ ಬೌದ್ಧಧರ್ಮವು ಮೊಳೆಯಿತೆನ್ನಬಹುದು. ಆ ಸುಮಾರಿಗೆ ಸೇರುವ ಥೇರೀಗಾಥದಲ್ಲಿ ಮುತ್ತ ಮತ್ತು ಸುಮಂಗಲಮತ ಎಂಬಿಬ್ಬ ಮಹಿಳೆಯರು ಬೌದ್ಧ ಸಂಘವು ನೀಡಿದ ಸ್ವಾತಂತ್ರ್ಯವನ್ನು ವರ್ಣಿಸುವ ರೀತಿ ಇದು: "ಹಾಳಾದ ಮೂರು ಕ್ಷೋಭೆಗಳಿಂದ ನಾನು ಮುಕ್ತಳಾದೆ : ಹಿಟ್ಟು ಮಾಡಲು ಮೂರು ಹೊತ್ತೂ ಬೀಸುಕಲ್ಲಿನ ಮುಂದೆ ಕುಳಿತಿರುವುದು, ಒನಕೆಯಿಂದ ಕಾಳು ಮಾಡುವ ಕಠಿಣ ಕೆಲಸ, ಮತ್ತು ಗೂನುಬೆನ್ನಿನ ಆ ಗೂಬೆ ಗಂಡ." —"ಆಹಾ ! ಎಂತಹ ಸೊಗಸಾದ ಸ್ವಾತಂತ್ರ್ಯ ! ಆ ಅಡಿಗೆ ಮನೆಯ ಬೇಸರದ ಕೆಲಸ ಇನ್ನು ನನಗಿಲ್ಲ."

ವೇದಕಾಲದ ಸಮಾಜದ ಎರಡು ಮತ್ತು ಮೂರನೆಯ ಹಂತಗಳಲ್ಲಿ ಮಹಿಳೆಯ ಸ್ವಾತಂತ್ರ್ಯ ಹರಣದ ಬೀಜವನ್ನು ಆಗಲೆ ಬಿತ್ತಿಯಾಗಿತ್ತು. ಆಮೇಲೆ ಅದು ಸಸಿಯಾಗಿ ಕಾಲಕ್ರಮೇಣ ಹೆಮ್ಮರವಾಗಿ ಬೆಳೆದು ನಿಂತಿತು. ಉಪನಿಷತ್ತುಗಳಲ್ಲಿ ಒಂದಿಬ್ಬರು "ಬ್ರಹ್ಮವಾದಿನಿ"ಯರಿದ್ದಾರೆ, ನಿಜ. ಆದರೆ ನಂತರದ ಧರ್ಮಶಾಸ್ತ್ರಗಳಲ್ಲಿ ಬ್ರಹ್ಮಚಾರಿಯ ದಿನನಿತ್ಯದ ನಿಯಮಗಳನ್ನು ಬೋಧಿಸುವಾಗ ಎಲ್ಲೂ ಬ್ರಹ್ಮಚಾರಿಣಿಯ ಪ್ರಸ್ತಾಪವೇ ಇಲ್ಲವೆಂಬುದು ಒಂದು ವಿಸ್ಮಯ. ಆಗ್ಗೆ ಅವಳಿಂದ ವೇದಾಧ್ಯಯನದ ಹಕ್ಕನ್ನು ಕಿತ್ತುಕೊಂಡಾಗಿತ್ತು. ಕೆಳಗಿನ ವರ್ಣಗಳ ಮಹಿಳೆಯರ ಮಾತಂತೂ ಯಾವತ್ತಿಗೂ ಬರಲೇ ಇಲ್ಲ ! ಬುದ್ಧನ ಕಾಲಕ್ಕಾಗಲೇ ಮಹಿಳೆಯು ಕುಟುಂಬದ ಆವರಣದಲ್ಲಿ ಕೇವಲ ದಾಸಿಯಾಗಿದ್ದಳು ಮತ್ತು ಸಮಾಜದ ದೃಷ್ಟಿಯಲ್ಲಿ ಆಕೆಗೆ ಭೋಗವಸ್ತುವೆಂದಲ್ಲದೆ ಬೇರಾವ ವಿಶಿಷ್ಟ ಮಹತ್ವವೂ ಉಳಿದಿರಲಿಲ್ಲ. ಬುದ್ಧನ ಶಿಷ್ಯನಾಗಿದ್ದ ಆನಂದನು ಮಹಿಳೆಯರನ್ನೂ ಬೌದ್ಧಸಂಘದೊಳಕ್ಕೆ ಸೇರಿಸಿಕೊಳ್ಳಬೇಕೆಂದು ಗುರುವಿನಲ್ಲಿ ಪದೇಪದೇ ಆಗ್ರಹ ಪಡಿಸುತ್ತಿದ್ದನಂತೆ. ಈ ಸಲಹೆಯನ್ನು ತಿರಸ್ಕರಿಸಿದ್ದ ಬುದ್ಧನು ಕಡೆಗೆ ಒತ್ತಾಯಕ್ಕೆ ಮಣಿಯಬೇಕಾಗಿ ಬಂದಾಗ ಉದ್ಗರಿಸಿದ್ದ ಮಾತುಗಳಿವು: "ಆನಂದ, ಮಹಿಳೆಯರನ್ನು ಸಂಘಕ್ಕೆ ಸೇರಿಸಿಕೊಳ್ಳುವುದರಿಂದ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಆದರೂ ಹಾಗೆ ಸೇರಿಸಿಕೊಳ್ಳಲು ನಾನು ಸಮ್ಮತಿಸಿದ್ದೇನೆ. ಹೀಗಿರುವಾಗ ಒಂದು ಮಾತನ್ನು ನಿಖರವಾಗಿ ಹೇಳ ಬಯಸುತ್ತೇನೆ: ಮಹಿಳೆಯರಿಲ್ಲದೆ ನಮ್ಮ ಸಂಘಕ್ಕೆ ನೂರು ವರ್ಷ ಆಯಸ್ಸಿರುವುದಾದರೆ ಅವರನ್ನು ಸೇರಿಸಿದ ಮೇಲೆ ಅದು ಬರಿಯ ಐವತ್ತು ವರ್ಷಗಳಾಗುತ್ತದೆ."

ಬೌದ್ಧಧರ್ಮದ ಅವನತಿಗೆ ಮತ್ತು ಭಾರತೀಯ ಸಂಸ್ಕೃತಿಯ ಮೊದಲಿನ ಉಚ್ಛ್ರಾಯ ಸ್ಥಿತಿಯ ಅಧೋಗತಿಗೆ ಮಹಿಳೆಯರೇ ಕಾರಣವೆಂದು ಮೂಗು ಮುರಿಯುವ ಕುಹಕ ಸಾಧ್ಯ ; ಆದರೆ ಅದು ಚಾರಿತ್ರಿಕವಾಗಿ ವಸ್ತುನಿಷ್ಠವಾಗಿರುವುದಿಲ್ಲ. ಭಾರತೀಯ ಸಂಸ್ಕೃತಿಯ ದೀರ್ಘವಾದ ಪಥದಲ್ಲಿ ಮಹಿಳೆಯ ಸ್ಥಾನಮಾನದ ಬಗ್ಗೆ ಚರ್ಚೆ ನಡೆಸುವಾಗ ಇದನ್ನೂ ನೆನೆಯಬೇಕಾದ್ದು ಕೇವಲ ಗೌಣವಲ್ಲ, ಅದೊಂದು ವೈಜ್ಞಾನಿಕ ವಿಶ್ಲೇಷಣೆಯ ಜವಾಬ್ದಾರಿ. ●

ಹೀಗೆ ದಕ್ಷಿಣ ಆಫ್ರಿಕಾ ಸರ್ಕಾರದ ಕಣ್ಣಲ್ಲಿ ಕಪ್ಪು ಗಂಡಸರೆಂದರೆ ದುಡಿಯುವ ಯಂತ್ರಗಳು. ಹೆಂಗಸರೆಂದರೆ ಕೂಲಿಗಳನ್ನು ಹಡೆಯುವ ಯಂತ್ರಗಳು!

ಬರಗಾಲದಿಂದಾಗಿ ಕರಿಯರ ತುಂಡು ಭೂಮಿಗಳು ನಿರುಪಯುಕ್ತವಾಗಿವೆ. ಸಾಂಕ್ರಮಿಕ ರೋಗದಿಂದಾಗಿ ದನ-ಕರುಗಳನ್ನು ಕಳೆದುಕೊಂಡಿದ್ದಾರೆ. ಬರಡು ಭೂಮಿಯಲ್ಲಿ ದುಡಿಯುತ್ತ ಬಂಟುಸ್ತಾನಗಳಲ್ಲಿ ದಿನ ಕಳೆಯುವ ಹೆಂಗಸರು ಅನ್ನ ಬಟ್ಟೆಗಳಿಗಾಗಿ ವಲಸೆ ಹೋದ ಗಂಡಂದಿರು ಮತ್ತು ಮಕ್ಕಳು ಹಣ ಕಳಿಸುವುದನ್ನು ಕಾಯುತ್ತ ಕುಳಿತಿರುತ್ತಾರೆ. ಭೂಮಿ ಕಾಯ್ದೆ, ಪಾಸ್ ಕಾಯ್ದೆ ಮತ್ತು ನಗರ ಪ್ರದೇಶದ ಕಾಯ್ದೆಗಳಿಂದಾಗಿ ಕಪ್ಪು ಮಹಿಳೆಯ ಜೀವನ ಬಂಟುಸ್ತಾನ್‌ಗಳಿಗೇ ಸೀಮಿತವಾಗಿದೆ. 'ವಲಸೆ ಕಾರ್ಮಿಕ ವ್ಯವಸ್ಥೆ' ಯಿಂದಾಗಿ ಆಕೆ ಇನ್ನಷ್ಟು ನಿರ್ಗತಿಕಳಾಗಿದ್ದಾಳೆ. ಹೀಗೆ ಬಿಳಿಯರ ಆಮದೀಕರಣ ಕಪ್ಪು ಮಹಿಳೆಗೆ ಎಲ್ಲ ರೀತಿಯಿಂದಲೂ ಮಾರಕವಾಗಿದೆ. ಸ್ಥಳೀಯರ ಆಡಳಿತ ಕಾಯ್ದೆ— 1927ರ ಪ್ರಕಾರ ಮಹಿಳೆಯರು ಸದಾ ಅಪ್ರಾಪ್ತ ವಯಸ್ಕರು. ಅವರ ಪಾಲನೆ—ಪೋಷಣೆ ಮಾಡುವ ಅಧಿಕಾರ ತಂದೆ ಇಲ್ಲವೆ ಗಂಡಂದಿರ ಕೈಯಲ್ಲಿದೆ. ಇಡೀ ಕರಿಯ ಜನಾಂಗವನ್ನು ಸಂವಿಧಾನ ಬದ್ಧವಾಗಿ ಕಡೆಗಣಿಸಲಾಗಿದೆ. ಜನಾಂಗ, ಲಿಂಗ ಮತ್ತು ವರ್ಗಭೇದಗಳಿಂದಾಗಿ ಕಪ್ಪು ಮಹಿಳೆ ಅತ್ಯಂತ ಕೆಳಸ್ತರದಲ್ಲಿದ್ದಾಳೆ.

1903-5ರ ಅವಧಿಯಲ್ಲಿ ವಿಪರೀತ ಬರಗಾಲ ಎದುರಿಸಿ ಸಾಂಕ್ರಾಮಿಕ ರೋಗದಿಂದಾಗಿ ಲಕ್ಷ ಗಟ್ಟಲೆ ದನಕರುಗಳನ್ನು ಕಳೆದುಕೊಂಡ ನಂತರ ಕಪ್ಪು ಮಹಿಳೆಯರು ನಗರಗಳ ಕಡೆಗೆ ಬರಲು ಪ್ರಾರಂಭಿಸಿದರು. ನಗರದ ಬಿಳಿಯರ ಮನೆಗಳಲ್ಲಿ ಮನೆಗೆಲಸದವರಾಗಿ ಸೇರಿಕೊಂಡರು. ಕೂಲಿಗಳನ್ನು ಪಡೆಯುವುದು ಬಿಳಿಯರಿಗೆ ಗೌರವದ ಪ್ರತೀಕ ಕೂಡ ಆಗಿದೆ. ದುಡಿಯುವ ಕಪ್ಪು ಮಹಿಳೆಯರಲ್ಲಿ ಶೇಕಡಾ 80ರಷ್ಟು ಮಂದಿ ಮನೆಗೆಲಸ ಮತ್ತು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ. ಶೇಕಡಾ 4ರಷ್ಟು ಮಹಿಳೆಯರು ಕೈಗಾರಿಕಾ ಕ್ಷೇತ್ರದಲ್ಲಿದ್ದು ಉಳಿದವರು ಹೆಚ್ಚಾಗಿ ದಾದಿ, ಶಿಕ್ಷಕಿಯರಾಗಿದ್ದಾರೆ.

ಇಡೀ ಕಪ್ಪು ಜನಾಂಗದಲ್ಲಿ ಅತ್ಯಂತ ಹೀನ ಸುಲಿಗೆ ಮತ್ತು ದಬ್ಬಾಳಿಕೆಗೆ ಒಳಗಾದವರೆಂದರೆ ಕೃಷಿ ಕೂಲಿ ಮಾಡುವವರು. ಅವರಿಗೆ ಯಾವುದೇ ರೀತಿಯ ಸಂರಕ್ಷಣೆ ಇಲ್ಲ. ರಾಜಕೀಯ ಆಂದೋಲನ ಅವರಿಗೆ ತಲುಪಿಲ್ಲ. ಕೃಷಿ ಕ್ಷೇತ್ರದಲ್ಲಿ ಬೇಡಿಕೆಗಿಂತ ಹೆಚ್ಚಿನ ಕೂಲಿಗಳಿರುವುದರಿಂದ ಬಂದಷ್ಟು ಕೂಲಿಗೆ ಅವರು ದುಡಿಯಲು ಸಿದ್ಧರಿದ್ದಾರೆ. ಕೃಷಿ ಕೂಲಿಕಾರರಿಗೆ ತಿಂಗಳಿಗೆ ಹತ್ತು ರ್‍ಯಾಂಡ್ ಕೂಲಿ ಮತ್ತು ಒಂದು ಚೀಲದಷ್ಟು ಮುಸುಕಿನ ಜೋಳದ ಹಿಟ್ಟನ್ನು ಕೊಡಲಾಗುವುದು. ಅವರು ಕೆಲವು ಸಲ 17 ಗಂಟೆಗಳಷ್ಟು ಕಾಲ ಕೆಲಸ ಮಾಡಬೇಕಾಗುವುದು. ಅಲ್ಲಿ ಬಾಲಕಾರ್ಮಿಕರನ್ನು ಕಾನೂನು ಬದ್ಧವಾಗಿ ನೇಮಿಸಿಕೊಳ್ಳಬಹುದು. ಅವರಿಗೆ ವಾಸಿಸಲು ಕೊಡುವ ಮನೆಗಳು ದನದ ಕೊಟ್ಟಿಗೆಯಂತೆ ಇರುತ್ತವೆ.

> ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು, ಭಾರತೀಯರು ಮತ್ತು ಮಿಶ್ರವರ್ಣೀಯರಿಗಿಂತ ಆಫ್ರಿಕದ ಗಂಡಸರು ಕಡಿಮೆ ಕೂಲಿ ಪಡೆಯುತ್ತಾರೆ. ಅವರ ಹೆಂಡಂದಿರಿಗೆ ಅವರಿಗಿಂತ ಶೇಕಡಾ 20ರಷ್ಟು ಕಡಿಮೆ ಕೂಲಿ ಕೊಡಲಾಗುತ್ತದೆ. ಬಿಳಿಯರ ತಲಾ ವರಮಾನ ಕರಿಯರಿಗಿಂತ 16 ಪಟ್ಟು ಹೆಚ್ಚಾಗಿದೆ.

ನತಾಲ್ ಪ್ರಾಂತದಲ್ಲಿ ಅವರ ಪರಿಸ್ಥಿತಿ ಇನ್ನೂ ಅಸಹ್ಯವಾಗಿದೆ. ಗುತ್ತಿಗೆ ರೀತಿಯಲ್ಲಿ ಅಲ್ಲಿ ಎರಡು ಲಕ್ಷ ಕೂಲಿಗಳು ದುಡಿಯುತ್ತಿದ್ದಾರೆ. ಕುಟುಂಬದ ಯಜಮಾನನಿಗೆ ತಿಂಗಳಿಗೆ 5 ರ್‍ಯಾಂಡ್ ಮತ್ತು ಒಂದು ಚೀಲ ಮುಸುಕಿನ ಜೋಳದ ಹಿಟ್ಟನ್ನು ಕೊಡಲಾಗುವುದು. ಹಿರಿಯ ಮಗನಿಗೆ ತಂದೆ ಪಡೆಯುವ ಅರ್ಧದಷ್ಟು ಸಿಗುವುದು. ಹೆಂಡತಿ, ಹೆಣ್ಣುಮಕ್ಕಳು ಮತ್ತು ಬಾಲಕರು ಅಲ್ಲಿ ಪುಕ್ಕಟೆ ದುಡಿಯುತ್ತಾರೆ! ಒಂದೇ ಕಡೆ ಬದುಕುವುದೊಂದೇ ಅವರಿಗೆ ಸಿಗುವ ಪ್ರತಿಫಲ. ಆರು ತಿಂಗಳುಗಳವರೆಗೆ ಮಾತ್ರ ಅವರಿಗೆ ಅಲ್ಲಿ ಕೃಷಿ ಕೆಲಸ ಸಿಗುವುದು. ನಂತರ ಗಂಡಸರು ಗುತ್ತಿಗೆ ಕೆಲಸಕ್ಕಾಗಿ ನಗರಗಳಿಗೆ ವಲಸೆ ಹೋಗುವರು. ಮತ್ತೆ ಮಕ್ಕಳು ಬಂಟುಸ್ತಾನ ಸೇರುವರು.

ದಾರಿದ್ರ್ಯ ಮತ್ತು ಒಂಟಿತನಕ್ಕೆ ಬೇಸತ್ತು ಕಪ್ಪು ಮಹಿಳೆಯರು ಕಾನೂನಿಗೆ ವಿರುದ್ಧವಾಗಿ ನಗರಗಳಿಗೆ

ದುಡಿಮೆಯು ಈ ಎರಡೂ ಕ್ಷೇತ್ರಗಳು ಆರ್ಥಿಕ ಮತ್ತು ಸಾಮಾಜಿಕ ಮಹತ್ವವನ್ನು ಪಡೆದಿದ್ದವು. ಆದರೆ ಮಹಿಳೆಯರು ವಿಶೇಷ ಗೌರವಕ್ಕೆ ಅರ್ಹರಾಗಿದ್ದರು. ಏಕೆಂದರೆ ಸಂತತಿ ಮತ್ತು ಆಹಾರ ಉತ್ಪಾದನೆಯಲ್ಲಿ ಅವರ ಪಾತ್ರ ಪ್ರಮುಖವಾಗಿತ್ತು.

ಆಫ್ರಿಕಾದಲ್ಲಿ ಲೊಬೋಲಾ (ಕನ್ಯಾ ಸಂಪತ್ತು) ಎಂಬ ಪದ್ಧತಿ ಇದೆ. ಮದುವೆ ಸಮಯದಲ್ಲಿ ವರನಾದವನು ಕನ್ಯೆಯ ಮನೆಯುವರಿಗೆ 'ಪರಿಹಾರ' ರೂಪದಲ್ಲಿ ಲೊಬೋಲಾ ಕೊಡಬೇಕಾಗುತ್ತದೆ. ಮಹಿಳೆಯ ದುಡಿಮೆ ಮತ್ತು ಜಾಣ್ಮೆಯನ್ನು ಗೌರವಿಸುವ ರೀತಿ ಇದು.

ಸಮಾಜದ ಸಮಸ್ಯೆಗಳ ಪರಿಹಾರ ಮತ್ತು ನೀತಿ ನಿಯಮಗಳನ್ನು ನಿರ್ಧರಿಸುವುದಕ್ಕಾಗಿ ಕರೆಯುವ ಸಭೆಯಲ್ಲಿ ಭಾಗವಹಿಸುವ ಹಕ್ಕು ಮಹಿಳೆಗೆ ಇಲ್ಲ. ಮದುವೆಗೆ ಮುಂಚೆ ಮಹಿಳೆಯಾದವಳು ತಂದೆ, ಅಣ್ಣ ಇಲ್ಲವೆ ಸೋದರ ಮಾವನ ಅಧೀನದಲ್ಲಿರುತ್ತಾಳೆ. ಮದುವೆಯ ನಂತರ ಗಂಡನ ಅಧೀನದಲ್ಲಿರುತ್ತಾಳೆ. ಮಕ್ಕಳನ್ನು ಸಾಕುವ ಕೆಲಸ ಅವಳದಾಗಿದ್ದರೆ ಹೊರಗಿನ ಕೆಲಸವನ್ನು ಗಂಡ ನಿಭಾಯಿಸುತ್ತಾನೆ. ಇಂಥ ಸಂಪ್ರದಾಯದ ಸಮಾಜದಲ್ಲಿ ಕೂಡ ಆಫ್ರಿಕಾದ ಮಹಿಳೆ ಅನೇಕ ಹಕ್ಕುಗಳನ್ನು ಪಡೆದಿದ್ದಾಳೆ. ಸೂಲಗಿತ್ತಿಯರು, ನಾಟಿ ವೈದ್ಯೆಯರು ಮತ್ತು ಕಣಿ ಹೇಳುವವರು—ಹೀಗೆ ಮಹಿಳೆಯರು ತಮ್ಮ ಜಾಣ್ಮೆಯ ಮೂಲಕ ಗಳಿಸುವ ಹಣದಲ್ಲಿ ಗಂಡನಿಗೆ ಯಾವುದೇ ಪಾಲಿಲ್ಲ. ಅದೇ ಪ್ರಕಾರ ಚಾಪೆ ಹೆಣೆಯುವ, ಮಡಿಕೆ ಮಾಡುವ ಮತ್ತು ಚರ್ಮದ ವಸ್ತುಗಳನ್ನು ತಯಾರಿಸುವ ಮಹಿಳೆಯರು ಕೂಡ ತಮ್ಮ ಗಳಿಕೆಯನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳುವ ಹಕ್ಕನ್ನು ಪಡೆದಿದ್ದಾರೆ. ಈ ರೀತಿಯ ವೈಯಕ್ತಿಕ ಆಸ್ತಿಯಲ್ಲದೆ ಮದುವೆ ಸಮಯದಲ್ಲಿ ತವರು ಮನೆಯುವರು ಬಳುವಳಿಯಾಗಿ ಕೊಟ್ಟ ದನ (ಉಬುಲುಂಗಾ) ಕೂಡ ಎಂಥ ಪ್ರಸಂಗದಲ್ಲೂ ಗಂಡನ ಆಸ್ತಿಯಲ್ಲಿ ಸೇರ್ಪಡೆಯಾಗುವುದಿಲ್ಲ. ಮಹಿಳೆ ಸತ್ತ ನಂತರ ವೈಯಕ್ತಿಕ ಆಸ್ತಿಯೆಲ್ಲ ಆಕೆಯ ಕೊನೆಯ ಕೂಸಿಗೆ ಹೋಗುವುದು. ಗಂಡನ ಸಾಲ ತೀರಿಸಲು ಹೆಂಡತಿ ಆಸ್ತಿಯನ್ನು ಬಳಸುವಂತಿಲ್ಲ. ಒಂದು ವೇಳೆ ವಿವಾಹ ವಿಚ್ಛೇದನವಾದರೆ ತನ್ನೆಲ್ಲ ಆಸ್ತಿಯನ್ನು ಆಕೆ ತೆಗೆದುಕೊಂಡು ಹೋಗುವಳು. ಹಿಂದಿನ ಕಾಲದಲ್ಲಿ ಹೆಂಡತಿಯನ್ನು ಹೊಡೆಯುವುದು ನಾಚಿಕೆಗೇಡಿತನದ ವಿಚಾರವಾಗಿತ್ತು. ಆತ ಸಾಮಾಜಿಕ ತಿರಸ್ಕಾರಕ್ಕೆ ಒಳಗಾಗುತ್ತಿದ್ದ.

> ಪುರುಷ ಪ್ರಧಾನವಾದ ಆಫ್ರಿಕಾದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಗೆ ಮೊದಲಿನಿಂದಲೂ ಪ್ರಾಮುಖ್ಯವಿಲ್ಲ. ಕುಟುಂಬಕ್ಕೆ ಪುರುಷನೇ ಒಡೆಯನಾಗಿರುತ್ತಾನೆ. ಒಡೆಯ ಸತ್ತರೆ ಆತನ ಹಿರಿಯ ಮಗ ಅಧಿಕಾರ ಪಡೆಯುವನು. ಗಂಡು ಮಕ್ಕಳಿರದಿದ್ದರೆ ಆತನ ಸಂಬಂಧಿಕರು ಮನೆಯ ಯಜಮಾನಿಕೆಯನ್ನು ವಹಿಸಿಕೊಳ್ಳುತ್ತಾರೆ.

ವಸಾಹತುಶಾಹಿ ವ್ಯವಸ್ಥೆಯಲ್ಲಿ ಕೃಷಿಯಲ್ಲಿ ಕೂಡ ಗಂಡಸರ ಪಾತ್ರ ಪ್ರಧಾನವಾಗಿ ಹೆಂಗಸರ ಕೆಲಸ ಅಡುಗೆ ಮನೆಗೆ ಸೀಮಿತವಾಯಿತು. ಮಹಿಳೆ ಉತ್ಪಾದಿಸುತ್ತಿದ್ದ ಮಡಿಕೆ, ಚಾಪೆ, ಸೋರೆ ಬುರುಡೆ ಮುಂತಾದವುಗಳಿಗೆ ಬೇಡಿಕೆ ಕಡಿಮೆಯಾಗಿ ಅವುಗಳ ಬದಲಿಗೆ ಬಂಡವಾಳಶಾಹಿ ಪದ್ಧತಿಯಿಂದ ಉತ್ಪಾದಿಸಿದ ವಸ್ತುಗಳು ಬಳಕೆಗೆ ಬಂದವು.

ದಕ್ಷಿಣ ಆಫ್ರಿಕಾದಲ್ಲಿ 'ವಲಸೆ ಕಾರ್ಮಿಕರ ವ್ಯವಸ್ಥೆ' ಎಂಬ ಅಮಾನುಷ ವ್ಯವಸ್ಥೆಯೊಂದಿದೆ. ಬಿಳಿಯರ ನಗರಗಳಲ್ಲಿ ಕರಿಯರನ್ನು ಗುತ್ತಿಗೆ ಕೂಲಿಗಳನ್ನಾಗಿ ನೇಮಿಸಿಕೊಳ್ಳಲಾಗುತ್ತದೆ. ಆದರೆ ಬಂಟುಸ್ತಾನಗಳಿಂದ ಬರುವ ಕರಿಯರು ಜೊತೆಯಲ್ಲಿ ತಮ್ಮ ಹೆಂಡಿರು, ಮಕ್ಕಳು ಮತ್ತು ವೃದ್ಧ ತಾಯಿ-ತಂದೆಗಳನ್ನು ಕರೆದುಕೊಂಡು ಬರುವಂತಿಲ್ಲ. ಎಲ್ಲವನ್ನೂ ಕಳೆದುಕೊಂಡ ಕರಿಯರು ಹೊಟ್ಟೆಪಾಡಿಗಾಗಿ ಕೊನೆಗೆ ತಮ್ಮ ಕುಟುಂಬವನ್ನೂ 'ಕಳೆದುಕೊಂಡು' ನಗರಗಳಿಗೆ ಬರುತ್ತಾರೆ. ಅಲ್ಲಿ ಯಾವುದೇ ಸರಿಯಾದ ಸೌಲಭ್ಯಗಳಿರದ ಪುರುಷರ ವಸತಿ ಗೃಹಗಳೆಂಬ ಕಡೆ ವಾಸಿಸುತ್ತಾರೆ. ಅವನ್ನು ಕರಿಯ ಕೂಲಿಗಳಿಗಾಗಿಯೇ ನಿರ್ಮಿಸಲಾಗಿದೆ. ಅಂಥ ಅಸಹ್ಯ ಸ್ಥಳಗಳಲ್ಲಿ ಕೂಡ ಎಷ್ಟೋ ಕೂಲಿಕಾರರಿಗೆ ಉಳಿದುಕೊಳ್ಳಲು ಅವಕಾಶ ಸಿಗುವುದಿಲ್ಲ.

ವಲಸೆ ಹೋಗುವಾಗ ಕೂಡ ರಸ್ತೆಗಳಲ್ಲಿ ತಡೆಯಲಾಗುವುದು. ಗುರುತಿನ ಪುಸ್ತಕವನ್ನು ಚೆಕ್ ಮಾಡುವ ನೆಪದಲ್ಲಿ ಪೋಲೀಸರು ಅವರ ಮೈ ತುಂಬ ಕೈಯಾಡಿಸುವರು. ಪ್ರತಿಭಟಿಸಿದರೆ ಕಡಿಮು ಓಡಿಸುವಲ್ಲಿ ತರಬೇತಿ ಪಡೆದ ನಾಯಿಗಳನ್ನು ಅವರ ಮೇಲೆ ಬಿಡುವರು. ಹೀಗೆ ಪಾಸ್ ಕಾಯ್ದೆ ಮೂಲಕ ಮಹಿಳೆಯರು ಮಾನಸಿಕ ಹಿಂಸೆ ಅನುಭವಿಸುತ್ತಾರೆ. ತಮ್ಮ ಗಂಡಸರು ಮತ್ತು ಮಕ್ಕಳಿಂದ ಬೇರೆಯಾಗಿ ಬಂಟುಸ್ತಾನಗಳೆಂಬ 'ಯಾತನಾ ಶಿಬಿರ'ಗಳಲ್ಲಿ ಬದುಕುತ್ತಾರೆ.

ದಿ ಫೆಡರೇಷನ್ ಆಫ್‌ಸೌತ್ ಆಫ್ರಿಕನ್‌ವುಮೆನ್: 1956ನೇ ಆಗಸ್ಟ್ ಒಂಬತ್ತರಂದು ಪಾಸ್ ಕಾಯ್ದೆಯನ್ನು ತಿರಸ್ಕರಿಸಿ ಇಪ್ಪತ್ತು ಸಾವಿರ ಮಹಿಳೆಯರ ಮೆರವಣಿಗೆ ಹೊರಡಿಸಿ ಅಪಾರ್ಥೀಡ್ ಸರ್ಕಾರದ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿತು. ಪ್ರತಿವರ್ಷ ಸರಾಸರಿ ಐದು ಲಕ್ಷದಷ್ಟು ಕರಿಯರು ಪಾಸ್ ಕಾಯ್ದೆ ಪ್ರಕಾರ ಶಿಕ್ಷೆಗೆ ಗುರಿಯಾಗುತ್ತಾರೆ.

ಅನೇಕ ಮಹಿಳೆಯರು ಹೋರಾಟದ ಮೂಲಕ ನಗರದ ಹೊರ ವಲಯಗಳಲ್ಲಿ ತಾವು ಬೀಡುಬಿಟ್ಟ ಸ್ಥಳದಲ್ಲೇ ಉಳಿಯುವಲ್ಲಿ ಸಫಲರಾಗಿದ್ದಾರೆ. ಆದರೆ ಸರ್ಕಾರ ಯಾವುದೇ ರೀತಿಯ ಮೂಲಭೂತ ಸೌಲಭ್ಯಗಳನ್ನು ನೀಡಿಲ್ಲ. ಅವರಿಗೆ ತಮ್ಮ ಮನೆ ದುರಸ್ತಿ ಮಾಡಿಕೊಳ್ಳುವ ಹಕ್ಕೂ ಇಲ್ಲ. ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತ ಅನೇಕ ಮಹಿಳೆಯರು ಸಾವಿಗೀಡಾಗಿದ್ದಾರೆ. ಅಪಾರ್ಥೀಡ್ ಸರ್ಕಾರ ಜೈಲಿನಲ್ಲಿ ಕೂಡ ಅನೇಕ ಮಹಿಳೆಯರ ಕೊಲೆ ಮಾಡಿದೆ.

ಪೋಲೀಸರ ಹಿಂಸೆಗೆ ಬೇಸರ ಪಟ್ಟು ಬಂಟುಸ್ತಾನಗಳಲ್ಲೇ ಉಳಿಯುವ ಮಹಿಳೆಯರಲ್ಲಿ ಕೆಲವರು ಸೂಳೆಗಾರಿಕೆಗೆ ಇಳಿದರೆ ಮತ್ತೆ ಕೆಲವರು ಹತಾಶರಾಗಿ ಕುಡಿತದ ಚಟಕ್ಕೆ ಬಲಿಯಾಗಿದ್ದಾರೆ.

ಮಹಿಳೆಯರು ತಮ್ಮ ಗಂಡಂದಿರೊಡನೆ ಬದುಕುವ ಹಕ್ಕನ್ನು ಕೇಳುತ್ತಾರೆ. ಗುತ್ತಿಗೆ ವ್ಯವಸ್ಥೆಯ ಕೂಲಿಯ ನೆಪದಲ್ಲಿ ಗಂಡ ಹೆಂಡಂದಿರನ್ನು ಬೇರ್ಪಡಿಸುವ ತಂತ್ರವನ್ನು ಅವರು ವಿರೋಧಿಸುತ್ತಾರೆ. ಅವರು ಪುನರ್ವಸತಿ ಕೇಂದ್ರಗಳಲ್ಲಿ ಇಲ್ಲವೆ ಬಂಟುಸ್ತಾನಗಳಲ್ಲಿ ಕೈತುಂಬ ಕೆಲಸವಿಲ್ಲದೆ ಅರೆ ಹೊಟ್ಟೆಯಿಂದ ಒಂಟಿಯಾಗಿ ಬದುಕುವುದನ್ನು ತಿರಸ್ಕರಿಸುತ್ತಾರೆ. ಆ ಪ್ರದೇಶಗಳಲ್ಲಿ ದುಃಖವೊಂದನ್ನುಳಿದು ಮತ್ತೇನೂ ಇಲ್ಲ.

ದಕ್ಷಿಣ ಆಫ್ರಿಕಾದ ಶೇಕಡಾ 87ರಷ್ಟು ಭೂಮಿ ಮತ್ತು ಶೇಕಡಾ 99ರಷ್ಟು ಸಂಪತ್ತು ಅಲ್ಪಸಂಖ್ಯಾತ (56 ಲಕ್ಷ) ಬಿಳಿಯರ ಕೈಯಲ್ಲಿದೆ. ಬಹುಸಂಖ್ಯಾತ (226 ಲಕ್ಷ) ಕರಿಯರ ಆರ್ಥಿಕ ಸ್ಥಿತಿ ಮತ್ತು ಅವರ ಉತ್ಪಾದನಾ ಸಾಮರ್ಥ್ಯ ಎಷ್ಟರ ಮಟ್ಟಿಗೆ ಇದೆ ಎಂಬುದಕ್ಕೆ ಇದೊಂದು ವಾಸ್ತವಾಂಶ ಸಾಕು. ಕರಿಯರಿಗೆ ಮಕ್ಕಳೇ ಸಂಪತ್ತು. ವೃದ್ಧಾಪ್ಯದಲ್ಲಿ ಆಸರೆಗೆ ಬರುವ ಬೇರೆ ಸಂಪತ್ತಿಲ್ಲದಾದ್ದರಿಂದ ಅವರು ಎಲ್ಲ ಭರವಸೆಯನ್ನು ಮಕ್ಕಳ ಮೇಲೆ ಇಟ್ಟಿರುತ್ತಾರೆ. ಚಿಂತಾಜನಕವಾದ ಇಂಥ ಆರ್ಥಿಕ ಪರಿಸ್ಥಿತಿಯಲ್ಲಿ ಬಿಳಿಯರು ಕೂಡ 'ಮಕ್ಕಳೇ ಆಸರೆ' ಎಂದು ಭಾವಿಸದೆ ಗತ್ಯಂತರವಿರುತ್ತಿರಲಿಲ್ಲ. ಆದರೆ ಹೆಚ್ಚು ಮಕ್ಕಳನ್ನು ಹೆರುವ ಕರಿಯರ ಬಗ್ಗೆ ಸರ್ಕಾರಕ್ಕೆ ತಿರಸ್ಕಾರವಿದೆ. ಅವರನ್ನು ನಿರ್ನಾಮಗೊಳಿಸುವ ಹುಚ್ಚು ಕಲ್ಪನೆಯೊಂದಿಗೆ ಕಪ್ಪು ಮಹಿಳೆಯರಿಗೆ ಒತ್ತಾಯದಿಂದ ಮತ್ತು ಅನೇಕ ಸಲ ಅರಿಯದಂತೆ ಕೂಡ ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡುತ್ತದೆ. "ಮನುಕುಲದಲ್ಲಿ ಉಳ್ಳವರು, ಬಡವರು ಎಂಬ ಎರಡು ಗುಂಪುಗಳಿವೆ. ಉಳ್ಳವರು ಉತ್ಪಾದನಾ ಸಾಮರ್ಥ್ಯದೊಂದಿಗೆ ಜಾಣರೂ ಆಗಿದ್ದಾರೆ. ನಾಗರೀಕತೆಯುಳ್ಳ ಅವರಿಗೆ ಹೊಣೆಗಾರಿಕೆ ಪ್ರಜ್ಞೆ ಇದೆ. ಬಡವರು ಕಡಿಮೆ ಜವಾಬ್ದಾರಿಯುಳ್ಳವರಾಗಿದ್ದು ಮುಂದಾಲೋಚನೆ ಇಲ್ಲದೆ ಹುಟ್ಟಿಸುತ್ತಾರೆ" ಇದು ಬಿಳಿಯರ ಕುಟುಂಬ ಯೋಜನಾ ಪ್ರಚಾರ ವೈಖರಿ! ಕಪ್ಪು ಮಹಿಳೆಯರು ಕುಟುಂಬ ಯೋಜನೆಗೆ ವಿರೋಧವಾಗಿಲ್ಲ ಆದರೆ ಒತ್ತಾಯದ ಶಸ್ತ್ರ ಚಿಕಿತ್ಸೆಯನ್ನು ವಿರೋಧಿಸುತ್ತಾರೆ.

ಅಪಾರ್ಥೀಡ್ ಸುಲಿಗೆಯಿಂದಾಗಿ ಕಪ್ಪು ಮಹಿಳೆಯ ಬದುಕು ಅತ್ಯಂತ ಕೀಳು ಮಟ್ಟವನ್ನು ತಲುಪಿದೆ. ಅವಳು ಅನುಭವಿಸುತ್ತಿರುವ ಅಸಾಧ್ಯ ಕಷ್ಟ ಜಗತ್ತಿನ ಯಾವ ಮಹಿಳೆಯೂ ಅನುಭವಿಸಿಲ್ಲ.

ಕಪ್ಪು ಮಹಿಳೆ ಕೂಲಿ ಕೆಲಸದ ಜೊತೆ ಮನೆಯ ಕೆಲಸವನ್ನೂ ನೋಡಿಕೊಳ್ಳುತ್ತಾಳೆ. ಹೆಚ್ಚಿನ ಕೂಲಿಗಾಗಿ ಗಂಡನಿಗೆ ಜೊತೆಯಾಗಿ ಹೋರಾಡುತ್ತಾಳೆ. ಆತನೊಡನೆ ಬದುಕುವುದಕ್ಕಾಗಿ ಪೋಲೀಸರ ಲಾಠಿ ಎದುರಿಸುತ್ತಾಳೆ.

ಮಕ್ಕಳ ಶಿಕ್ಷಣಕ್ಕಾಗಿ ಪ್ರತಿಭಟಿಸುತ್ತಾಳೆ. ವಿಮೋಚನಾ ಹೋರಾಟದಲ್ಲಿ ಸತ್ತ ಮಕ್ಕಳಿಗಾಗಿ ಅಳುತ್ತಾಳೆ. ಜೀವದ ಹಂಗು ತೊರೆದು ರಾಜಕೀಯ ಕೈದಿಗಳಿಗೆ ಬೆಂಬಲ-ವ್ಯಕ್ತಪಡಿಸುತ್ತಾಳೆ. ವರ್ಣದ್ವೇಷ ನೀತಿಯ (ಅಪಾರ್ಥೀಡ್) ವಿರುದ್ಧದ-ಹೋರಾಟದಲ್ಲಿ ತನ್ನತನವನ್ನು ತೋರಿಸುತ್ತಾಳೆ.

ಅನೇಕ ಮಹಿಳೆಯರು ಮೂವತ್ತು ತಲುಪುವುದರೊಳಗಾಗಿ ವಿಧವೆಯರಾಗುತ್ತಾರೆ. ಚಿನ್ನದ ಗಣಿಯಲ್ಲಿ ಕೆಲಸ ಮಾಡಿ ಮರಳಿದ ಗಂಡಸರು ಎಲುಬಿನ ಗೂಡಾಗಿರುತ್ತಾರೆ. ದಿಕ್ಕು ತೋಚದ ನಿರಕ್ಷರಿ ಹೆಣ್ಣು ಮಕ್ಕಳು ಒಂದಿಷ್ಟು ಕೂಲಿಗಾಗಿ ಜೀವ ಸವೆಸುತ್ತಾ ದಿನ ಕಳೆಯುತ್ತಾರೆ. ಸರಿಯಾದ ಆಹಾರವಿಲ್ಲದೆ ಅನಾರೋಗ್ಯಕರವಾದ ವಾತಾವರಣದಲ್ಲಿ ಬದುಕುವುದರಿಂದಾಗಿ ಅನೇಕರು ಕ್ಷಯರೋಗ ಪೀಡಿತರಾಗಿದ್ದಾರೆ. ಅಕಾಲ ಮರಣಗಳ ಸಂಖ್ಯೆ ಹೆಚ್ಚಿದೆ. ಹೀಗೆ ಅವರ ಬದುಕೊಂದು ದುಃಖದ ನೀಳ್ಗವನವಾಗಿದೆ. ಸ್ಥಳೀಯ ನೀತಿಯ ಪ್ರಕಾರ ಕರಿಯರು ಬಂಟುಸ್ತಾನಗಳಲ್ಲೇ ವಾಸಿಸಬೇಕು. ಕೂಲಿಗಳು ತಮ್ಮ ಕೆಲಸವನ್ನು ಬದಲಾಯಿಸಬಾರದು. ಕರಿಯರು ತಾವು ಬೀಡು ಬಿಟ್ಟಿರುವ ಪ್ರದೇಶಗಳಿಂದ ಬೇರೆಡೆ ಹೋಗಲು ಸರ್ಕಾರ ಆಜ್ಞೆ ಮಾಡಿದಾಗ ಗಂಟು ಮೂಟೆ ಕಟ್ಟಿಕೊಂಡು ಹೋಗಬೇಕು. ಈ ಎಲ್ಲ ಕಟ್ಟುಪಾಡುಗಳು ಕಪ್ಪು ಮಹಿಳೆಯ ಮೇಲೆ ನೇರವಾದ ದುಷ್ಪರಿಣಾಮ ಬೀರುತ್ತವೆ.

'ಮಹಿಳೆಯರ ವಿಮೋಚನೆ ಇಲ್ಲದೆ ರಾಷ್ಟ್ರೀಯ ವಿಮೋಚನೆ ಇಲ್ಲ ರಾಷ್ಟ್ರೀಯ ವಿಮೋಚನೆ ಇಲ್ಲದೆ ಮಹಿಳೆಯರ ವಿಮೋಚನೆ ಇಲ್ಲ' ಎಂಬುದನ್ನು ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಪ್ರಿಯರು ಮನಗಂಡಿದ್ದಾರೆ. ವಿಶ್ವ ಮಹಿಳಾ ದಿನವಾಗಿ ಮಾರ್ಚ್ 8 ಅನ್ನು ಸಂಭ್ರಮದಿಂದ ಆಚರಿಸಿದರೂ ಆಗಸ್ಟ್ 9 ಆಫ್ರಿಕಾದ ಮಹಿಳೆಯರ ದಿನವಾಗಿದೆ. ಅಂದು ಅವರು ಏಕತೆಯ ಮೂಲಕ ತಮ್ಮ ಬಲ ಪ್ರದರ್ಶನ ಮಾಡುವುದಷ್ಟೇ ಅಲ್ಲದೆ ತಮ್ಮ ಹೋರಾಟದ ಪರಂಪರೆಯಲ್ಲಿ ತ್ಯಾಗ, ಬಲಿದಾನ ಮಾಡಿದವರನ್ನು ಸ್ಮರಿಸುತ್ತಾರೆ. ಹೀಗೆ ಅನ್ಯಾಯ, ದಬ್ಬಾಳಿಕೆಗಳ ವಿರುದ್ಧ ಗಂಡಸರ ಹೆಗಲಿಗೆ ಹೆಗಲು ಕೊಟ್ಟು ಹೋರಾಡುವುದರ ಮೂಲಕ ಕಪ್ಪು ಮಹಿಳೆಯರ ಸಾಮಾಜಿಕ ಸಮಾನತೆಯನ್ನು ಕೂಡ ಸಾಧಿಸುವ ಸಾಧ್ಯತೆಯನ್ನು ತೋರಿಸಿದ್ದಾರೆ.

ಮೇಲೆ ಸರ್ಕಾರದ ಕಾನೂನಿನ ಖಡ್ಗ ನೇತಾಡುತ್ತಿದ್ದರೂ ಕಪ್ಪು ಪುಟ್ಟ ಬಂಡವಾಳಶಾಹಿಗಳು ಆಫ್ರಿಕಾ ಜನಾಂಗದ ಮಧ್ಯೆ ತೀವ್ರ ಬಡತನವಿರುವ ಪ್ರದೇಶಗಳಲ್ಲಿ ತಮ್ಮ ವ್ಯವಹಾರ ನಡೆಸುತ್ತಾರೆ. ಪುಟ್ಟ ಬಂಡವಾಳಶಾಹಿ ಮನೆತನಕ್ಕೆ ಸೇರಿದ ಮಹಿಳೆಯರು ಆಫ್ರಿಕನ್ ಮಹಿಳಾ ಸಮಾಜದ ಸಂಘಟನೆಗಳ ನಾಯಕಿಯರಾಗಿದ್ದಾರೆ. ರಾಜಿ ರಾಜಕೀಯ ನೀತಿ ಮತ್ತು ಮಧ್ಯಮ ವರ್ಗದ ನಡವಳಿಕೆಯನ್ನು ಅವರು ಹೊಂದಿದ್ದಾರೆ. ಉಪನಗರಗಳ ಬಿಳಿ ಮಹಿಳೆಯರು ಅವರಿಗೆ ಮಾದರಿಯಾಗಿದ್ದಾರೆ. ಬಿಳಿ ಮಹಿಳೆಯರ ಹುಡುಗಾಟಿಕೆ ಮತ್ತು ನ್ಯೂನತೆಯನ್ನು ಶ್ಲಾಘ್ಯವೆಂದು ಭ್ರಮಿಸಿ ಅವರು ಹೆಮ್ಮೆ ಪಡುತ್ತಾರೆ.

ದುಡಿಯುವ ವರ್ಗದ ಕಪ್ಪು ಮಹಿಳೆಯರು ಇತರ ಜನಾಂಗಗಳೊಡನೆ ದುಡಿಯುತ್ತ ಬದುಕುವುದರಿಂದ ಅವರ ಮಧ್ಯೆ ಸಾಮರಸ್ಯವೇರ್ಪಟ್ಟು ಜನಾಂಗೀಯ ಎಲ್ಲೆಗಳು ಮಾಯವಾಗುತ್ತವೆ. ಹೀಗೆ ಒಂದುಗೂಡುವುದರ ಮೂಲಕ ವಿಮೋಚನಾ ಪ್ರಜ್ಞೆ ತೀವ್ರಗೊಳ್ಳುತ್ತದೆ. ಆಫ್ರಿಕನ್ ಜನಾಂಗ ಮತ್ತು ಮಿಶ್ರವರ್ಣೀಯ ಕೆಲಸಗಾರರ ಮಧ್ಯೆ ಬಿಕ್ಕಟ್ಟನ್ನುಂಟು ಮಾಡಲು ಸರ್ಕಾರ ಅನೇಕ ಸಲ ವಿಫಲ ಪ್ರಯತ್ನ ಮಾಡಿದೆ. ದಕ್ಷಿಣ ಆಫ್ರಿಕಾದ ಅನೇಕ ಖ್ಯಾತ ನಾಯಕಿಯರು ದುಡಿಯುವ ವರ್ಗದಿಂದಲೇ ಬಂದಿದ್ದಾರೆ.

ಬಿಳಿಯರ ಮನೆಗೆಲಸ ಮಾಡುವ ಮಹಿಳೆಯರು ಬೃಹತ್ ಪ್ರಮಾಣದಲ್ಲಿದ್ದು ಬಿಳಿಯ ಹೆಂಗಸರು ಅವರನ್ನು ಕೀಳಾಗಿ ಕಾಣುತ್ತಾರೆ. ಆದರೆ ಅವರೆಲ್ಲ ಒಂಟಿಯಾಗಿ ಕೆಲಸ ಮಾಡುವುದರಿಂದ ಅವರನ್ನು ಸಂಘಟಿಸುವುದು ಕಠಿಣ ಕೆಲಸವಾಗಿದೆ. ಆದರೆ ದೇಶದಲ್ಲಿ ನಡೆಯುತ್ತಿರುವ ಯಾವುದೇ ಪ್ರತಿಭಟನೆ ತಾವು ಅನುಭವಿಸುತ್ತಿರುವ ಹಿಂಸೆಗೆ ವಿರೋಧವಾಗಿಯೇ ಇದೆ ಎಂಬುದರ ಅರಿವು ಅವರಿಗಿದೆ. ಹೀಗಾಗಿ ಅವರ ಯಾವುದೇ ತೆರನಾದ ಪ್ರತಿಭಟನೆ ಕ್ರಾಂತಿಗೆ ಪೂರಕವಾಗೇ ಇರುತ್ತದೆ.

ಮಹಿಳೆಯರ ಹೋರಾಟ ಮತ್ತು ರಾಷ್ಟ್ರೀಯ



ನಾಯಿಕಸಾನಿ–ದೇವದಾಸಿಯ ಇನ್ನೊಂದು ಮುಖ

ಲೇಖಕ ಬಿ. ವಿ. ನಾಗರಾಜು ಕೋಲಾರ ಜಿಲ್ಲೆಯ ಪ್ರಜಾವಾಣಿ ವರದಿಗಾರನಾಗಿ ಕೆಲಸ ಮಾಡುತ್ತಿದ್ದಾಗ, ಅಲ್ಲಿನ ಆಂಧ್ರಕ್ಕೆ ಹೊಂದಿಕೊಂಡ ಕರ್ನಾಟಕದ ಗಡಿಭಾಗಗಳಲ್ಲಿರುವ ಹಳ್ಳಿಗಳಲ್ಲಿ ವಾಸಿಸುತ್ತಿರುವ ದೊಂಬರ ಕುರಿತ ಅಧ್ಯಯನದ ಫಲವೇ ಈ 'ನಾಯಿಕಸಾನಿ' ಕೃತಿ.

ನಾಗರೀಕತೆಯ ಸೋಂಕು ತಟ್ಟದೆ ಹಳ್ಳಿಗಳಲ್ಲಿ ಮೂಢನಂಬಿಕೆಗೆ ಜೋತು ಬಿದ್ದು, ಇನ್ನೂ ತಮ್ಮ ಕುಲ ಕಸಬು ನಡೆಸಿಕೊಂಡು ಬರುತ್ತಿರುವ 'ನಾಯಿಕಸಾನಿ'ಯರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇಲ್ಲಿ ಕಲೆಹಾಕಿದ್ದಾರೆ.

ಆಂಧ್ರ ಪ್ರದೇಶದ ಕಡೆಯಿಂದ ಬಂದು ಕರ್ನಾಟಕದಲ್ಲಿ ನೆಲೆಯೂರಿರುವಂಥ ತೆಲುಗರ ಮನೆಗಳಲ್ಲಿ ನಾಯಿಕಸಾನಿ ಶಬ್ದವನ್ನು ಸೂಳೆ ಎಂಬ ಅರ್ಥದಲ್ಲಿ ಬಳಸುವುದನ್ನು ಬಿಟ್ಟರೆ ಉಳಿದಂತೆ ಈ ಪದದ ಬಳಕೆ ಕರ್ನಾಟಕದಲ್ಲಿ ಹೊಸದೆ. 'ದೊರೆಸಾನಿ' 'ಗೌಡಶಾನಿ' ಇಲ್ಲಿ ದೊರೆಯ ಹೆಂಡತಿ ಮತ್ತು ಗೌಡನ ಹೆಂಡತಿ.

ಉತ್ತರ ಕರ್ನಾಟಕದಲ್ಲಿ ಪ್ರಸಿದ್ಧವಾಗಿರುವ 'ದೇವದಾಸಿ' ಪದ್ಧತಿಗಿಂತ ಹಲವಾರು ಆಚಾರ–ವಿಚಾರಗಳಲ್ಲಿ ಭಿನ್ನವಾಗಿರುವ 'ನಾಯಿಕಸಾನಿ' ಪದ್ಧತಿ ಕೋಲಾರ ಜಿಲ್ಲೆಯ ಮಾಲೂರು, ಮುಳಬಾಗಿಲು, ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ನೂರಾರು ವರ್ಷಗಳಿಂದ ಅನೂಚಾನವಾಗಿ ನಡೆದುಕೊಂಡು ಬರುತ್ತಿದೆ. (ಅಚ್ಚರಿಯೆಂದರೆ 1971 ರ ಭಾರತ ಜನಗಣತಿ ಅಂಕಿಸಂಖ್ಯೆಯ ಪುಸ್ತಕದಲ್ಲಿ ಕರ್ನಾಟಕದಲ್ಲಿ ದೊಂಬರ ಸಂಖ್ಯೆ ಕೇವಲ ನಾಲ್ಕು ಎಂದು ದಾಖಲಾಗಿದೆಯಂತೆ !)

ಮಾರಮ್ಮ ದೇವತೆಯ ಭಕ್ತರಾದ ಈ ದೊಂಬರು ಮನೆಗೊಬ್ಬ ಹೆಣ್ಣು ನಾಯಿಕಸಾನಿಯಾಗಬೇಕೆಂದು ಆಗ ಮಾತ್ರ ಮಾರಮ್ಮನಿಗೆ ಸಮಾಧಾನವಾಗುವುದೆಂದು—ಇದು ಆಕೆಯ ಸೇವೆಯೆಂದೇ ತಲ ತಲಾಂತರದಿಂದ ಅನುಸರಿಸಿಕೊಂಡು ಬಂದಿದ್ದಾರೆ. ಜಿಗಿಯುವುದು, ನೆಗೆಯುವುದು, ಬಿಲ್ಲಿನಂತೆ ಮೈ ಬಗ್ಗಿಸಿ ನೆಗೆಯುವುದು–ಇಂತಹ ವೃತ್ತಿಯೂ ಒಂದುಂಟು, ದೊಂಬರಿಗೆ. ದೊಂಬರ ಆಟವೆಂದೇ ಇದು ಖ್ಯಾತಿ. ಎಲ್ಲೋ ಕೆಲವರಿಗೆ ಅಲ್ಪ ಸ್ವಲ್ಪ ಜಮೀನುಂಟು. ಉಳಿದಂತೆ ಕಿತ್ತು ತಿನ್ನುವ ಬಡತನ, ದಾರಿದ್ರ್ಯ, ಅಜ್ಞಾನ.

ಮೈನೆರೆದ ಹೆಣ್ಣಿಗೆ ಯಾರೊಂದಿಗಾದರೂ ಮೊದಲ ಸೋಬನ. ಸಾಮಾನ್ಯವಾಗಿ ಗೌಡರು ಅಥವಾ ರೇಷ್ಮೆ ಸೀರೆ, ಹೆಚ್ಚು ಹಣ, ಆಭರಣ ಕೊಡುವ ಯಾವನಾದರೂ ಆಗಬಹುದು. ಮೊದಲ ಒಂದು ದಿನದ ಮುಟ್ಟಿಗೆ ಮಾತ್ರ ಇರುವ ಇವನು ಹೆಸರಿಗೆ ಪತಿ ಕೂಡ. ನಂತರ ದಿನಕ್ಕೆ ಐದಾರು ಜನವಾದರೂ ಸರಿಯೇ. ಇಲ್ಲಿಂದ ಮುಂದೆ ಇವಳು ಹೀರುವ ಯಂತ್ರ ಮಾತ್ರವಾಗುತ್ತಾಳೆ. ಹೃದಯ ಸತ್ತು ಹೋಗುತ್ತದೆ. ಜೀವಚ್ಛವವಾಗುತ್ತಾಳೆ. ಗಯ್ಯಾಳಿ, ನಿರ್ದಯಿ, ನಿಷ್ಕರುಣಿ ಎಲ್ಲಾ. ಇವಳ ಮನಸ್ಥಿತಿ ಅರಿಯಲು ಇಲ್ಲಿನ ಲೇಖಕರ ಅನುಭವ ನೋಡಿ.

ನಾಯಿಕಸಾನಿಯರಿಂದ ಆದಷ್ಟು ವಿಷಯ ಸಂಗ್ರಹಣೆ ಮಾಡಬೇಕೆಂಬ ಲೇಖಕರು ನಾಯಕಸಾನಿಯೊಬ್ಬಳ ಹತ್ತಿರ 'ನಿನಗೆ ಸಾಧ್ಯವಾದ ಸಹಾಯ ಮಾಡಲು ಬಂದಿರುವೆ' ಎಂದಾಗ 'ಇಂಥವರು ಬಹಳ ಜನ ಬಂದುಹೋಗಿದ್ದಾರೆ. ನನಗೆ ಸಂಪಾದನೆ ಮುಖ್ಯ.

ನಾಯಿಕಸಾನಿ–ಒಂದು ಅಧ್ಯಯನ. ಲೇಖಕ : ಬಿ. ವಿ. ನಾಗರಾಜು ಅಪ್ತ ಪ್ರಕಾಶನ, ಇಂಡಸ್ಟ್ರಿಯಲ್ ಡೌನ್. ರಾಜಾಜಿನಗರ, ಬೆಂಗಳೂರು. ಪುಟ : 84. ಬೆಲೆ : ರೂ.10.

ವಿಮೋಚನೆಯ ಅಂತಿಮ ಗುರಿ ಸಾಮಾಜಿಕ ಬದಲಾವಣೆ ಆದ್ದರಿಂದ ಕಪ್ಪು ಮಹಿಳೆಯರ ಹೋರಾಟ ಅಪಾರ್ಥೀಡ್ ವಿರುದ್ಧದ ಹೋರಾಟದ ಒಂದು ಮಹತ್ವದ ಅಂಗವಾಗಿದೆ.

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನಲ್ಲಿ ಮಹಿಳೆಯರಿಗೆ ಸಮಾನ ಸ್ಥಾನವಿದೆ. ಉಮ್‌ಖೋಂಟೊ ವೆ ಸಿಜ್ವೆ (ದೇಶದ ಈಟಿ) ಎಂಬ ಹೆಸರಿನ ಆದರ ಮಿಲಿಟರಿ ವಿಭಾಗದಲ್ಲಿ ಅವರಿಗೆ ಸರಿ ಸಮಾನವಾದ ತರಬೇತಿ ನೀಡಲಾಗುತ್ತಿದೆ. ಆದರೆ ಅನೇಕ ವರ್ಷಗಳಿಂದ ಶಿಕ್ಷಣವಿಲ್ಲದೆ ಹಾಗೂ ತಲೆತಲಾಂತರದಿಂದ ಬಂದ ಕೀಳರಿಮೆಯಿಂದಾಗಿ ಅನೇಕ ಮಹಿಳೆಯರು ಮುಂದುವರಿಯಲಿಕ್ಕಾಗುತ್ತಿಲ್ಲ. ವಿಮೋಚನಾ ಹೋರಾಟದಲ್ಲಿನ ಪುರುಷರು ತಮ್ಮ ಸ್ತ್ರೀಯರನ್ನು ಸಮಾನವಾಗಿ ಕಾಣುತ್ತಾರೆ. ಸಾಂಪ್ರದಾಯಿಕ ಸಮಾಜದಲ್ಲಿ ಕೂಡ ಈ ಪ್ರಜ್ಞೆ ಮೂಡುತ್ತಿದೆ.

ದಬ್ಬಾಳಿಕೆ ನಡೆಸುವವರಿಗೆ ಶರಣಾಗತರಾಗದಿರುವುದೇ ಸ್ವಾತಂತ್ರ್ಯ ಹೋರಾಟದ ಮೂಲವಾಗಿರುತ್ತದೆ. ಇಂದು ಪ್ರಜ್ಞಾವಂತ ಕಪ್ಪು ಮಹಿಳೆಯರು ಅಪಾರ್ಥೀಡ್ ಸರ್ಕಾರಕ್ಕೆ ಮತ್ತು ಗಂಡುಮಯವಾದ ಸಾಂಪ್ರದಾಯಿಕ ಸಮಾಜಕ್ಕೆ ಶರಣಾಗದೆ ಹೋರಾಡುತ್ತಿದ್ದಾರೆ.

"ಮಹಿಳೆಯರೇ ಎದ್ದೇಳಿ, ಒಂದುಗೂಡಿ, ಏಕತೆ ಸಾಧಿಸಿ" ಇದು ಅವರ ಘೋಷಣೆ.

ಸಿನಿಮಾರಂಗದಲ್ಲಿ ಹೆಣ್ಣು

'ಹೆಣ್ಣು ಮತ್ತು ಆಕೆಯ ಸ್ಥಾನ ಮಾನಗಳ ಬಗ್ಗೆ ಇರುವ ಪ್ರಶ್ನೆಗಳು ಕಟುವಾದರೂ ಹಲವು ವಾಸ್ತವಗಳು ಪರವಿರೋಧದ ನಿಲುವುಗಳು ಇಂದಿನ ಮಾತಲ್ಲ. ಈಚೆಗೆ ಹೆಚ್ಚು ಪ್ರಸ್ತಾಪಗೊಳ್ಳುತ್ತಿದೆ ನಿಜ. ಹಲವರ ವಿಸ್ಮಯಕ್ಕೆ, ಕೆಲವರ ಕುಚೋದ್ಯಕ್ಕೆ ಕೂಡ ಗುರಿಯಾಗು ವಷ್ಟು ವೇದಿಕೆಗಳಲ್ಲಿ, ಹಕ್ಕುಗಳ ಬೇಡಿಕೆಯಲ್ಲಿ ಪ್ರದರ್ಶನ ನಡೆಸುವಲ್ಲಿ, ಪತ್ರಿಕೆಗಳ ವಿವಾದಗಳಲ್ಲಿ ಈ ಚರ್ಚೆಯ ವ್ಯಾಪ್ತಿಯಿದೆ. ಈ ಸಮಸ್ಯೆ ಸಿನಿಮಾರಂಗ ವೊಂದಲ್ಲ ಎಲ್ಲ ರಂಗದಲ್ಲೂ ಉಂಟು. ವಿಶ್ವದ ಸಂದರ್ಭ ದಲ್ಲೇ ಇನ್ನೂ ಪರಿಹಾರವಾಗದ ಸಮಸ್ಯೆ.

ಒಂದು ಪ್ರದರ್ಶನ ಕಲೆ ಮತ್ತು ಅದರ ಪರಿಣಾಮ ಗಳ ಗಾಢತೆಯ ಕಾರಣಕ್ಕಾಗಿ- ಅದು ಮುಖಕ್ಕೆ ರಾಚು ತ್ತದೆ ಮತ್ತು ಮನಸ್ಸನ್ನು ದುರ್ಬಲಗೊಳಿಸಿ ಬಿಡುತ್ತದೆ ಎಂಬ ಕಾರಣಕ್ಕೇ ಸಿನಿಮಾ ರಂಗದಲ್ಲಿ ಹೆಣ್ಣನ್ನು ಕುರಿತು ವಿಶೇಷವಾಗಿ ಚರ್ಚಿಸಬೇಕಾದ ಅಗತ್ಯ ಇರುತ್ತದೆ. ಆದರೆ ಇವಕ್ಕೆ ಕಾರಣ ಹೆಣ್ಣು-ಗಂಡು ಬೇರೆ ಬೇರೆ ಎಂಬ ವ್ಯತ್ಯಾಸ ಸರಿಯಾಗುವುದಿಲ್ಲ. ಚಿತ್ರರಂಗ ಮಾತ್ರವಲ್ಲ ಒಟ್ಟು ಬದುಕಿನ ಸಂದರ್ಭದಲ್ಲೇ ಹೆಣ್ಣು-ಗಂಡು ಅನಿವಾರ್ಯ ಬೆಸುಗೆಗಳಾಗಿವೆ ಎಂಬುದನ್ನು ಯಾವುದೇ ಚರ್ಚೆಯ ಸಂದರ್ಭದಲ್ಲೂ ವಿಸ್ಮರಿಸುವಂತಿಲ್ಲ.

ಸೆಕ್ಸ್- ಶೋಷಣೆ ಇಂಥ ಮಾತುಗಳ ಹಿಂದೆ ಆ ಶಬ್ದಗಳಿಗೆ, ಕ್ರಿಯೆಗಳಿಗೆ ನಾವು ಕೊಡುವ ಪ್ರಾಧಾನ್ಯ-ಅರ್ಥಗಳ ಕಾರಣವಿದೆ. ಈ ವ್ಯಾಖ್ಯಾನದ ಹಿನ್ನೆಲೆ ಯಲ್ಲೇ ಚರ್ಚೆ—ಹೋರಾಟ—-ಚಳವಳಿ- ಸಂಘಟನೆಗಳ ಮಾತು ಬರುತ್ತದೆ. ಅದು ಪುರುಷ ವಿರೋಧಿ ಚಟುವಟಿಕೆ ಎಂಬ ಹಣೆಪಟ್ಟಿ ಹಾಕಿ ಸರಳಗೊಳಿಸುವ ಮನೋಧರ್ಮ ಸಮಸ್ಯೆಯಿಂದ ಜಾರಿಕೊಳ್ಳುವ ಬಗೆಯಷ್ಟೇ ಆಗುತ್ತದೆ.

ಸಮಾನತೆಯ ಪ್ರಶ್ನೆ ಗಂಡು ಹೆಣ್ಣಾಗಬೇಕೆಂಬು ದಾಗಲೀ ಹೆಣ್ಣು ಗಂಡಾಗಬೇಕೆಂಬ ಅರ್ಥದಲ್ಲಾಗಲೀ ಇಲ್ಲ. ಈ ಕಾರಣಕ್ಕಾಗಿ ಹೆಣ್ಣು ಹೆಣ್ತನವನ್ನು ಬಿಟ್ಟು ಕೊಡಬೇಕೆಂಬ ಮಾತೂ ಅರ್ಥಹೀನ. ಇಂಥ ಅತಿ ರೇಕದ ಅರ್ಥಗಳು—-ವ್ಯಾಖ್ಯಾನಗಳಿಂದ ತಪ್ಪಿಸಿಕೊಳ್ಳ ದಿದ್ದರೆ ವ್ಯಂಗ್ಯ—ಅಪಹಾಸ್ಯಗಳಿಗೆ ಈಡಾಗುತ್ತ, ನಿರ್ದಿಷ್ಟ ಗುರಿಯನ್ನು ತಲುಪದೆ ಉಳಿದು ಬಿಡುತ್ತವೆ ಕೂಡ.

ಅಧಿಕಾರ- ಶ್ರೀಮಂತಿಕೆ ಇರುವ ಜಾಗದಲ್ಲಿ 'ಹೆಣ್ಣು' ಎಂಬ ಅಂಶ ಗೌಣವಾಗುತ್ತದೆ. ಊದಿದರೆ ಹಾರಿ ಹೋಗುವ ದಾರ್ಢ್ಯದವನಾದರೂ ಯಜಮಾನ ಎಂಬ ಕಾರಣಕ್ಕೆ ಬಲಿಷ್ಠನಾದ ಬಡವ ನಡುಬಗ್ಗಿಸಿ ನಿಲ್ಲುವ ಹಾಗೆ. ಇಂದಿರಾಗಾಂಧಿಯವರನ್ನು ಮಹಿಳೆ ಎನ್ನಲಿಲ್ಲ ಪ್ರಧಾನಿ ಎಂದವು ಎಂಬ ಮಾತಿನ ಹಿಂದೆ ಇದಕ್ಕಿಂತ ಬೇರೆ ಭಾವ ಉಂಟೆ ?

ವಿಜಯಾ

ಪರಸ್ಪರ ಆಕರ್ಷಣೆ

ಗಂಡು ಹೆಣ್ಣಿನ ದೇಹವನ್ನು ಅದರ ಅಂಕು ಡೊಂಕುಗಳ ಚಂದಕ್ಕಾಗಿ ಅಪೇಕ್ಷಿಸುವ ಹಾಗೇ ಹೆಣ್ಣಿಗೂ ಗಂಡಿನ ಬಗ್ಗೆ ಭಾವನೆಗಳಿಲ್ಲವೆಂದೇಕೆ ಭಾವಿಸಬೇಕು. ಆಕರ್ಷಣೆಯ ಕೇಂದ್ರಗಳು ಕಾರಣಗಳು ಬೇರೆ ಬೇರೆ ಇರ ಬಹುದಾದರೂ ಆಕರ್ಷಣೆಯಂಥದು ಪರಸ್ಪರವಾಗಿರು ತ್ತದೆ. ಗಂಡಸಿನಷ್ಟು ಹೊರಚ್ಚಾಗಿ ವ್ಯಕ್ತವಾಗದಿರ ಬಹುದು- ಹೆಂಗಸಿನಲ್ಲಿಯ ಭಾವನೆಗಳು ಆಂತರಿಕ ಅನುಭೂತಿ ಮಾತ್ರ ಆಗಿ ಉಳಿದಿರಬಹುದು.

ಈ ಕಾರಣಕ್ಕಾಗಿ ಚಿತ್ರರಂಗದಂಥ ಸಮೂಹ ಮಾಧ್ಯಮದಲ್ಲಿ ಹೆಣ್ಣಿನ ಬಳಕೆಯ ಹಾಗೇ ಗಂಡಿನ ಬಳಕೆಯೂ ಆಗುತ್ತದೆ. ಇದನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕಷ್ಟೇ. ಗಂಡು ಈ 'ಪ್ರದರ್ಶನ'ವನ್ನು ಹೆಗ್ಗಳಿಕೆ ಮಾಡಿಕೊಳ್ಳುತ್ತಾನೆ. ಹೆಣ್ಣಿಗೆ ಕೆಲವು ಸಾಮಾಜಿಕ ನಿಯಮಗಳ ಕಾರಣದಿಂದಾಗಿ ಅದು ಸಂಕೋಚದ ಮಾತಾಗಿರುತ್ತದೆ: ಆ ಸಂಕೋಚವೇ

ನಿಮ್ಮ ಒಣಮಾತುಗಳು ಬೇಕಿಲ್ಲ. ನನ್ನ ದೇಹ ಕೊಡ್ತೇನೆ' ಎನ್ನುತ್ತಾಳೆ. ನೋವು ಹೆಪ್ಪುಗಟ್ಟಿರುವ ಅವಳ ಸಾಮಾನ್ಯ ಮನಸ್ಥಿತಿಯ ದ್ಯೋತಕ ಇದು.

ರಾತ್ರಿಯಾದರೆ ವಿದ್ಯುತ್ ದೀಪಗಳ ಸುಳಿವೇ ಇಲ್ಲಿಯ ಹಳ್ಳಿಗಳಲ್ಲಿ ಇಲ್ಲ. ಶೋಭಾಳನ್ನು ಕೇಳಿದಾಗ 'ಅಯ್ಯೋ ಈ ಹಳ್ಳಿಗೆ ಲೈಟು ಬೇಡ' ಎಂದಳು. ತಿಳುವಳಿಕೆಯ ಕುಡಿ ಈ ಜನಾಂಗದ ಅಲ್ಲೊಬ್ಬರು, ಇಲ್ಲೊಬ್ಬರಿಗೆ ಮೂಡಿರುವುದೂ ಉಂಟು. ಆದರೆ ಒಬ್ಬರ ಮಾತು ಯಾರು ಕೇಳುತ್ತಾರೆ. 'ನನ್ನ ಮಾತು ಯಾರೂ ಕೇಳೋಲ್ಲ. ಇದೆಲ್ಲ ಬಿಟ್ಟು ಬಿಡಿ. ಎಂದರೆ ಒಣಗಿದೆ ಹೊಟ್ಟೆ ತೋರಿಸುತ್ತಾರೆ', ಎಂಬ ಪ್ರತಿ ಕ್ರಿಯೆಯೇ ಸಾಕ್ಷಿ.

> ತಂದೆ ಎನಿಸಿಕೊಂಡವನು ಮಗಳ ಹತ್ತಿರಕ್ಕೆ, ಅಣ್ಣನು ತಂಗಿಯ ಹತ್ತಿರಕ್ಕೆ ವ್ಯಭಿಚಾರಕ್ಕಾಗಿ ಗಂಡುಗಳನ್ನು ತಂದು ಬಿಡುವುದು ಇಲ್ಲಿ ಸಾಮಾನ್ಯ ಸಂಗತಿ. ಬಡತನ, ದಾರಿದ್ರ್ಯ, ಅರ್ಥ ಹೀನ ಸಂಪ್ರದಾಯಗಳಿಂದ ಈ ಜನ ತಲೆಹಿಡುಕರು, ನಿಷ್ಕರುಣಿಗಳು, ಕಟುಕರು, ಕ್ಷುದ್ರರೂ, ಸ್ವಾಭಿಮಾನಶೂನ್ಯರೂ ಆಗಿದ್ದಾರೆ.

ಕೆಲವರಿಗೆ ಜಮೀನಿದೆ. 'ಆದರೆ ಜಮೀನು ಎಷ್ಟು ಹೊಟ್ಟೆ ತುಂಬಿಸುತ್ತದೆ. ನೀರಾವರಿ ಸೌಲಭ್ಯವಿಲ್ಲ. ಬಂಡವಾಳ ಹೂಡಿ ಅಭಿವೃದ್ಧಿ ಪಡಿಸಲಂತೂ ಚಿಕ್ಕಾಸು ಇಲ್ಲ. ಬರೆ 'ಇಲ್ಲ', ಸಾಮ್ರಾಜ್ಯದಲ್ಲಿರುವ ಈ ಜನಗಳಲ್ಲಿ 'ಶೀಲ'ವೂ ಇಲ್ಲ, ಎಂಬ ಖಚಿತ ಅಭಿಪ್ರಾಯ ಲೇಖಕರದು.

ನಾಯಿಕಸಾನಿ ಜನಾಂಗದ ಅಧ್ಯಯನದಲ್ಲಿ ಲೇಖಕರು ಕಾರಣ ಮತ್ತು ಪರಿಹಾರಗಳನ್ನು ವಿಶ್ಲೇಷಿಸಿರುವುದು ಕೃತಿಗೆ ಹೆಚ್ಚಿನ ಮಹತ್ವ ಲಭಿಸಿದೆ—"ಒಂದು ಜನಾಂಗವೊಂದರ ಅಧ್ಯಯನ ಮಾಡುವಾಗ ಮಾನವ ಶಾಸ್ತ್ರಜ್ಞರು ವಸ್ತು ಸ್ಥಿತಿಯ ವಿವರಗಳನ್ನು ಕ್ರಮಬದ್ಧವಾಗಿ ಜೋಡಿಸುವ ಸಂಶೋಧನೆಯ ಶಿಸ್ತಿನಿಂದ ಕೆಲಸ ಮಾಡುತ್ತಾರೆ. ಆದರೆ ಇಲ್ಲಿ ನಾಗರಾಜು ಅವರಿಗೆ ಸಮಾಜಶಾಸ್ತ್ರಜ್ಞನ ಒಲವಿನ ಜತೆಗೆ ಇಡೀ ಕೃತಿಯ ಬೆನ್ನೆಲುಬಾಗಿ, ಆಶಯವಾಗಿ ಒಂದು ಮಾನವೀಯ ದೃಷ್ಟಿಕೋನದ ಮಿಡಿತವಿದೆ. ಬದಲಾವಣೆ–ಪರಿವರ್ತನೆ ಸಂಪೂರ್ಣವಾಗಿ ಆಗಬೇಕಾಗಿದೆ. ಮಾನಸಿಕ ಪರಿವರ್ತನೆಯ ಜೊತೆಗೆ ಆರ್ಥಿಕ ಸಾಮಾಜಿಕ ಬದಲಾವಣೆ ಇಲ್ಲಿಗೆ ಬೇಕಾಗಿದೆ..." ಎಂಬ ತರ್ಕಕ್ಕೆ ಕೊನೆಗೂ ಲೇಖಕರು ತಲುಪುತ್ತಾರೆ. ಆದರೆ ಇದನ್ನು ಪುಸ್ತಕದ ನಿರೂಪಣೆಯಲ್ಲಿ ಕ್ರಮಬದ್ಧವಾಗಿ ಜೋಡಿಸುವುದಿಲ್ಲ. ಮುನ್ನುಡಿಯಲ್ಲಿ ಬರಗೂರು ರಾಮಚಂದ್ರಪ್ಪನವರು ಅಭಿಪ್ರಾಯ ಪಡುವಂತೆ ಗೊಂದಲವು ನಿರೂಪಣೆಯ ವಿಧಾನದಲ್ಲಿ, ಭಾಷೆಯ ಬಳಕೆಯಲ್ಲಿ ಕಾಣಿಸಿಕೊಂಡು ಕೃತಿಗೆ ಖಚಿತ ಕ್ರಮಬದ್ಧ ಬಂಧವೊಂದು ರೂಪುಗೊಳ್ಳದೆ, ಸ್ವಲ್ಪ ಮಟ್ಟಿನ ಶಿಥಿಲತೆ ಕಾಣಿಸಿಕೊಳ್ಳುತ್ತದೆ.

ಅದೇನೇ ಇರಲಿ, ನಾಗರಾಜು ಅವರು ಸಮಾಜದ ಅವಹೇಳನವನ್ನು ಹತ್ತಿಕ್ಕಿ ಆತ್ಮಸ್ಥೈರ್ಯ ಬೆಳೆಸಿಕೊಂಡು 'ನಾಯಿಕಸಾನಿ'ಯರಿಂದ ಕಷ್ಟಸಾಧ್ಯವಾದ ವಿಷಯ ಸಂಗ್ರಹಣೆಯನ್ನು ಮಾಡಿ ಉಪಯುಕ್ತ ಸಾಂಸ್ಕೃತಿಕ ದಾಖಲೆಯ ಪುಸ್ತಕವೊಂದನ್ನು ಕೊಟ್ಟಿದ್ದಾರೆ. ನಾಯಕಸಾನಿ ಪದ್ಧತಿಯ ಜೊತೆಗೆ 'ಗಂಗದಾಸಿ ಪದ್ಧತಿ'ಯ ವಿವರಗಳ ಆಳವಾದ ಅಧ್ಯಯನವನ್ನು ಕೊಟ್ಟಿರುವ ಲೇಖಕರು ಪ್ರಶಂಸೆಗೆ ಪಾತ್ರರಾಗಿದ್ದಾರೆ. ಈ ದೃಷ್ಟಿಯಿಂದ 'ನಾಯಿಕಸಾನಿ'. ಒಂದು ಗಮನಾರ್ಹ ಕೃತಿ.

ಮಾಡಿಕೊಂಡರೆ ಆತನಿಗೆ ಅಪವಾದ ಬರಬಹುದು. ಹೇಳದೆ ಇರಲು ಪ್ರಯತ್ನಿಸಿದರೆ ತನ್ನ ಅಪವಿತ್ರ (!) ವಾದ ದೇಹವನ್ನು ಆತನಿಗೆ ಒಪ್ಪಿಸುವ ಮನಸ್ಸಿಲ್ಲ- ಜೊತೆಗೆ ಮನೆಯತುಳಸೀಕಟ್ಟೆ ಕೂಡ ಆಕೆಯನ್ನು ಛೇಡಿಸಿ ಪಾವಿತ್ರ್ಯದ ಬಗ್ಗೆ ಕೆಣಕುತ್ತದೆ. ಆಕೆ ಕಾಫಿಯಲ್ಲಿ ಆಕಸ್ಮಾತ್‌ಬಿದ್ದ ಹಲ್ಲಿಯನ್ನು ಕಂಡು ಕೂಡಲೇ ಆ ವಿಷ ಕುಡಿದು ಸತ್ತು ಆಕಸ್ಮಾತ್ ಸತ್ತ ಹಾಗೆ ಮಾಡಿದಳು ಗಂಡನಾವರೂ ಕೊನೆಯವರೆಗೆ ಹೆಂಡತಿಗಾಗಿ ಪರಿತಪಿಸಿ ಕುದುರೆಯಾಗಿ ಕೊರಗುತ್ತಾ ಮುದುಕನಾಗುತ್ತಾನೆ !

ಇಲ್ಲಿ ಹೇಗೆ ಒಂದು ಕ್ರೂರವಾದ ಮನಸ್ಸು ಕೆಲಸ ಮಾಡಿದೆ ಪ್ರೇಕ್ಷಕರನ್ನು ಎಂಥ ದಾರಿಗೆ ಒಯ್ಯುತ್ತಿದೆ ಎಂಬುದನ್ನು ನಾನು ಮತ್ತೆ ವಿಶ್ಲೇಷಿಸಬೇಕಿಲ್ಲ.

ವಿಚಾರ ಸಂಕಿರಣವೊಂದರಲ್ಲಿ ನಮ್ಮ ಹಿರಿಯ ನಿರ್ದೇಶಕ ಎಂ. ಆರ್. ವಿಠಲ್ ಅವರು ಒಂದು ಹೇಳಿಕೆ ಕೊಟ್ಟರು. "ನಾನು ತೆಗೆದ ಮಿಸ್ ಲೀಲಾವತಿ ಚಿತ್ರದಲ್ಲಿಯ ನಾಯಕಿಗೆ ಕಾಮ ಹಸಿವಾದಾಗ ಊಟದ ಹಾಗೆ ಅದನ್ನು ಹಸಿ ಹಸಿಯಾಗಿ ತೋರಿಸದೆ ಗಂಭೀರವಾಗಿ ತೆಗೆದಿದ್ದೇನೆ" ಅಂದು.

"ಹಸಿವೆಯಾದರೂ ಯಾರೂ ಅಮೇಧ್ಯ ತಿನ್ನುವುದಿಲ್ಲ. ಆದ್ದರಿಂದ ಕಾಮದ ಅಗತ್ಯಕ್ಕೂ ಆಯ್ಕೆ ಇರುತ್ತದೆ. ಯಾವ ಹೆಣ್ಣೂ ಒಲ್ಲದವನನ್ನು ವರಿಸುವುದಿಲ್ಲ." ಎಂದು ವಾದ ಮಾಡಿದ ನಾನು ಅಂದು ಹಲವರ ಚೇಷ್ಟೆಗೆ ಗುರಿಯಾಗಿದ್ದೆ ಸಮಾರಂಭದ ಅನಂತರವೂ...

ಇನ್ನು ಈ ಚಿತ್ರರಂಗದಲ್ಲಿ ದುಡಿಯುತ್ತಿರುವ ಹೆಂಗಸರ ಸ್ಥಿತಿ ಉತ್ತಮ ಎನ್ನುವಂತಿಲ್ಲ. ಗಾಡ್ ಫಾದರ್‌ಗಳಿರುವ ಅಥವಾ 'ದೊಡ್ಡ'ವರಾಗಿರುವ ಕೆಲವರನ್ನುಳಿದು ಬೇರೆ 'ಪಾತ್ರಗಳ ಹೆಂಗಸರ ಸ್ಥಿತಿ ಅತ್ಯಂತ ಶೋಚನೀಯ. ಇವರಿಗೆ ಯಾವುದೇ ರಕ್ಷಣೆ ಇಲ್ಲ. ಸಂಭಾವನೆಯೂ ಸರಿಯಾಗಿ ಬರುವುದಿಲ್ಲ ಬಂದಿದ್ದರಲ್ಲಿ ಹಲವು ಕಮಿಷನ್‌ಗಳು.

ನಾವು ಅಸಂಘಟಿತ ಕಾರ್ಮಿಕರು ಎಂದು ಸದಾ ಅನುಕಂಪದಿಂದ ಮಾತಾಡುವ ಒಂದು ವರ್ಗ ಇಲ್ಲಿದೆ. ಈ ಜನರೇ ಈ ನಟಿಯರನ್ನು ಹಿಂಸಿಸುತ್ತಾರೆ. ಇಲ್ಲಿ ತನಗೆ ಒದಗಿದ ತೊಂದರೆ-ದಬ್ಬಾಳಿಕೆಯ ಔಟ್‌ಲೆಟ್ ಅನ್ನು ಈ ಹೆಂಗಸರನ್ನು ಹಿಂಸಿಸುವುದರಲ್ಲಿ ಪಡೆಯುತ್ತಾರೆಂಬುದೂ ನಿಜ.

ಊಟ-ತಿಂಡಿಯಲ್ಲೂ ಸಹ ಈ ಹೆಂಗಸರಿಗೆ ತೊಂದರೆ ದೂರು ಹೇಳಿದರೆ ಇವರ ಕಾಫಿ-ನೀರುಗಳಲ್ಲಿ ಏನೂ ಔಷಧಿ ಬೆರೆಸಿಕೊಟ್ಟು ತೊಂದರೆಗೆ ತಳ್ಳುತ್ತಾರೆ. ಏನೊ ಕಲ್ಪಿಸಿ ಅಪವಾದ ಬರುವ ಹಾಗೆ ಮಾಡುತ್ತಾರೆ.

ಇಷ್ಟೆಲ್ಲ ಇದ್ದೂ ಇವರೇಕೆ ಹೊರಗೆದ್ದು ಬರುವುದಿಲ್ಲ? ಸ್ವತಂತ್ರ ಜೀವನ ಮಾಡಲು ಸಾಧ್ಯವಿಲ್ಲವೆ ? ಎಂಬ ಪ್ರಶ್ನೆಗಳಿವೆ. ಹಾಗೆ ಹೊರಗೆ ಬಂದರೆ ಸಮಾಜದಲ್ಲಿ ಸ್ಥಾನವಿಲ್ಲ. ಬದುಕಿಗೆ ಬೇರೆ ದಾರಿ ಇಲ್ಲ ಎಂಬ ಮಾತು ಸಂಪೂರ್ಣವಾಗಿ ಒಪ್ಪಲಾಗುವುದಿಲ್ಲ. ಇಲ್ಲಿ ಗೃಹಿಣಿಯೊಬ್ಬಳು ರೂಢಿಗತ ಮೌಲ್ಯಗಳಿಗೆ ಒಗ್ಗಿಹೋಗಿ ಒಲ್ಲದ ಬದುಕನ್ನು ಸ್ವೀಕರಿಸಿ ಒಲ್ಲದ್ದು ಎಂದು ತಿಳಿದುಕೊಳ್ಳಲಾಗದ. ತಿಳಿದರೂ ಹೊರಬರಲಾಗದ ಸ್ಥಿತಿಯಲ್ಲಿರುವ ಬಗೆಗಿಂತ ಇದು ಭಿನ್ನವಲ್ಲವೇನೊ ! ಅಸಹಾಯಕ, ಅನಿವಾರ್ಯ, ಕೀರ್ತಿಕಾಮತನೆ, ಹಣಗಳಿಕೆ ಸಮಾಜದ ಆತಂಕ. ಈ ಎಲ್ಲ ಕಾರಣಗಳಿಗಿಂತ ಬೇರೆಯದೇ ಆದ ಮನೋಧರ್ಮವೊಂದು ಈ 'ಒಗ್ಗುವಿಕೆ'ಯ ಹಿಂದೆ ಇರಬೇಕು. ಬಹುಕಾಲದಿಂದ ಈ ಜನರ ನಡುವೆ ಇದ್ದು ಅವರ ಅಂತರಂಗದ ಅನೇಕ ಮಾತುಗಳಿಗೆ ಕಿವಿಯಾದ ನನಗೆ ಎಲ್ಲವನ್ನು ಈ ಲೇಖನದ ಮಿತಿಯಲ್ಲಿ ಹೇಳಲು ಸಾಧ್ಯವಾಗುತ್ತಿಲ್ಲ. ಆದರೆ ನಾವು ಈಗ ಆಲೋಚಿಸುತ್ತಿರುವ ರೀತಿಗಿಂತ ಬೇರೆಯಾದ ದಿಕ್ಕಿನ ಅಗತ್ಯ ಇದೆ ಎಂದು ಹೇಳಬಲ್ಲೆ. ಹೊರಗೆ ನಿಂತು ಚಳವಳಿ, ಕೂಗು, ವೇದಿಕೆಯ ಭಾಷಣಗಳಿಂದ ಪರಿಹಾರ ಇದಕ್ಕೆ ಕಂಡುಕೊಳ್ಳಲಾರವೇನೊ!

ಪೋಸ್ಟರ್ ಬಗ್ಗೆ, ಕ್ಯಾಬರೆ ಬಗ್ಗೆ ಹೇಳುತ್ತಾ ಶೋಷಣೆ ನಡೆದಿದೆ. ಇದಕ್ಕೆ ಇವರೇ ಕಾರಣ. ಜಾಗ್ರತರಾಗಿ ಎಂದು ಹೇಳುವುದಷ್ಟೇ ಸಮಸ್ಯೆಗೆ ಪರಿಹಾರ ಖಂಡಿತಾ ಅಲ್ಲ. ಇವಕ್ಕೆಲ್ಲ ಪುರುಷ ಮಾತ್ರವಲ್ಲ ಸ್ತ್ರೀಯೂ ಗ್ರಾಹಕಳು ಎಂಬುದನ್ನು ನಾವು ಕೈಬಿಡುವಂತಿಲ್ಲ. ●

ಆಕೆಯ ಗುಣಾತ್ಮಕ ಅಂಶ ಕೂಡಾ. ನಾಯಕ ನಟ ನಾಯಕರ ಹರವಾದ ಎದೆ—ಸ್ನಾಯುಭರಿತ ತೋಳುಗಳು ಸಾಹಸ ಪ್ರವೃತ್ತಿಯಂಥವು. ಹೆಣ್ಣುಗಳನ್ನು ಆಕರ್ಷಿಸುತ್ತವೇ ಇರುತ್ತವೆಯೆಂದೇಕೆ ಗುರುತಿಸಬಾರದು ?

ಜಯಮಾಲಿನಿ—ಸಿಲ್ಕ್‌ಸ್ಮಿತಾರ ತೆರೆದ ಮೈ—ಕುಣಿತ. ಸೂಕ್ಷ್ಮವಾದ ಭಾವ-ಭಂಗಿಗಳು ಮಾಡುವ ಅಪಾಯಕ್ಕಿಂತ ಹೆಚ್ಚಾಗಿ ನಮ್ಮ ನಾಯಕಿಯರು ತೋರುವ ಅರೆ ಬರೆ ಮೈಮಾಟ ಮಳೆಯಲ್ಲಿ ನೆನೆದು ಹಾಡುವ ಬಗೆ ಇತ್ಯಾದಿಗಳು ಹೆಚ್ಚು ಅಪಾಯಕಾರಿಯಾಗುತ್ತವೆ. ಏಕೆಂದರೆ ಅವು ಸುಲಭವಾಗಿ ಇತರರು ಅನುಕರಿಸುವಂಥವು. ಕ್ಯಾಬರೆ ನರ್ತಕಿಯ ಉಡುಗೆ ಯಾರೂ ಧರಿಸುವುದಿಲ್ಲ— ಹುಡುಗಿಯರಿಗೆ ಮಾಡಲು ಆಗುವುದು ಈ ಅಳುಮೋರೆ ಹೊತ್ತೇ ದೇಹವನ್ನು ಸಾಕಷ್ಟು ಎಕ್ಸ್‌ಪೋಸ್ ಮಾಡುವ ನಾಯಕಿಯದು ಎಂಬುದನ್ನು ಗುರುತಿಸಿ.

ಈ ಎಲ್ಲ ಕಾರಣಕ್ಕಾಗೇ ನಮ್ಮ ಆಕ್ಷೇಪ ಇಂಥ ಮೇಲು ಮೇಲಿನ ವಿಷಯಕ್ಕೆ ಇರಬೇಕೇ ಅಥವಾ ಒಟ್ಟಾರೆ ಚಿತ್ರವೊಂದು ಕಥೆ ಹೇಳುವ ರೀತಿಯತ್ತ-ಅದರ ಪರಿಣಾಮದತ್ತ ಇರಬೇಕೇ ಎಂಬುದನ್ನು ನಿರ್ಧರಿಸಿಕೊಳ್ಳಬೇಕಾಗುತ್ತದೆ. ಕ್ಯಾಬರೆ ಬಗ್ಗೆ ಆಕ್ಷೇಪ ಎತ್ತಿ ಲಗ್ಗೆ ಹಾಕುವ ನಮಗೆ ಆ ತರುಣಿಯರು ತಮ್ಮ ಬದುಕಿನಲ್ಲಿ ಒದಗಿದ ಕೆಲವು ಘಟನೆಗಳ—ಅದಕ್ಕೆ ಕಾರಣರಾದವರ ವಿರುದ್ಧ ಸೇಡು ತೀರಿಸಿಕೊಳ್ಳಲು ಈ ಮಾರ್ಗ ಹಿಡಿದ ಉದಾಹರಣೆಗಳಿವೆ ಎಂಬುದನ್ನು ನೆನಪಿನಲ್ಲಿಡಬೇಕಾಗುತ್ತವೆ. ಆ ಕ್ರಮವೇ ಸರಿ ಎಂಬ ಸಮರ್ಥನೆಯಲ್ಲ.

ಸಂದರ್ಶನಗಳಿಗೆ ಹೋದಾಗ ಎಲ್ಲರೂ ವಿಚಿತ್ರ ಸಿದ್ಧಾಂತಗಳನ್ನಿಟ್ಟು—ಅನಿವಾರ್ಯಗಳ ಕತೆ ಕಟ್ಟಿ—ತಾವು ಮಾತ್ರ 'ಪವಿತ್ರ'ವಾಗಿದ್ದೇವೆಂದೇ ಹೇಳಿಕೊಳ್ಳುತ್ತವೆ. ಹೇಳುವ-ಕೇಳುವ ಇಬ್ಬರಿಗೂ ಗೊತ್ತು ಅದು ಸುಳ್ಳಿನ ಸರಮಾಲೆ ಎಂದು. ಇಲ್ಲಿ ಮುಜುಗರವಾಗುವುದೆಂದರೆ ಇವರನ್ನೆಲ್ಲ ಕಾಡುತ್ತಿರುವ ಪಾವಿತ್ರ್ಯದ ಗೊಂದಲ !

ಎಲ್ಲ ಕ್ಯಾಬರೆ ನರ್ತಕಿಯರೂ ತಾವು ಸದ್ಗೃಹಿಣಿಯರಾಗಿದ್ದುದಾಗಿಯೂ ಗಂಡನ ಹಿಂಸೆ- ಅತ್ತೆಮನೆಯ ಕಿರುಕುಳ, ಮನೆ ಬಿಟ್ಟು ಹೊರಬರಬೇಕಾಗಿ ಬಂದ ಪರಿಸ್ಥಿತಿ- ಹೀಗೆ ಬಂದಾಗ ಯಾರೋ ಕಾರಣವಾಗಿ ಇಂಥ ವ್ಯಕ್ತಿಗಳಿಂದ ಬೇಕಾದದ್ದು ತಮ್ಮ ಮೇಲಿರುವ ಕುಟುಂಬದ ಜವಾಬ್ದಾರಿಗಳು ಬೇರೆ ಉದ್ಯೋಗ ಸಿಗಲಿಲ್ಲ. ಇತ್ಯಾದಿಯಾಗಿ ಹೋರಾಟ ಹೆಚ್ಚು ಕಡಿಮೆ ಎಲ್ಲರೂ ಒಂದೇ ಬಗೆಯ ಕತೆ ಹೇಳುತ್ತಾರೆ. ಹಾಗೆ ಕುಟುಂಬದ ಚೌಕಟ್ಟಿನಿಂದ ಹೊರಬಂದ ಹೆಣ್ಣು ಆಕಸ್ಮಾತ್ 'ಶೀಲಾ'ಪಹರಣಗೊಂಡ ಹೆಣ್ಣುಗಳು ಇದೇ ವೃತ್ತಿ ಮಾಡಬೇಕೆಂದು ಇಲ್ಲ. ಅಥವಾ ಹೆಚ್ಚು ಹಣ ಸುಲಭವಾಗಿ ಗಳಿಸಬಹುದು ಎಂಬ ಕೆಲವು ವ್ಯಾಖ್ಯಾನಗಳಲ್ಲಿ ಸತ್ಯ ದೂರವೇ ಅನ್ನಿಸುತ್ತದೆ.

ಚಿತ್ರ ನಟಿಯರು ಬೆತ್ತಲಾಗಲೂ ಸಿದ್ಧ—ಚುಂಬನಕ್ಕೂ ಸಿದ್ಧ ಎಂಬ ಹೇಳಿಕೆಯ ಮಾತಿನ ಪ್ರಸ್ತಾವಕ್ಕೆ ಬಂದರೆ ಇವೆಲ್ಲ ನಾವು ವಾಣಿಜ್ಯ ಚಿತ್ರಗಳ ಸಂಬಂಧವಾಗಿ ಎತ್ತುತ್ತಿರುವ ಟೀಕೆ. ನಮ್ಮ 'ಕಲಾತ್ಮಕ' ಎಂದು ಹೇಳಿಕೊಂಡ ಚಿತ್ರಗಳು ಜೋಡಿಸಿದ್ದ ಇಂಥ ದೃಶ್ಯಗಳು ಸಹಜತೆಯ ಮೊರೆ ಹೊರುತ್ತವೆ. ಸಂಸ್ಕಾರದ ಪ್ರಾಣೇಶಾಚಾರ್ಯರು ಚಂದ್ರಿಯ ತಲೆ ಗೂದಲು ಮೆಲ್ಲುವ ದೃಶ್ಯ ಹಾಗೇ ಇರಬೇಕೇಕೆ ? ಅಂಥದೊಂದು ಘಟನೆ ನಡೆಯಿತೆಂದು ಹೇಳಲು ಬೇರೆ ಮಾರ್ಗಗಳೇ ಇರಲಿಲ್ಲವೇ ? ಇನ್ನು 'ಪಿಂಡವಿದೆಕೊ ಮಾಂಸವಿದೆಕೊ' ಚಿತ್ರದ ಹಿಂದೆ-ಮುಂದೆ ನಡೆದ ಘಟನೆಗಳ ವಿವರ ನೆನಪಿಸಬೇಕಿಲ್ಲ. ಇಂಥಲ್ಲೆ ನಾವು ಅತ್ಯಂತ ಗಣ್ಯರೆಂದು ಕೊಂಡ ಜನ ಇದ್ದಾರೆಂದು ವ್ಯಾಖ್ಯಾನಿಸದೆ ಎಳೆಯುವ ನಾವು ವಾಣಿಜ್ಯ ರಂಗದ ಜನರನ್ನು ಆಕ್ಷೇಪಿಸುತ್ತಾ ಕೂರುತ್ತೇವೆ.

ನಾನು ಆಗಲೇ ಹೇಳಿದ ಹಾಗೆ ಕಥೆ—ತಿರುವು—ನಿರೂಪಣೆಗಳ ಬಗ್ಗೆ ನಾವು ಮಾತಾಡಬೇಕಾದ ಸಂದರ್ಭ ಇದು ಇತ್ತೀಚೆಗೆ ನಿರ್ದೇಶಕರೊಬ್ಬರು ನನ್ನ ಬಳಿ ತಮ್ಮ ಹೊಸ ಚಿತ್ರದ ಚಿತ್ರಕತೆ ಓದಿ ಹೇಳಿದರು. ಆ ಕತೆ ಹೀಗಿದೆ :

ನಾಯಕ—ನಾಯಕಿಯರದು ಅತೀವ ಪ್ರೇಮ. ಗಂಡ ಹೆಂಡತಿಯರಾದರು. ಆಕಸ್ಮಾತ್ ನಾಯಕಿ ಪುಂಡರಿಂದ ಅತ್ಯಾಚಾರಕ್ಕೆ ಒಳಗಾದಳು. ಪತಿಗೆ ವಿಷಯ ತಿಳಿಸಿದರೆ ಕ್ರುದ್ಧನಾಗಿ ಆ ಜನರನ್ನು ಕೊಲೆ ಮಾಡಿ ಹಂತಕನಾಗಿ ಜೈಲು ಸೇರಬಹುದು- ತಾನೇ ಆತ್ಮಹತ್ಯೆ

Statement About Ownership And Other Particulars About Newspaper ACHALA

FORM IV
(See Rule 8)

1.	Place of publication	Bangalore, Karnataka state
2.	Periodicity of its publication	Bi-Monthly
3.	Printers Name	Dr. G. Ramakrishna For ILA printers, Bangalore.
	Whether citizen of India if foreigner, state the country of origin	Yes
	Address	221, IV Main Road, Vyalikaval, Bangalore-3
4.	Publisher's name	Dr. G Ramakrishna for Jagruthi Mahila Adhyayana Kendra, Bangalore
	Whether citizen of India if foreigner, state the country of origin	Yes
	Address	221 IV Main Road, vyalikaval, Bangalore-3
5.	Editor's name	N. Gayathri
	Whether citizen of India if foreigner, state the country of origin	Yes
	Address	221, IV Main Road, Vyalikaval, Bangalore-3
6.	Name and Address of Individuals who own the Newspaper and partners or Shareholders holding more than one percent of the total capital	Jagruthi Mahila Adhyayana Kendra 221, vyalikaval, Bangalore 3

I, Dr. G. Ramakrishna, hereby declare that the particulars given above are true to the best of my knowledge and belief.

BANGALORE
Date : 1-3-1986

(sd) Dr. G. Ramakrishna
Signature of the publishers

ಚೂರು-ಪಾರು

ಅಪ್ಪನ ಕುರ್ಚಿಗೆ ಕುತ್ತು ತಂದ ಮಗಳ ವಿವಾಹ

ಏಳು ವರ್ಷದ ಮಗಳನ್ನು ನಾಲ್ಕು ವರ್ಷದ ಹುಡುಗನೊಂದಿಗೆ ವಿವಾಹ ಮಾಡಿ ಅವಳ ಭವಿಷ್ಯವನ್ನೆಲ್ಲ ಮೂಟೆಗಟ್ಟಿ ಮೂಲೆಗಿಡುವ ಪಿತಾಮಹರಿದ್ದಾರೆ. ಎಂದರೆ ಆಶ್ಚರ್ಯಪಡಬೇಕಿಲ್ಲ. ರಾಜಸ್ಥಾನದ ಮಂತ್ರಿ ಮಹೋದಯ ರಾಮ್‌ಸಿಂಗ್ ವಿಶ್ನೋಯಿ ತಮ್ಮ ಮಗಳು ಇಂದಿರಾಗೆ ಮಾಡಿದ್ದು ಇಷ್ಟೆ.—ಕಾನೂನು ಬಾಹಿರ ಬಾಲ್ಯ ವಿವಾಹ. ಮಗಳು ಸುಶಿಕ್ಷಿತಳಾಗಿ ಬೆಳೆದಾಗ, ಅವಿದ್ಯಾವಂತ ಬೆಪ್ಪು ಹುಡುಗನನ್ನು ಗಂಡನನ್ನಾಗಿ ಸ್ವೀಕರಿಸಲು ನಿರಾಕರಿಸಿದಳು. ಪರಿಣಾಮ, ತಂದೆಯಿಂದಲೇ ಅಮಾನುಷ ಚಿತ್ರಹಿಂಸೆ! ಸಹಾಯಕ್ಕೆ ಬಂದ ಸಮಾಜ ಸುಧಾರಕರಿಗೂ ಕೊಲೆಯ ಬೆದರಿಕೆ. ಹೀಗಿದ್ದೂ ಅಸೆಂಬ್ಲಿಯಲ್ಲಿ ಇದನ್ನು ತಂದೆ-ಮಗಳ ವೈಯಕ್ತಿಕ ವಿಷಯ ಎಂದು ಕಡೆಗಣಿಸಿ ವಿರೋಧ ಪಕ್ಷವೂ ಉಸಿರೆತ್ತಲಿಲ್ಲ. ಕಡೆಗೆ ಈ ಅನ್ಯಾಯಗಳಿಗೆ ಹೋರಾಡಲು ನಿಂತವರು ನೊಂದ ಮಹಿಳೆಯರೇ! ಬಹುಶಃ ರಾಜಸ್ಥಾನದ ಜಹಗೀರುದಾರಿ ಚರಿತ್ರೆಯಲ್ಲೇ ಮೊಟ್ಟ ಮೊದಲು ಮಹಿಳೆಯರು ಬೀದಿಗಿಳಿದು ಧ್ವನಿ ಎತ್ತಿ ರಾಮ್‌ಸಿಂಗ್ ರಾಜೀನಾಮೆ ನೀಡುವಂತೆ ಮಾಡಿದರು.

* * *

ಲೇಡೀಸ್ ಸ್ಪೆಷಲ್

ಈ ವರ್ಷದ ಜನವರಿಯಂದು 'ಇಂಡಿಯನ್ ಏರ್‌ಲೈನ್ಸ್' ಆಕಾಶಯಾನದ ಚರಿತ್ರೆಗೆ ಹೊಸ ಪುಟ ಸೇರಿಸಿದೆ. ಸಂಪೂರ್ಣ ಹೆಂಗಸರಿಂದಲೇ ನಡೆಸಲ್ಪಟ್ಟ, ಮಹಿಳಾ ತಂಡವಿದ್ದ ವಿಮಾನವೊಂದು ಸಿಲ್‌ಚೆರ್‌ನಿಂದ ಕಲ್ಕತ್ತಾಗೆ ಹಾರಿತು. ಪ್ರಪಂಚದಲ್ಲೇ ಮೊಟ್ಟ ಮೊದಲ ಬಾರಿ ಮಹಿಳೆಯರಿಂದಲೇ ನಿರ್ವಹಿಸಲ್ಪಟ್ಟ ಈ ವಿಮಾನ 'ಇಂಡಿಯನ್ ಏರ್ ಲೈನ್ಸ್'ಗೆ ಸೇರಿದ್ದು ಎಂಬುದು ಹೆಮ್ಮೆಯ ವಿಷಯ.

* * *

ಕೋರ್ಟಿನಲ್ಲಿ 'ಹಮಾರ ಬಂಟಿ'

ಮನ್ನು ಭಂಡಾರಿ ಹಿಂದಿ ಸಾಹಿತ್ಯದ ಹೆಸರಾಂತ ಲೇಖಕಿ. ಬದುಕನ್ನು ವಿಶ್ಲೇಷಿಸುವ ಗಂಭೀರ ಕಾದಂಬರಿಗಳಿಂದ ಪ್ರಸಿದ್ಧರಾದವರು ಇವರ "ಹಮಾರ ಬಂಟಿ" ಕಾದಂಬರಿಯಲ್ಲಿ, ವಿಚ್ಛೇದಿತ ಕುಟುಂಬದಲ್ಲಿ ಬೇರ್ಪಟ್ಟ ತಂದೆ ತಾಯಿಗಳ ನಡುವೆ ಸೆಳೆಯಲ್ಪಟ್ಟ 'ಬಂಟಿ'ಯ ಚಿತ್ರಣವಿದೆ. ಈ ಕಥೆಯನ್ನು, ಕಥೆಗೆ ನಿಷ್ಠವಾಗಿರುವಂತೆ, ಕಲಾತ್ಮಕವಾಗಿ ಚಿತ್ರಿಸುವುದಾಗಿ ಹಿಂದಿ ಚಿತ್ರ ನಿರ್ಮಾಪಕರೊಬ್ಬರು ಲೇಖಕಿಯಿಂದ ಅಪ್ಪಣೆ ಪಡೆದರು. ಆದರೆ ಮಾಡಿದ್ದೇ ಬೇರೆ. ಮಾಮೂಲು ಎಲ್ಲಾ ಮಸಾಲೆಯನ್ನು ತುಂಬಿ ಚಿತ್ರದ ಕಥೆಯನ್ನು ಕುಲಗೆಡಿಸಿದ್ದೂ ಆಯಿತು. ಕಾದಂಬರಿಗೆ ಯಾವ ರೀತಿಯಿಂದಲೂ ಬದ್ಧವಾಗಿರದ ಚಿತ್ರದ ಬಗ್ಗೆ ಕಿಡಿಕಿಡಿಯಾಗಿ ಮನ್ನು ಭಂಡಾರಿ ಚಿತ್ರ ನಿರ್ಮಾಪಕ ವಿರುದ್ಧ ಕೋರ್ಟಿಗೆ ಹೋಗಿದ್ದಾರೆ. ಈ ರೀತಿ ನಿರ್ಮಾಪಕರ ವಿರುದ್ಧ ಮೊಕದ್ದಮೆ ಹೂಡಿದ ಮೊಟ್ಟ ಮೊದಲ ಲೇಖಕಿ ಇವರು. ತೀರ್ಪು ಕಾದು ನೋಡಬೇಕು.

* * *

ಸಂಗ್ರಹ — **ನೇಮಿಚಂದ್ರ**

ಅಂಗವಿಕಲ ಮಗುವಿಗೆ ವಿಶೇಷ ಆರೈಕೆ ಅಗತ್ಯ

ನಿಮ್ಮ ಮಗು ಅಂಗವಿಕಲವಾಗಿದ್ದರೆ ನಿರಾಶರಾಗದಿರಿ.

ನಿಮ್ಮ ಮಗುವಿಗೆ ಸಾಧ್ಯವಿರುವ ಎಲ್ಲಾ ಕಾರ್ಯಗಳ ಬಗ್ಗೆ ಚಿಂತಿಸಿರಿ.

ಅಂಗವಿಕಲ ಮಗು ನಿಮ್ಮ ಪ್ರೋತ್ಸಾಹದಿಂದ ಹೆಚ್ಚು ಕಡಿಮೆ ಸ್ವಾಭಾವಿಕ ಜೀವನ ನಡೆಸಲು ಮತ್ತು ಅಂಗವಿಕಲರಿಗೆ ಹೊಂದಿಕೊಳ್ಳಲು ಸಾಧ್ಯವಿದೆ.

ಮನೋದೌರ್ಬಲ್ಯದ ಮಗುವಿನೊಂದಿಗೆ ತಾಳ್ಮೆಯಿಂದ ವರ್ತಿಸಿ. ತನ್ನ ಮನೋವಿಕಲತೆಯ ಜೀವನಕ್ಕೆ ಹೊಂದಿಕೊಳ್ಳಲು ಸಹಕರಿಸಿ.

ನೆನಪಿಡಿ : ಅಂಗವಿಕಲತೆ ಮಗುವಿನ ತಪ್ಪಲ್ಲ, ಎಷ್ಟಾದರೂ ಅದು ನಿಮ್ಮ ಮಗು ಅಲ್ಲವೇ ?

ನೆನಪಿಡಿ : ಪ್ರತಿಯೊಂದು ಮಗುವಿನಲ್ಲೂ ವಿಶೇಷ ಚೈತನ್ಯವಿದೆ. ಅದಕ್ಕೆ ನಿಮ್ಮ ಪ್ರೀತಿಯ ಅಗತ್ಯವಿದೆ.

ಹೆಚ್ಚಿನ ವಿವರಗಳಿಗೆ :
ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ಕರ್ನಾಟಕ ಸರ್ಕಾರ
ಬೆಂಗಳೂರು, ಇವರನ್ನು ಸಂಪರ್ಕಿಸಿರಿ